ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 30 ಶನಿವಾರ 2022

ಸಂಪುಟ: 43 | ಸಂಚಿಕೆ: 15 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ನೇಮಕಾತಿ ಪರೀಕ್ಷಾ ಅಕ್ರಮ

545 ಪಿಎಸ್ಐ ಆಯ್ಕೆ ಪಟ್ಟಿ ರದ್ದು



- ಮರು ಪರೀಕ್ಷೆಗೆ ಸರ್ಕಾರ ತೀರ್ಮಾನ
- ಪ್ರತಿಭಾವಂತ, ಪ್ರಾಮಾಣಿಕರ ಆಕ್ರೋಶ
- ಅಕ್ರಮದಲ್ಲಿ ಪಾಲ್ಗೊಂಡವರಿಗೆ ಅವಕಾಶವಿಲ್ಲ

ಸರ್ಕಾರದ ನಿರ್ಧಾರದಿಂದ ಆಘಾತಕ್ಕೊಳಗಾಗಿರುವ ಪ್ರತಿಭಾವಂತ ಹಾಗೂ ಪ್ರಾಮಾಣಿಕ ಅಭ್ಯರ್ಥಿಗಳು ಆಯ್ಕೆ ಪಟ್ಟಿ ರದ್ದು ಪಡಿಸದಂತೆ ಆಗ್ರಹಿಸಿದ್ದಾರೆ.

ಬೆಂಗಳೂರು, ಏ.29(ಕೆಎಂಶಿ)– ರಾಜ್ಯದಲ್ಲಿ 545 ಪಿಎಸ್ಐ ಹುದ್ದೆಗಳ ನೇಮಕಾತಿಗೆ ನಡೆಸಲಾಗಿದ್ದ ಪರೀಕ್ಷೆಯ ಆಯ್ಕೆ ಪಟ್ಟಿ ರದ್ದುಗೊಳಿಸಿ, ಮರು ಪರೀಕ್ಷೆ ನಡೆಸಲು ಸರ್ಕಾರ ತೀರ್ಮಾನಿಸಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ, ಈ ಹಿಂದೆ ಪರೀಕ್ಷೆ ಬರೆದಿದ್ದ ಎಲ್ಲಾ 54289 ಪರೀಕ್ಷಾರ್ಥಿಗಳು ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಗಿದೆ. ಆದರೆ, ಸಿಐಡಿಯಿಂದ ಬಂಧಿತರಾದ ಅಭ್ಯರ್ಥಿಗಳಿಗೆ ಮರು ಪರೀಕ್ಷೆಯಿಂದ ಹೊರಗಿಡಲಾಗುವುದು. ಮರು ಪರೀಕ್ಷೆಯ ದಿನಾಂಕವನ್ನು ಶೀಘ್ರದಲ್ಲೇ ನಿಗದಿ ಮಾಡಿ, ಪ್ರಕಟಿಸಲಾಗುವುದು ಎಂದರು.

ಮರು ಪರೀಕ್ಷೆ ನಿರ್ಧಾರದಿಂದ, ಅಕ್ರಮವಾಗಿ ನೇಮಕಾತಿ ಪಡೆಯಲು ಯತ್ನಿಸಿದ್ದವರ ಬದಲಿಗೆ ಪ್ರತಿಭಾವಂತ ಹಾಗೂ ಪ್ರಾಮಾಣಿಕ ಅಭ್ಯರ್ಥಿಗಳಿಗೆ ಅವಕಾಶ ದೊರಕಲಿದೆ ಎಂದು ಹೇಳಿದರು. ಪರೀಕ್ಷಾ ಅಕ್ರಮಗಳು ಒಂದಕ್ಕಿಂತ ಹೆಚ್ಚು ಕೇಂದ್ರಗಳಲ್ಲಿ ನಡೆದಿದೆ ಎಂಬ ಅನುಮಾನಗಳ ಹಿನ್ನೆಲೆಯಲ್ಲಿ ಮರು ಪರೀಕ್ಷೆ ನಡೆಸುವ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿದೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಇಂಥಹ ಅಕ್ರಮಗಳು ನಡೆಯದಂತೆ ತಡೆಯಲು ಕಠಿಣ ಕಾನೂನುಗಳನ್ನು ಜಾರಿಗೆ ತರುವ ಬಗ್ಗೆಯೂ ಆಲೋಚಿಸಲಾಗುವುದು ಎಂದು ನುಡಿದರು.

ಪಟ್ಟಿ ರದ್ದು ಬೇಡ

ಹುಬ್ಬಳ್ಳಿ, ಏ. 29– ಪಿಎಸ್ಐ ಆಯ್ಕೆ ಪಟ್ಟಿಯನ್ನು ರದ್ದು ಮಾಡಿ, ಮತ್ತೆ ಹೊಸದಾಗಿ ಪರೀಕ್ಷೆ ನಡೆಸುವ ರಾಜ್ಯ ಸರಕಾರದ ನಿರ್ಧಾರವನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ವಿರೋಧಿಸಿದ್ದಾರೆ. ಹುಬ್ಬಳ್ಳಿಯಲ್ಲಿ ತಮ್ಮನ್ನು ಭೇಟಿಯಾದ ಪಿಎಸ್ಐ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳ ಜತೆ ಚರ್ಚೆ ನಡೆಸಿದ ನಂತರ ಮಾಧ್ಯಮಕ್ಕೆ ಪ್ರತಿಕ್ರಿಯೆ ನೀಡಿದ



● 8ನೇ ಪುಟಕ್ಕೆ

ಪಿಎಸ್ಐ ನೇಮಕಾತಿ ಪರೀಕ್ಷೆ ಅಕ್ರಮದ ಪ್ರಮುಖ

ಆರೋಪಿ ದಿವ್ಯಾ ಹಾಗರಗಿ ಬಂಧನ



ಬೆಂಗಳೂರು, ಏ. 29– ಪಿಎಸ್ಐ ನೇಮಕಾತಿ ಪರೀಕ್ಷೆ ಹಗರಣಕ್ಕೆ ಸಂಬಂಧಿಸಿದಂತೆ ಕೊನೆಗೂ ಪ್ರಮುಖ ಆರೋಪಿ ದಿವ್ಯಾ ಹಾಗರಗಿ ಸಿಐಡಿ ಪೊಲೀಸರ ಖೆಡ್ಡಾಕ್ಕೆ ಬಿದ್ದಿದ್ದಾರೆ. ಅವರ ಜೊತೆಗೆ ಮೂವರು ಆರೋಪಿಗಳ ಬಂಧನವಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ.

ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಗೃಹ ಸಚಿವ ಆರಗ ಜ್ಞಾನೇಂದ್ರ, ಕರ್ನಾಟಕ ಸಿಐಡಿ ಪೊಲೀಸರು ದಿವ್ಯಾ ಹಾಗರಗಿ ಸೇರಿದಂತೆ ಮೂವರನ್ನು ಮಹಾರಾಷ್ಟ್ರದ ಪುಣೆಯಲ್ಲಿ ಬಂಧಿಸಿದ್ದಾರೆ ಎಂದರು. 545 ಪಿಎಸ್ಐ ಹುದ್ದೆಗಳ ನೇಮಕಾತಿಗೆ ನಡೆಸಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಕೆಲವರು ಮಾಡಿದ ಅಕ್ರಮದಿಂದಾಗಿ ಕಷ್ಟಪಟ್ಟು ಓದಿ ಪರೀಕ್ಷೆ ಬರೆದವರಿಗೆ ಅನ್ಯಾಯ ವಾಗಿದೆ. ಈ ವಿಷಯದಲ್ಲಿ ತುಂಬಾ ನೋವಾಗಿದೆ ಅನೇಕ ವರ್ಷ ಗಳಿಂದ ಸರ್ಕಾರದ ಪರೀಕ್ಷೆಗಳು ನಡೆಯುತ್ತಿದ್ದು ಆಗಾಗ ಹಗರಣಗಳು ಕೂಡ ಆಗುತ್ತಿವೆ. ಇದಕ್ಕೆ ಇತಿಶ್ರೀ ಹಾಡಬೇಕೆಂದು ಸರ್ಕಾರ ಸವಾಲಾಗಿ ತೆಗೆದುಕೊಂಡಿದೆ.

● 8ನೇ ಪುಟಕ್ಕೆ

11 ದಿನ ಸಿಐಡಿ ವಶಕ್ಕೆ

ಕಲಬುರಗಿ, ಏ. 29– ಪಿಎಸ್ಐ ನೇಮಕಾತಿ ಹಗರಣದ ಆರೋಪಿ, ಬಿಜೆಪಿ ನಾಯಕಿ ದಿವ್ಯಾ ಹಾಗರಗಿಯನ್ನು 11 ದಿನಗಳ ಕಾಲ ಸಿಐಡಿ ಪೊಲೀಸರ ವಶಕ್ಕೆ ನೀಡಲಾಗಿದೆ. ಮಹಾರಾಷ್ಟ್ರದ ಪುಣೆಯಲ್ಲಿ ಪೊಲೀಸರು ದಿವ್ಯಾ ಹಾಗರಗಿ ಬಂಧಿಸಿದ್ದರು.

ಶುಕ್ರವಾರ ಕಲಬುರಗಿಯ 3ನೇ ಜೆಎಂಎಫ್‌ಸಿ ಕೋರ್ಟ್ ಪಿಎಸ್ಐ ನೇಮಕಾತಿ ಹಗರಣದ ಆರೋಪಿಗಳಾದ ದಿವ್ಯಾ ಹಾಗರಗಿ ಸೇರಿದಂತೆ ಇತರ 6 ಮಂದಿ ಆರೋಪಿಗಳನ್ನು ಸಿಐಡಿ ವಶಕ್ಕೆ ನೀಡಿದೆ.


ಪುಣೆ ಉದ್ಯಮಿ ಆಶ್ರಯ

ಕಲಬುರಗಿ, ಏ. 29– ಪಿಎಸ್ಐ ನೇಮಕಾತಿ ಅಕ್ರಮದ ಮೂಲ ಕಿಂಗ್‌ಪಿನ್ ದಿವ್ಯಾ ಹಾಗರಗಿ ಕಳೆದ 15 ದಿನಗಳಿಂದ ಮಹಾರಾಷ್ಟ್ರದ ಪುಣೆಯ ಉದ್ಯಮಿ ಸುರೇಶ್ ಕಾಟೇಗಾಂವ್ ಆಶ್ರಯದಲ್ಲಿದ್ದಳು ಎಂದು ತಿಳಿದುಬಂದಿದೆ.

ದಿವ್ಯಾಗೆ ಆಶ್ರಯಕೊಟ್ಟ ಸುರೇಶ್ ಕಾಟೇಗಾಂವ್ ಮರುಳು ದಂಧೆ ಮಾಡುತ್ತಿದ್ದ. ಈಕೆಗೆ ಆಶ್ರಯ ನೀಡಿದ ಕಾರಣಕ್ಕೆ ಸಿಐಡಿ ಅಧಿಕಾರಿಗಳು ಬಂಧಿಸಿದ್ದಾರೆ. ಪ್ರಕರಣದಲ್ಲಿ ದಿವ್ಯಾ ಹಾಗರಗಿ, ಅರ್ಚನಾ, ಸುನಂದಾ ಸಹ ಬಂಧನವಾಗಿದ್ದು, ಶಾಂತಿಬಾಯಿ, ಸುರೇಶ್ ಕಾಟೇಗಾಂವ್ ಸೇರಿದಂತೆ ಮತ್ತೊಬ್ಬರನ್ನು ವಶಕ್ಕೆ ತೆಗೆದು ಕೊಂಡು ತೀವ್ರ ವಿಚಾರಣೆ ನಡೆಸುತ್ತಿದ್ದಾರೆ. ಪ್ರಕರಣದ ಪ್ರಮುಖ ಆರೋಪಿ ದಿವ್ಯಾ ಹಾಗರಗಿ ಕಲಬುರಗಿಯ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ

● 8ನೇ ಪುಟಕ್ಕೆ

ಸಿಎಂ ಬೊಮ್ಮಾಯಿ ದೆಹಲಿ ಭೇಟಿ: ಮತ್ತೆ ಸಚಿವಾಕಾಂಕ್ಷಿಗಳಲ್ಲಿ ಕುರ್ಚಿ ಕನಸು



ಬೆಂಗಳೂರು, ಏ. 29– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ರಾತ್ರಿ ದೆಹಲಿಗೆ ತೆರಳಿದ್ದು, ಸಚಿವಾಕಾಂಕ್ಷಿಗಳಲ್ಲಿ ಮತ್ತೆ ಸಂಪುಟ ಸೇರುವ ನಿರೀಕ್ಷೆ ಗರಿಗೆದರಿದೆ.

ಏ.30 ರಂದು ದೆಹಲಿಯಲ್ಲಿ ನಡೆಯಲಿರುವ ದೇಶದ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಹಾಗೂ ಮುಖ್ಯ ನ್ಯಾಯಮೂರ್ತಿಗಳ ಸಭೆಯಲ್ಲಿ ಭಾಗವಹಿಸಲು ಸಿಎಂ ಬೊಮ್ಮಾಯಿ ದೆಹಲಿಗೆ ತೆರಳಿದ್ದು, ಇದರ ನಡುವೆಯೇ ಪಕ್ಷದ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವ ಸಾಧ್ಯತೆ ಇದೆ. ಈ ವೇಳೆ ಸಚಿವ ಸಂಪುಟ ಪುನಾರಚನೆಯ ಬಗ್ಗೆ ಚರ್ಚಿಸುವ ನಿರೀಕ್ಷೆಯಲ್ಲಿ ಸಚಿವಾಕಾಂಕ್ಷಿಗಳಿದ್ದಾರೆ. ಈ ಮಧ್ಯೆ, ಸಿಎಂ ಬೊಮ್ಮಾಯಿ, ಪಕ್ಷದ ಹೈಕಮಾಂಡ್ ನಾಯಕರ ಭೇಟಿಗೆ ಸಮಯ ಕೇಳಿಲ್ಲ ಎಂದು ಹೇಳಿರುವುದು ಸಂಪುಟ

● 8ನೇ ಪುಟಕ್ಕೆ

ಮೇಯರ್ ಕೌನ್ಸಿಲ್ ಸಭೆ ನಡೆಸಬಹುದೇ... ಗದ್ದಲದ ನಡುವೆ

ಮನೆ ಮನೆಗೆ ಗ್ಯಾಸ್ ಪೈಪ್‌ಲೈನ್ ಯೋಜನೆಗೆ ಅನುಮೋದನೆ

- ವಿಪಕ್ಷ ಸದಸ್ಯರ ಭಾರೀ ಆಕ್ರೋಶ ● ಕಾರ್ಯಸೂಚಿ ಪಾಲಿಸದ್ದಕ್ಕೆ ವಾಗ್ವಾಳಿ ● ಅವಧಿ ಮುಗಿದರೂ ಮೇಯರ್ ಮುಂದುವರಿಕೆ; ಸಭೆ ನಡೆಸುವ ಸಂಬಂಧ ಆಯುಕ್ತರ ಸ್ಪಷ್ಟನೆ



ಮೇಯರ್ ಸುನಂದಾ ಪಾಲನೇತ್ರ ಅಧ್ಯಕ್ಷತೆಯಲ್ಲಿ ಶುಕ್ರವಾರ ಕೌನ್ಸಿಲ್ ಸಭೆ ನಡೆಯಿತು.

ಮೈಸೂರು, ಏ.29(ಎಸ್‌ಬಿಡಿ)– ಮೇಯರ್ ಸುನಂದಾ ಪಾಲನೇತ್ರ ಅಧ್ಯಕ್ಷತೆಯ ಕೌನ್ಸಿಲ್ ಸಭೆಯ ಸಿಂಧುತ್ವದ ಗದ್ದಲದ ನಡುವೆಯೇ ಮನೆ ಮನೆಗೆ ಗ್ಯಾಸ್ ಪೈಪ್‌ಲೈನ್ ಅಳವಡಿಸುವ ಯೋಜನೆಗೆ ಅನುಮೋದನೆ ಸಿಕ್ಕಿದೆ.

ಮೈಸೂರು ನಗರ ಪಾಲಿಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಶುಕ್ರವಾರ ಮೇಯರ್ ಸುನಂದಾ ಪಾಲನೇತ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ಕೌನ್ಸಿಲ್ ಸಭೆ ಆರಂಭದಿಂದ ಕಡೆವರೆಗೂ ಗದ್ದಲದ ಗೂಡಾಗಿತ್ತು.

ಪೂರ್ಣ ವರದಿ ಪುಟ –4

ಮೇ ಡೇ ರ್‍ಯಾಲಿಗೆ ಅನುಮತಿ ನೀಡಲು ಹೈಕೋರ್ಟ್ ನಕಾರ

ಬೆಂಗಳೂರು, ಏ. 29– ಸಂಚಾರ ದಟ್ಟಣೆಯಿಂದ ಜನರಿಗಾಗುವ ಕಿರಿಕಿರಿ ತಪ್ಪಿಸುವ ನಿಟ್ಟಿನಲ್ಲಿ ನಗರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲು ಅನುಮತಿ ನೀಡುವ ಪ್ರಶ್ನೆಯೇ ಇಲ್ಲ ಎಂದಿರುವ ಹೈಕೋರ್ಟ್, ಮೇ ದಿನದಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನವನ ಮತ್ತು ಟೌನ್‌ಹಾಲ್‌ನಿಂದ

● 8ನೇ ಪುಟಕ್ಕೆ

ಡೋಂಗಿ ಬಾಬಾನಿಂದ ಪತ್ನಿ ದೂರ: ಮನನೊಂದು ಪತಿ ಆತ್ಮಹತ್ಯೆ

ಡೆತ್‌ನೋಟ್‌ನಲ್ಲಿ ಬಾಬಾ, ಆತನ ಸಹಚರರ ವಿರುದ್ಧ ಆರೋಪ

ಗುಂಡ್ಲುಪೇಟೆ, ಏ.29(ಸೋಮ್‌ಜಿ)– ಮೈಸೂರಿನ ಡೋಂಗಿ ಬಾಬಾ ಮತ್ತು ಆತನ ಇಬ್ಬರು ಸಹಚರರು ಪತ್ನಿಯನ್ನು ತನ್ನಿಂದ ದೂರ ಮಾಡಿದ್ದಾರೆ ಎಂದು ಡೆತ್‌ನೋಟ್ ಬರೆದಿಟ್ಟು ವ್ಯಕ್ತಿಯೋರ್ವ ನೇಣಿಗೆ ಶರಣಾದ ಘಟನೆ ಗುಂಡ್ಲುಪೇಟೆ ಪಟ್ಟಣದ ಅಮೀರ್ ಜಾನ್ ರಸ್ತೆಯಿಂದ ವರದಿಯಾಗಿದೆ.



ಮಹಮ್ಮದ್ ಅಪ್ಸಾನ್

ಅಲ್ಲಿನ ನಿವಾಸಿ ಮಹಮ್ಮದ್ ಅಪ್ಸಾನ್(35) ಎಂಬಾತನೇ ಡೆತ್‌ನೋಟ್ ಬರೆದಿಟ್ಟು ನೇಣಿಗೆ ಶರಣಾದವನಾಗಿದ್ದು, ಈತ ಸುಮಾರು 10 ವರ್ಷದ ಹಿಂದೆ ಮೈಸೂರಿನ ಯುವತಿಯನ್ನು ವಿವಾಹವಾಗಿದ್ದು, ಈ ದಂಪತಿಗೆ 8 ವರ್ಷದ ಮಗನಿದ್ದಾನೆ.

● 8ನೇ ಪುಟಕ್ಕೆ

ಕುಡಿಯಲು ಹಣ ಕೊಡಲಿಲ್ಲವೆಂದು

ತೂಕದ ಬಟ್ಟಿನಿಂದ ಜಜ್ಜಿ ತಂಗಿ ಮಗು ಕೊಂದ ನಿರ್ದಯಿ

ಮೈಸೂರಿನ ಕನಕಗಿರಿಯಲ್ಲಿ ಅಮಾನುಷ ಕೃತ್ಯ, ಆರೋಪಿ ಪರಾರಿ

ಮೈಸೂರು, ಏ.29(ಆರ್‌ಕೆ)– ವಿಕೃತ ಮನಸ್ಸಿನ ವ್ಯಕ್ತಿಯೊಬ್ಬ ಕುಡಿಯಲು ಹಣ ಕೊಡಲಿಲ್ಲವೆಂದು, ಕೋಪದಿಂದ ಮಲಗಿದ್ದ ತನ್ನ ತಂಗಿಯ 8 ತಿಂಗಳ ಮಗುವನ್ನು ತೂಕದ ಬಟ್ಟಿನಿಂದ ಜಜ್ಜಿ ಕೊಲೆ ಮಾಡಿರುವ ಅಮಾನುಷ ಘಟನೆ ಮೈಸೂರಿನ ವಿದ್ಯಾರಣ್ಯಪುರಂ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.


ಆರೋಪಿ ರಾಜು

ಮೈಸೂರಿನ ಕನಕಗಿರಿಯ ಸರ್ಕಾರಿ ಶಾಲೆ ಸಮೀಪದ ನಿವಾಸಿ ರಾಜು(33), 8 ತಿಂಗಳ ಹೆಣ್ಣುಮಗುವನ್ನು ಕಬ್ಬಿಣದ ತೂಕದ ಬಟ್ಟಿನಿಂದ ಜಜ್ಜಿ ಕೊಲೆ ಮಾಡಿದ ಪಾಪಿ. ತರಕಾರಿ ಮಾರಿಕೊಂಡಿದ್ದ ಆತ ಕುಡಿತದ ಚಟಕ್ಕೆ ಬಲಿಯಾಗಿದ್ದು, ಅದಕ್ಕಾಗಿ ಹಣಕ್ಕೆ ತಂದೆ–ತಾಯಿಯನ್ನು ಪೀಡಿಸುತ್ತಿದ್ದ. ಹಣ ಕೊಡದಿದ್ದಾಗ ಹಲವು ಬಾರಿ ಮನೆಯವರ ಮೇಲೂ ಹಲ್ಲೆ ನಡೆಸಿದ್ದಲ್ಲದೇ ಇದೇ ವಿಷಯಕ್ಕೆ ಪ್ರತಿದಿನ ರಂಪಾಟ ಮಾಡುತ್ತಿದ್ದ.

ಇಂದು ಮಧ್ಯಾಹ್ನ ಮನೆಗೆ ಬಂದ ರಾಜು ಜಗಳ ತೆಗೆದು ಹಣಕ್ಕೆ ಒತ್ತಾಯಿಸಿ ಮತ್ತದೇ ರೌದ್ರಾವತಾರ ತಾಳಿದ್ದರಿಂದ ಹೆದರಿ ತಂಗಿ ರಮ್ಯ ಹಾಗೂ ಮನೆಯವರೆಲ್ಲರೂ ಹೊರಗೆ ಬಂದಿದ್ದಾರೆ. ರೋಷದಿಂದ ಕುದಿಯುತ್ತಿದ್ದ ಆತ ಹಣ ಸಿಗದಿದ್ದಾಗ ತೂಕದ ಬಟ್ಟಿನಿಂದ ಕೊಠಡಿಯಲ್ಲಿ ಮಲಗಿದ್ದ ಕಂದಮ್ಮನ ಹಣೆ ಭಾಗಕ್ಕೆ ಜಜ್ಜಿ ಪರಾರಿಯಾಗಿದ್ದಾನೆ

ಮಗು ಸ್ಥಳದಲ್ಲೇ ಅಸುನೀಗಿದೆ ಕಂದಮ್ಮ ಸಾವನ್ನಪ್ಪಿದ್ದನ್ನು ಕಂಡ ತಾಯಿ ರಮ್ಯ, ಅಜ್ಜಿ, ತಾತನ ರೋಧನೆ ಮುಗಿಲುಮುಟ್ಟಿತ್ತು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ವಿದ್ಯಾರಣ್ಯಪುರಂ ಠಾಣೆ ಇನ್ಸ್‌ಪೆಕ್ಟರ್ ರಾಜು ಹಾಗೂ ಸಿಬ್ಬಂದಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ತಲೆಮರೆಸಿಕೊಂಡಿರುವ ರಾಜುಗೆ ಶೋಧ ನಡೆಸುತ್ತಿದ್ದಾರೆ.

ಮಗು ಹತ್ಯೆ ವಿಷಯ ತಿಳಿಯುತ್ತಿದ್ದಂತೆಯೇ ತಂದೆ ನಾಗೇಂದ್ರ, ಸಂಬಂಧಿಗಳು, ನೆರೆಹೊರೆಯವರೆಲ್ಲರೂ ಹಸುಗೂಸಿನ ಶವ ಕಂಡು ಮಮ್ಮಲ ಮರುಗಿ, ಕಣ್ಣೀರು ಸುರಿಸಿದರು. ಕಳೆದ ಒಂದೂವರೆ ವರ್ಷದ ಹಿಂದಷ್ಟೇ ರಮ್ಯರನ್ನು ಮಂಡ್ಯ ತಾಲೂಕು ಸಾತನೂರಿನ ನಾಗೇಂದ್ರ ಎಂಬುವರಿಗೆ ಕೊಟ್ಟು ಮದುವೆ ಮಾಡಲಾಗಿತ್ತು.

ಬಾಣಂತನಕ್ಕೆಂದು ರಮ್ಯ ತಾಯಿ ಮನೆಗೆ ಬಂದಿದ್ದರು. ಪಾಪಿ ಸೋದರನೇ ತನ್ನ ಕಂದನನ್ನು ಕೊಂದಿದ್ದರಿಂದ ಆಘಾತಕ್ಕೀಡಾಗಿ ಆಕೆಯ ರೋಧನೆ ಮುಗಿಲು ಮುಟ್ಟಿತ್ತು.

ಯಾವ ರಾಜಕೀಯ ಪಕ್ಷ ಫ್ಲೆಕ್ಸ್ ಹಾಕಿದರೂ ದಂಡ ಹಾಕಿ

ಮೈಸೂರಿನಲ್ಲಿ ಸಂಸದ ಪ್ರತಾಪ್‌ಸಿಂಹ ಆಗ್ರಹ

ಮೈಸೂರು, ಏ.29(ಆರ್‌ಕೆ)– ಫ್ಲೆಕ್ಸ್ ಹಾಕಿ ಮೈಸೂರಿನ ಅಂದಗೆಡಿಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಿ, ಯಾವುದೇ ರಾಜಕೀಯ ಪಕ್ಷವಾಗಲೀ ದಂಡ ಹಾಕಿ ಎಂದು ಸಂಸದ ಪ್ರತಾಪ್ ಸಿಂಹ ಇಂದಿಲ್ಲಿ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.



ಮೈಸೂರಿನ ಡಿಸಿ ಕಚೇರಿ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಹಲವು ದಿನಗಳಿಂದ ಮೈಸೂರಲ್ಲಿ ಫ್ಲೆಕ್ಸ್ ಹಾವಳಿ ಜಾಸ್ತಿಯಾಗಿದ್ದು, ರಾಜಕೀಯ ಮುಖಂಡರ ಹುಟ್ಟುಹಬ್ಬ, ರಾಜಕೀಯ ಸಮಾರಂಭದ ಫ್ಲೆಕ್ಸ್ ಹಾಕಿರುವುದರಿಂದ ನಗರದ ಸೌಂದರ್ಯ ಹಾಳಾಗುತ್ತಿದೆ ಎಂದರು.

ಬೆಂಗಳೂರಲ್ಲೇ ಜಾಹಿರಾತು ಫಲಕ, ಕಟೌಟ್, ಫ್ಲೆಕ್ಸ್‌ಗಳನ್ನು ತೆಗೆಸಿದ್ದಾರೆ. ಆದರೆ ಮೈಸೂರಲ್ಲಿ ಏಕೆ ಅವಕಾಶ ಕೊಟ್ಟಿದ್ದಾರೆ? ಬಿಜೆಪಿ ಸೇರಿದಂತೆ ಯಾವುದೇ ರಾಜಕೀಯ ಪಕ್ಷಗಳು ಫ್ಲೆಕ್ಸ್ ಹಾಕಿದ್ದರೂ ದಂಡ ಹಾಕಿ ತೆರವುಗೊಳಿಸಿ ಎಂದು ಅಧಿಕಾರಿಗಳಿಗೆ ಅವರು ತಾಕೀತು ಮಾಡಿದರು. ಅದೇ ರೀತಿ ಫುಟ್‌ಪಾತ್ ಒತ್ತುವರಿಯನ್ನೂ ತೆರವುಗೊಳಿಸಬೇಕು. ನಾನೇ ಖುದ್ದಾಗಿ ಸ್ಥಳ ಪರಿಶೀಲನೆ ಮಾಡುತ್ತೇನೆ. ಜನರು ಓಡಾಡುವ ಸ್ಥಳದಲ್ಲಿ ವ್ಯಾಪಾರ ಮಾಡುವುದು ಸರಿಯಲ್ಲ. ಅವರು ನಿಗದಿತ ಸ್ಥಳದಲ್ಲಿ ವ್ಯಾಪಾರ ಮಾಡಬೇಕು. ಕೇವಲ 2 ಸಾವಿರ ಮಂದಿಗಾಗಿ ಲಕ್ಷಾಂತರ ಜನರಿಗೆ ತೊಂದರೆ ಕೊಡುವುದಲ್ಲದೇ ಮೈಸೂರು ನಗರವನ್ನು ಗಬ್ಬೆಬ್ಬಿಸುವುದು ಸರಿಯಲ್ಲ ಎಂದ ಅವರು, ಒಂದು ವಾರದೊಳಗಾಗಿ ಫುಟ್‌ಪಾತ್ ತೆರವುಗೊಳಿಸಬೇಕೆಂದು ಗಡುವು ನೀಡಿದ್ದಾರೆ.

ನಾಳೆ ಶ್ರೀ ಶಂಕರಾಚಾರ್ಯರ ಜಯಂತಿ ಪ್ರಯುಕ್ತ ವಿವಿಧ ಧಾರ್ಮಿಕ ಕೈಂಕರ್ಯ




ಮೈಸೂರು,ಏ.29(ಪಿಎಂ)– ಶ್ರೀಮಾತಾ ದುರ್ಗಾಪರಮೇಶ್ವರಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೇ 1ರಂದು ಶ್ರೀ ಶಂಕರಚಾರ್ಯರ ಜಯಂತಿ ಅಂಗವಾಗಿ ವಿವಿಧ ಧಾರ್ಮಿಕ ಕೈಂಕರ್ಯ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಸಂಸ್ಥಾಪಕ ಕಾರ್ಯಾಧ್ಯಕ್ಷ ಡಾ.ಕೆ.ಪಾರ್ಥನಾರಾಯಣ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಖಿಲ್ಲೆ ಮೊಹಲ್ಲಾದ ಶೃಂಗೇರಿ ಶ್ರೀಶಂಕರ ಮಠದ ಅಭಿನವ ಶಂಕರಾಲಯ ಆವರಣದಲ್ಲಿ ಅಂದು ಬೆಳಗ್ಗೆ 6.30ರಿಂದ ಮಧ್ಯಾಹ್ನ 12.30ರವರೆಗೆ ಧಾರ್ಮಿಕ ಕೈಂಕರ್ಯಗಳು ನಡೆಯಲಿವೆ. ಶ್ರೀ ಶಂಕರಾಚಾರ್ಯಾಷ್ಟೋತ್ತರ ಶತನಾಮಾವಳಿ, ಸಾಮೂಹಿಕ ಪಾರಾಯಣ, ಶ್ರೀ ಶಂಕರಾಚಾರ್ಯಕೃತ ಗುರ್ವಷ್ಟಕ, ನಿರ್ವಾಣಷಟ್ಕ, ದಶಶ್ಲೋಕೀ, ಲಲಿತಾ ಸಹಸ್ರನಾಮ ಸಾಮೂಹಿಕ ಪಾರಾಯಣ, ನವಚಂಡೀಯಾಗ ಹಾಗೂ ನಾಮಕೋಟಿ ಜಪಯಜ್ಞ ಎಂಬ ಧಾರ್ಮಿಕ ವಿಧಿವಿಧಾನಗಳು ನಡೆಯಲಿವೆ ಎಂದರು.

10.30ಕ್ಕೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಹಲವು ವಿದ್ವಾಂಸರನ್ನು ಗೌರವಿಸಲಾಗುವುದು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಸಾ.ರಾ.ಮಹೇಶ್, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಹಿರಿಯ ವಕೀಲ ಓ.ಶ್ಯಾಮ್ ಭಟ್, ಜಿಎಸ್‌ಎಸ್ ಗ್ರೂಫ್ ಆಫ್ ಕಂಪನಿಯ ಶ್ರೀಹರಿ, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಮಹರ್ಷಿ ಸ್ಕೂಲ್ ಅಧ್ಯಕ್ಷ ಭವಾನಿ ಶಂಕರ್ ಸೇರಿದಂತೆ ಹಲವು ಗಣ್ಯರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಟ್ರಸ್ಟ್‌ನ ಮಹಿಳಾ ಸಂಚಾಲಕಿ ಶಶಿಕಲಾ ಜಯಕುಮಾರ್, ನಿರ್ದೇಶಕ ಜಗದೀಶ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ನಾಳೆ ಅಂಬೇಡ್ಕರ್–ಬಸವಣ್ಣ ಜಯಂತಿ, ಕಾರ್ಮಿಕ ದಿನಾಚರಣೆ

ಮೈಸೂರು,ಏ.29(ಪಿಎಂ)– ಕುಂಬಾರ ಕೊಪ್ಪಲು ಅಂಬೇಡ್ಕರ್ ಬಡಾವಣೆಯ ಶ್ರೀ ಆದಿಶಕ್ತಿ ಕಾಳಿಕದೇವಿ ಸೇವಾ ಸಮಿತಿ ವತಿಯಿಂದ ಮೇ 1ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ, ಶ್ರೀ ಬಸವಣ್ಣನವರ 889ನೇ ಜಯಂತಿ ಹಾಗೂ ಕಾರ್ಮಿಕ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಜಿಲ್ಲಾ ಸಂಯೋಜಕ ಹೆಚ್.ಎಸ್.ಗಣೇಶ್‌ಮೂರ್ತಿ ತಿಳಿಸಿದರು.





ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 7ಕ್ಕೆ ಬಡಾವಣೆಯಲ್ಲಿ ಕಾರ್ಯಕ್ರಮ ನಡೆಯಲಿದೆ. ಸಂಸದ ವಿ.ಶ್ರೀನಿವಾಸ ಪ್ರಸಾದ್ ಉದ್ಘಾಟನೆ ನೆರವೇರಿಸಲಿದ್ದು, ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಎನ್.ಮಹೇಶ್ ಮುಖ್ಯ ಭಾಷಣ ಮಾಡಲಿದ್ದಾರೆ ಎಂದರು.

ಮಾಜಿ ಶಾಸಕ ವಾಸು, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಅಕ್ಕ ಐಎಎಸ್ ಅಕಾಡೆಮಿಯ ಡಾ.ಶಿವಕುಮಾರ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಬಿಜೆಪಿ ಮುಖಂಡ ವೈ.ವಿ.ರವಿಶಂಕರ್ ಸೇರಿದಂತೆ ಮತ್ತಿತರ ಗಣ್ಯರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಮೈಸೂರು ವಾಣಿಜ್ಯ ಹಾಗೂ ಕೈಗಾರಿಕೆ ಸಂಸ್ಥೆಯ ಅಧ್ಯಕ್ಷ ನಿಂಗರಾಜು ಅವರನ್ನು ಸನ್ಮಾನಿಸಲಾಗುವುದು. ಅಂದು ಬೆಳಗ್ಗೆ 11ಕ್ಕೆ ಪುರಭವನ ಆವರಣದಲ್ಲಿ ಬೃಹತ್ ಜಾಥಾಕ್ಕೆ ಮಾಜಿ ಸಂಸದ ಆರ್.ಧ್ರುವನಾರಾಯಣ್ ಚಾಲನೆ ನೀಡಲಿದ್ದಾರೆ. ಬಳಿಕ ವಿವಿಧ ಮಾರ್ಗಗಳ ಮೂಲಕ ಜಾಥಾ, ಕುಂಬಾರಕೊಪ್ಪಲು ತಲುಪಿ ಅಂತ್ಯಗೊಳ್ಳಲಿದೆ ಎಂದು ವಿವರಿಸಿದರು. ಸಮಿತಿ ಅಧ್ಯಕ್ಷ ಸರ್ವೇಶ್, ಮುಖಂಡ ಮಹದೇವ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಜೂ.21, ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆ

ಹಿರಿಯ ಆಯುಷ್ ಅಧಿಕಾರಿಗಳಿಂದ ಮೈಸೂರು ಅರಮನೆ, ವಸ್ತು ಪ್ರದರ್ಶನ, ರೇಸ್ ಕೋರ್ಸ್ ಪರಿಶೀಲನೆ

ನವದೆಹಲಿಯ ಪ್ರಧಾನಮಂತ್ರಿಗಳ ಕಚೇರಿ ನಿರ್ದೇಶನದ ನಂತರ ಅಂತಿಮ ನಿರ್ಧಾರ



ಮೈಸೂರು, ಏ.29(ಆರ್‌ಕೆ)– ಅಂತಾರಾಷ್ಟ್ರೀಯ ಯೋಗ ದಿನವನ್ನು ಜೂನ್ 21ರಂದು ಆಚರಿಸುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಆಯುಷ್ ಸಚಿವಾಲಯದ ಹಿರಿಯ ಅಧಿಕಾರಿಗಳು ಇಂದು ಮೈಸೂರಿನಲ್ಲಿ ಸ್ಥಳ ಪರಿಶೀಲನೆ ನಡೆಸಿದರು.

ಕೇಂದ್ರದ ಆಯುಷ್ ಸಚಿವಾಲಯದ ಕಾರ್ಯದರ್ಶಿ ವೈದ್ಯ ರಾಜೇಶ್ ಕೋಟೆಚ್, ಜಂಟಿ ಕಾರ್ಯದರ್ಶಿ ಕವಿತಾ ಗರ್ಗ್, ರಾಜ್ಯ ಆಯುಷ್ ಇಲಾಖೆ ಆಯುಕ್ತ ರಾಮಚಂದ್ರ ಅವರು ಮೈಸೂರು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ, ಆಯುಷ್ ಉಪನಿರ್ದೇಶಕಿ ಡಾ.ಸೀತಾಲಕ್ಷ್ಮೀ, ಅರಮನೆ ಮಂಡಳಿ ಉಪನಿರ್ದೇಶಕ ಸುಬ್ರಹ್ಮಣ್ಯ ಹಾಗೂ ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಮೈಸೂರು ಅರಮನೆ, ದೊಡ್ಡಕರೆ ಮೈದಾನದ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣ ಹಾಗೂ ಚಾಮುಂಡಿ ಬೆಟ್ಟ ತಪ್ಪಲಿನ ರೇಸ್‌ಕೋರ್ಸ್ ಮೈದಾನದಲ್ಲಿ ಸ್ಥಳ ಪರಿಶೀಲನೆ ನಡೆಸಿದರು.

ಪ್ರವೇಶ ದ್ವಾರಗಳು, ಆವರಣದ ಸಾಮರ್ಥ್ಯ, ಭದ್ರತಾ ವ್ಯವಸ್ಥೆ, ರಸ್ತೆ ಸಂಪರ್ಕ, ವಾಹನ ನಿಲುಗಡೆ ಸೌಲಭ್ಯ, ವೇದಿಕೆ ನಿರ್ಮಿಸಲು ಜಾಗದ ಲಭ್ಯತೆ, ಗಣ್ಯರು, ಅತಿಥಿಗಳು ಸುರಕ್ಷಿತ ನಿರ್ಗಮನ ಮತ್ತಿತರೆ ವಿಷಯಗಳ ಬಗ್ಗೆ ಮೈಸೂರು ಅಧಿಕಾರಿಗಳು ಆಯುಷ್ ಸಚಿವಾಲಯದ ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ಯೋಗ ಪ್ರದರ್ಶನಕ್ಕೆ ಲಭ್ಯವಿರುವ ಸ್ಥಳಾವಕಾಶ, ಸಾಮೂಹಿಕ ಯೋಗ ಪ್ರದರ್ಶನ ಶಿಷ್ಟಾಚಾರ ನಿರ್ವಹಿಸಲು ಬೇಕಾದಂತಹ ವ್ಯವಸ್ಥೆ, ಡ್ರೋಣ್ ಕ್ಯಾಮರಾದಿಂದ ವಿಡಿಯೋ ಚಿತ್ರೀಕರಣ ಮಾಡಲು ಅನುಕೂಲ, ಆಂಬುಲೆನ್ಸ್, ಅಗ್ನಿಶಾಮಕದಳ, ಪೊಲೀಸ್ ಅಧಿಕಾರಿ, ಸಿಬ್ಬಂದಿಗಳಿಂದ ಭದ್ರತೆಗೆ ಸಂಬಂಧಿಸಿದಂತೆ ಅಧಿಕಾರಿಗಳು, ಸಂಬಂಧಪಟ್ಟ ಇಲಾಖೆಗಳ ಸ್ಥಳೀಯ ಅಧಿಕಾರಿಗಳಿಂದ ವಿವರ ಪಡೆದರು.

ಜೂ.21ರಂದು ಬೆಳಗ್ಗೆ 7ರಿಂದ 8ಗಂಟೆವರೆಗೆ ಮೈಸೂರಿನಲ್ಲಿ ನಡೆಸಲು ಉದ್ದೇಶಿಸಿರುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಧಾನ ಸಾಮೂಹಿಕ ಯೋಗ ಪ್ರದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮೈಸೂರು ಸಂಸದ ಪ್ರತಾಪ್‌ಸಿಂಹ, ಉತ್ತರ ಕನ್ನಡ ಸಂಸದ ಅನಂತ ಕುಮಾರ್ ಹೆಗಡೆಯವರು ಪ್ರಧಾನಿ ನರೇಂದ್ರ ಮೋದಿಯವರನ್ನು ಆಹ್ವಾನಿಸಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಆಯುಷ್ ಸಚಿವಾಲಯದ ಅಧಿಕಾರಿಗಳು ಇಂದು ಮೈಸೂರಿನಲ್ಲಿ ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಮಾಹಿತಿ ಪಡೆದುಕೊಂಡರು.

ಅದಕ್ಕೂ ಮುನ್ನ ಅಧಿಕಾರಿಗಳು ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸ್ಥಳೀಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಈ ಹಿಂದೆ ಕೊರೊನಾ ಪರಿಸ್ಥಿತಿಗೂ ಮುನ್ನ ಮೈಸೂರಿನ ರೇಸ್ ಕೋರ್ಸ್ ಮತ್ತು ಅರಮನೆ ಆವರಣದಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಸಾಮೂಹಿಕ ಯೋಗ ಪ್ರದರ್ಶನ, ಪಾಲ್ಗೊಂಡಿದ್ದ ಯೋಗಾಸಕ್ತರ ಸಂಖ್ಯೆ, ಭದ್ರತಾ ವ್ಯವಸ್ಥೆ, ಗಣ್ಯರು, ಅತೀ ಗಣ್ಯರಿಗೆ ಮಾಡಿದ್ದ ವ್ಯವಸ್ಥೆ ಮತ್ತಿತರ ವಿಷಯಗಳ ಕುರಿತು ಮೈಸೂರು ಅಧಿಕಾರಿಗಳು ಪವರ್ ಪಾಯಿಂಟ್ ಪ್ರಸೆಂಟೇಷನ್ ಮೂಲಕ ಆಯುಷ್ ಸಚಿವಾಲಯದ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿ ವಿವರಿಸಿದರು.

ನವದೆಹಲಿಯಲ್ಲಿ ಪ್ರಧಾನ ಮಂತ್ರಿಗಳ ಕಚೇರಿಯಿಂದ ನಿರ್ದೇಶನ ಬಂದ ನಂತರ ಮೈಸೂರಿನಲ್ಲಿ ಸಾಮೂಹಿಕ ಯೋಗ ಪ್ರದರ್ಶನಕ್ಕೆ ಸೂಕ್ತ ಸ್ಥಳ ನಿಗದಿ ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಒಂದು ವೇಳೆ ಪ್ರಧಾನ ಮಂತ್ರಿಗಳ ಮೈಸೂರು ಭೇಟಿ ನಿಗದಿಯಾದರೆ ಅತೀ ಹೆಚ್ಚು ಮಂದಿ ಪಾಲ್ಗೊಳ್ಳಲು ಅವಕಾಶವಿರುವ 139.30 ಎಕರೆ ವಿಸ್ತಾರದ ರೇಸ್ ಕೋರ್ಸ್ ಆವರಣವನ್ನು ಸಾಮೂಹಿಕ ಯೋಗ ಪ್ರದರ್ಶನಕ್ಕೆ ಅಂತಿಮಗೊಳಿಸುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ.

ನಾಳೆ ಡಾ.ಶಿವಕುಮಾರ ಶ್ರೀಗಳ ಗುರುವಂದನಾ ಕಾರ್ಯಕ್ರಮ



ಮೈಸೂರು,ಏ.29(ಪಿಎಂ)– ವೀರ ವನಿತೆ ರಾಣಿ ಚೆನ್ನಮ್ಮ ಸ್ವಯಂ ಸೇವಾ ಸಂಸ್ಥೆ ವತಿಯಿಂದ ವಿವಿಧ ಸಂಘ–ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಮೇ 1ರಂದು ತುಮಕೂರು ಸಿದ್ಧಗಂಗಾ ಮಠದ ಲಿಂಗೈಕ್ಯ ಡಾ.ಶ್ರೀ ಶಿವಕುಮಾರ ಸ್ವಾಮೀಜಿಯರ 115ನೇ ಜಯಂತಿ ಮಹೋತ್ಸವದ ಅಂಗವಾಗಿ ಶ್ರೀಗಳ ಗುರುವಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸ್ವಯಂ ಸೇವಾ ಸಂಘದ ಉಪಾಧ್ಯಕ್ಷ ಕೆ.ವಿ.ಮಲ್ಲೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮಕೃಷ್ಣನಗರದ ಶ್ರೀ ಬಸವೇಶ್ವರ ಸೇವಾ ಸಮಿತಿ, ಕುವೆಂಪು ನಗರದ ವೀರಶೈವ ಸ್ನೇಹ ಬಳಗ, ಬೋಗಾದಿಯ ಬಸವ ಬಳಗ ಸೇವಾ ಟ್ರಸ್ಟ್, ಬಿಇಎಂಎಲ್ ಬಸವ ಸಮಿತಿ, ಕದಳಿ ಮಹಿಳಾ ವೇದಿಕೆ ಸಂಯುಕ್ತಾಶ್ರಯದಲ್ಲಿ ಅಂದು ಸಂಜೆ 6ಕ್ಕೆ ಮೈಸೂರಿನ ನಿವೇದಿತನಗರದ ಎಸ್.ಆರ್. ಸುಬ್ಬರಾವ್ ಉದ್ಯಾನವನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ವಸತಿ ಸಚಿವ ವಿ.ಸೋಮಣ್ಣ ಉದ್ಘಾಟಿಸಲಿದ್ದಾರೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸಲಹೆಗಾರ ನಾಡೋಜ ಡಾ.ಗೊ.ರು.ಚನ್ನಬಸಪ್ಪ ಗುರುವಂದನೆ ಸಲ್ಲಿಸಲಿದ್ದಾರೆ. ಅತಿಥಿಗಳಾಗಿ ಶಾಸಕರಾದ ಜಿ.ಟಿ.ದೇವೇಗೌಡ, ಸಿ.ಎಸ್.ನಿರಂಜನ ಕುಮಾರ್, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ ಪಾಲ್ಗೊಳ್ಳಲಿದ್ದಾರೆ. ಎಡಿಸಿ ಡಾ.ಬಿ.ಎಸ್. ಮಂಜುನಾಥ ಸ್ವಾಮಿ, ಮುಡಾ ಆಯುಕ್ತ ಡಾ.ಡಿ.ಬಿ. ನಟೇಶ್, ಮೈಸೂರು ತಹಸೀಲ್ದಾರ್ ಬಿ.ಎನ್.ಗಿರೀಶ್, ಪಾಲಿಕೆ ಸದಸ್ಯೆ ನಿರ್ಮಲಾ ಹರೀಶ್, ಮಾಜಿ ಸದಸ್ಯ ಜೆ.ಎಸ್.ಜಗದೀಶ್ ಉಪಸ್ಥಿತರಿರಲಿದ್ದು, ಸ್ವಯಂ ಸೇವಾ ಸಂಘದ ಅಧ್ಯಕ್ಷ ಎಲ್.ವಿ.ಲೋಕೇಶ್‌ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಶ್ರೀಗಳ ಪುತ್ಥಳಿ ಮೆರವಣಿಗೆ: ಇದಕ್ಕೂ ಮುನ್ನ ಅಂದು ಮಧ್ಯಾಹ್ನ 3ಕ್ಕೆ ಶಿವಕುಮಾರ ಶ್ರೀಗಳ ಪುತ್ಥಳಿ ಮೆರವಣಿಗೆ ನಡೆಯಲಿದೆ. ಕುವೆಂಪುನಗರದ ಡಾ.ಶ್ರೀ ಶಿವಕುಮಾರ ಸ್ವಾಮೀಜಿಯವರ ವೃತ್ತದಿಂದ ನಿವೇದಿತ ನಗರದ ಎಸ್. ಆರ್.ಸುಬ್ಬರಾವ್ ಉದ್ಯಾನವನವರೆಗೆ ನಡೆಯುವ ಮೆರವಣಿಗೆಗೆ ಸಿದ್ಧಗಂಗಾ ಮಠದ ಪೀಠಾಧ್ಯಕ್ಷ ಶ್ರೀ ಸಿದ್ಧಲಿಂಗ ಸ್ವಾಮೀಜಿ ಚಾಲನೆ ನೀಡಲಿದ್ದಾರೆ. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಶಾಸಕ ಎಸ್.ಎ. ರಾಮದಾಸ್, ಸಂಸದ ಪ್ರತಾಪ್ ಸಿಂಹ ಸೇರಿದಂತೆ ಮತ್ತಿತರ ಗಣ್ಯರು ಹಾಜರಿರುವರು. ನಂದಿಧ್ವಜ, 115 ಪೂರ್ಣಕುಂಭ ಕಳಶ, ವೀರಗಾಸೆ, ಡೊಳ್ಳುಕುಣಿತ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಯಲಿದೆ ಎಂದು ಹೇಳಿದರು.

ಸ್ವಯಂ ಸೇವಾ ಸಂಘದ ಪ್ರಧಾನ ಸಂಚಾಲಕ ಕೆ.ಎಸ್.ಮಹದೇವಪ್ರಸಾದ್, ಪ್ರಧಾನ ಕಾರ್ಯದರ್ಶಿ ಎ.ಪಿ.ವಿರೂಪಾಕ್ಷ, ಉಪಾಧ್ಯಕ್ಷ ವಸಂತಕುಮಾರ್, ನಿರ್ದೇಶಕರಾದ ಕಾನ್ಯ ಶಿವಮೂರ್ತಿ, ಎಂ.ಚಂದ್ರಶೇಖರ್ ಗೋಷ್ಠಿಯಲ್ಲಿದ್ದರು.

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು, ಏ.29–ಕುರುಹಿನಶೆಟ್ಟಿ ಕೇಂದ್ರ ಸಂಘವು ಪ್ರತಿ ವರ್ಷದಂತೆ 2020–21ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಮತ್ತು 2ನೇ ಪಿಯುಸಿಯಲ್ಲಿ ಶೇಕಡ 85ಕ್ಕಿಂತ ಅಧಿಕ ಅಂಕ ಗಳಿಸಿ ತೇರ್ಗಡೆ ಹೊಂದಿರುವ ಕುರುಹಿನಶೆಟ್ಟಿ ಜನಾಂಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನಿಸಿದೆ.

ಆಸಕ್ತ ವಿದ್ಯಾರ್ಥಿಗಳು ಹೆಚ್ಚಿನ ವಿವರಗಳಿಗೆ ಸ್ಥಳೀಯ ಕುರುಹಿನಶೆಟ್ಟಿ ಸಂಘವನ್ನು ಸಂಪರ್ಕಿಸುವುದು. ಇಲ್ಲವೆ ಕೇಂದ್ರ ಸಂಘದ ವೆಬ್‌ಸೈಟ್ www.kuruhinasettysanga.org. 15–05–2022ರೊಳಗೆ ಕುರುಹಿನಶೆಟ್ಟಿ ಕೇಂದ್ರ ಸಂಘ, ನಂ.5, 'ಸಾಕಮ್ಮ ಭವನ', ದ್ವಾರಕಾನಾಥ್ ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು–560 004, ಮೊ.ಸಂ.9380707501, ದೂ.ಸಂ.080–22425746 ಇಲ್ಲಿ ಅರ್ಜಿ ಸಲ್ಲಿಸುವುದು.

ಅಂಬೇಡ್ಕರ್ ಭಾರತ ಕಂಡ ಮಹಾನ್ ವ್ಯಕ್ತಿ

ಶಾಸಕ ಜಿ.ಟಿ.ದೇವೇಗೌಡ ಅಭಿಮತ



ಮೈಸೂರು, ಏ.29–ಸೃಜನಶೀಲ ವ್ಯಕ್ತಿ ಎಂದೇ ಹೆಸರಾಗಿದ್ದ ಡಾ. ಅಂಬೇಡ್ಕರ್ ಅವರು ಭಾರತ ಕಂಡ ಮಹಾನ್ ಶಕ್ತಿ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಮೈಸೂರು ತಾಲೂಕಿನ ಬೊಮ್ಮನಹಳ್ಳಿ ಗ್ರಾಮದಲ್ಲಿ ನಡೆದ ಡಾ. ಬಿ.ಆರ್ ಅಂಬೇಡ್ಕರ್ ಅವರ 131ನೇ ಜಯಂತಿ ಹಾಗೂ, ಶಾಲಾ ಕಟ್ಟಡದ ಉದ್ಘಾಟನೆ, ಶುದ್ಧ ಕುಡಿಯುವ ನೀರಿನ ಘಟಕದ ಶಂಕುಸ್ಥಾಪನೆ, ಉದ್ಯಾನವನಕ್ಕೆ ಕಾಂಪೌಂಡ್ ನಿರ್ಮಾಣಕ್ಕೆ ಚಾಲನೆ ನೀಡಿ ಮಾತನಾಡಿದರು.

ಅಂಬೇಡ್ಕರ್ ಅವರು ಯಾರನ್ನೂ ಅವಲಂಬಿಸದೆ ಕಷ್ಟ ಪಟ್ಟು ಏಕಾಂಗಿ ಹೋರಾಟ ಮಾಡಿದವರು. ವಿಶ್ವದಲ್ಲೇ ಅತ್ಯುತ್ಕೃಷ್ಟ ಸಂವಿಧಾನವನ್ನು ನಮ್ಮ ಭಾರತ ಹೊಂದಿದೆ ಎಂದರೆ ಅದಕ್ಕೆ ಡಾ. ಬಿ. ಆರ್. ಅಂಬೇಡ್ಕರ್ ಅವರೇ ಪ್ರಧಾನ ಶಿಲ್ಪಿ ಎಂದರು.

ಸಮಾನತೆಯ ಕಣ್ಣು ಎಂದರೆ ಅದು ಡಾ. ಬಿ.ಆರ್ ಅಂಬೇಡ್ಕರ್ ಅವರು. ಎಲ್ಲಾ ಧರ್ಮೀಯರೂ ಒಂದೇ ಎಂದು ಸಾರಿದ ಮಹಾನ್ ವ್ಯಕ್ತಿ ಇವರ ಬದುಕಿನಂತೆ ನಾವು ಸ್ವಾಭಿಮಾನದಿಂದ ಬದುಕಬೇಕು. ದ್ವೇಷ, ಜಗಳವಿಲ್ಲದೇ ಎಲ್ಲಾ ಒಗ್ಗಟ್ಟಿನಿಂದ ಬಾಳಬೇಕು ಎಂದು ಹೇಳಿದರು. ಅನ್ಯಾಯ, ಅಸಮಾನತೆ ಹಾಗೂ ಶೋಷಣೆಗಳ ವಿರುದ್ಧ ಹೋರಾಡಿದ ಡಾ. ಬಿ. ಆರ್. ಅಂಬೇಡ್ಕರ್ ಅವರ ಚಿಂತನೆಗಳು ಇಂದಿಗೂ ಪ್ರಸ್ತುತ. ದಮನಿತರ ದನಿಯಾಗಿ, ಶೋಷಿತರಿಗೆ ಕಿವಿಯಾಗಿ, ಅವರೆಲ್ಲರಿಗೂ ಸ್ವಾಭಿಮಾನದ ಬದುಕಿನ ದಾರಿ ತೋರಿಸಿದ ಧೀಮಂತ ನಾಯಕ ಡಾ. ಅಂಬೇಡ್ಕರ್ ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ನಾಗವಾಲ ಗ್ರಾಮ ಪಂಚಾಯಿತಿ ಅಧ್ಯಕ್ಷ ನಾಗವಾಲ ನರೇಂದ್ರ ತಾ.ಪಂ. ಮಾಜಿ ಉಪಾಧ್ಯಕ್ಷ ಎನ್.ಬಿ.ಮಂಜು, ವಿಜಯನಗರ ಮಂಜು, ಕುಮಾರ್, ಗ್ರಾಮ ಪಂಚಾಯಿತಿ ಸದಸ್ಯರು, ಮುಖಂಡರು ಸೇರಿದಂತೆ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.04.2022 ಶನಿವಾರ, ಮಳೆ ನಕ್ಷತ್ರ : ಭರಣಿ 27.04.2022 ರಿಂದ 10.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ
ತಿಥಿ: ಅಮಾವಾಸ್ಯೆ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಸುಯೋಗ್ ಆಸ್ಪತ್ರೆ, ಮೈಸೂರು ನ್ಯೂರಾಲಜಿಕಲ್ ಸೊಸೈಟಿ :** ನ್ಯೂರೋ–ಸಿಎಂಇ–2022 ಸ್ಟೆಪ್‌ಅಪ್, ಉದ್ಘಾಟನೆ : ಆದಿಚುಂಚನಗಿರಿ ವಿವಿ ಕುಲಪತಿ ಡಾ. ಎಂ.ಎ. ಶೇಖರ್, ಪ್ರಾಸ್ತಾವಿಕ ನುಡಿ : ಡಾ. ಜಾಕೋಬ್ ಪಿ. ಅಲಾಪ್ಪತ್, ಅಧ್ಯಕ್ಷತೆ : ಡಾ. ಟಿ.ಎಸ್. ವಾಸನ್, ಮುಖ್ಯ ಅತಿಥಿಗಳು : ಡಾ. ಎಸ್. ಹರ್ಷ, ಡಾ. ರಮೇಶ್, ಐಎಂಎ ಮೈಸೂರು ಚಾಪ್ಟರ್ ಅಧ್ಯಕ್ಷೆ, ಡಾ. ಸುಜಾತ ರಾವ್, ಸ್ಥಳ: ಹೋಟೆಲ್ ರುಚಿ ದಿ ಪ್ರಿನ್ಸ್, ಹುಣಸೂರು ರಸ್ತೆ, ಬೆಳಗ್ಗೆ 10ರಿಂದ.

■ **ಬೆಂಗಳೂರು ಸ್ಟೈಲ್ ಸ್ಟೋರ್ :** ಇಂಡಿಯನ್ ಲೈಫ್‌ಸ್ಟೈಲ್ ಎಕ್ಸಿಬಿಷನ್, ಆಭರಣ, ಉಡುಪು ಜೀವನೋಪಯೋಗಿ ಸಾಮಗ್ರಿಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ಬೆಳಗ್ಗೆ 10.30 ರಿಂದ.

■ **ಗೃಹಶೋಭೆ ಇಂಟರ್‌ನ್ಯಾಷನಲ್ ಟ್ರೇಡ್ ಫೇರ್ :** ಗೃಹಶೋಭೆ ಜೀವನ ಶೈಲಿ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಗ್ರೌಂಡ್, ಬೆಳಗ್ಗೆ 11ರಿಂದ.

■ **ಸಮಾನತೆ, ಸ್ವಾಭಿಮಾನ, ಸ್ವಾವಲಂಬನೆ ಪ್ರತಿಷ್ಠಾನ :** ಡಾ. ಬಿ.ಆರ್. ಅಂಬೇಡ್ಕರ್ ಅವರ 131ನೇ ಜನ್ಮ ದಿನೋತ್ಸವ ಅಂಗವಾಗಿ ಡಾ. ಬಿ.ಆರ್. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಕುರಿತು ವಿಶೇಷ ಉಪನ್ಯಾಸ, ಪ್ರಾಸ್ತಾವಿಕ ಭಾಷಣ : ಮೈಸೂರು ವಿವಿ ಕಾನೂನು ಪ್ರಾಧ್ಯಾಪಕ ಪ್ರೊ. ಸಿ. ಬಸವರಾಜು, ಉದ್ಘಾಟನೆ : ಸಂಸದ ವಿ. ಶ್ರೀನಿವಾಸಪ್ರಸಾದ್, ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ. ಎಂ. ಉಮಾಪತಿ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿವೃತ್ತ ಪ್ರಾಧ್ಯಾಪಕ ಡಾ. ನೀಲಗಿರಿ ತಳವಾರ, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ಪದವೀಧರರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಕೇಂದ್ರ ಶಿಕ್ಷಣ ಮತ್ತು ವಿದೇಶಾಂಗ ರಾಜ್ಯ ಸಚಿವ ಡಾ. ರಾಜ್ ಕುಮಾರ್ ರಂಜನ್ ಸಿಂಗ್, ಗೌರವ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್. ನಾಗೇಂದ್ರ, ಅಧ್ಯಕ್ಷತೆ : ಜೆಎಸ್‌ಎ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ಜ್ಯೋತಿ ಪ್ರಕಾಶನ, ಸಾಹಿತ್ಯ ದಾಸೋಹಿಗಳ ಸಂಸ್ಥೆ :** ಎಂ.ಎಸ್. ರುದ್ರಪ್ಪನವರ ಮನದಾಳದ ಮಾತು ಪುಸ್ತಕ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಸಾಹಿತ್ಯ ದಾಸೋಹ ರುವಾರಿ ಎಂ.ಆರ್. ಆನಂದ್, ಕೃತಿ ಬಿಡುಗಡೆ : ಹಿರಿಯ ಲೇಖಕಿ ಕೆರೋಡಿ ಎಂ. ಲೋಲಾಕ್ಷಿ, ಉಪಸ್ಥಿತರು : ಕೃತಿ ಲೇಖಕ ಎಂ.ಎಸ್. ರುದ್ರಪ್ಪ, ಸ್ಥಳ: ನೇಗಿಲಯೋಗಿ ಸಭಾಂಗಣ, ಕೋರ್ಟ್ ಮುಂಭಾಗ, ಕುವೆಂಪುನಗರ, ಮಧ್ಯಾಹ್ನ 12.45ಕ್ಕೆ.

■ **ಪರಿಶಿಷ್ಟ ಜಾತಿ ನಾಗರಿಕ ಕ್ಷೇಮಾಭಿವೃದ್ಧಿ ಸಂಘ, ಡಾ. ಬಿ.ಆರ್. ಅಂಬೇಡ್ಕರ್ ಸಂಘಟನೆಗಳು :** ಡಾ. ಬಿ.ಆರ್. ಅಂಬೇಡ್ಕರ್‌ರವರ 131ನೇ ಜನ್ಮ ದಿನಾಚರಣೆ ಸಮಾರಂಭ, ಸಾನ್ನಿಧ್ಯ : ಉರಿಲಿಂಗಿಪೆದ್ದಿ ಮಠದ ಮಠಾಧಿಪತಿ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ : ಕರ್ನಾಟಕ ಉಚ್ಚ ನ್ಯಾಯಾಲಯ ವಿಶ್ರಾಂತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್‌ದಾಸ್, ಅಧ್ಯಕ್ಷತೆ : ಪರಿಶಿಷ್ಟ ಜಾತಿ ನಾಗರಿಕ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಿ. ಬೋರಯ್ಯ, ಮುಖ್ಯ ಅತಿಥಿಗಳು : ಸಾಹಿತಿ ಪ್ರೊ. ಅರವಿಂದ ಮಾಲಗತ್ತಿ, ಸ್ಥಳ: ಸಾಮ್ರಾಟ್ ಕಲ್ಯಾಣ ಮಂಟಪ, ಕುವೆಂಪುನಗರ, ಸಂಜೆ 5.30ಕ್ಕೆ.

■ **ಮೈಸೂರು ಉತ್ಸವ :** ಮುಖ್ಯ ಅತಿಥಿಗಳು : ಶಾಸಕರಾದ ಎಸ್.ಎ. ರಾಮದಾಸ್, ಎಲ್. ನಾಗೇಂದ್ರ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ :** ದಿವಂಗತ ಎಂ. ಗೋವಿಂದರಾವ್ ಮತ್ತು ರಮಾಬಾಯಿ ಸ್ಮರಣಾರ್ಥ ಡಾ. ಎಂ. ಜಗನ್ನಾಥ ಶೆಣೈ ಪುದುವಟ್ಟು ಕಾರ್ಯಕ್ರಮ, ಯಕ್ಷಗಾನ 'ಶ್ರೀಕೃಷ್ಣ ಲೀಲಾಮೃತಮ್' ಪ್ರದರ್ಶನ, ಉದ್ಘಾಟನೆ : ಮಂಗಳೂರು ಗಣೇಶ ಬೀಡಿ ವರ್ಕ್ಸ್ ಮ್ಯಾನೇಜಿಂಗ್ ಪಾರ್ಟನರ್ ಡಾ. ಎಂ. ಜಗನ್ನಾಥ ಶೆಣೈ, ಮುಖ್ಯ ಅತಿಥಿಗಳು : ವಿಜಯ ಫೌಂಡೇಷನ್ ಮ್ಯಾನೇಜಿಂಗ್ ಟ್ರಸ್ಟಿ ಡಾ. ಬಿ.ಆರ್.ಪೈ, ಅಧ್ಯಕ್ಷತೆ : ಶ್ರೀ ಕೃಷ್ಣಗಾನಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸ್, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6ಕ್ಕೆ.

■ **ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಓವೈಹೆಚ್‌ಎಸ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಐಶ್ವರ್ಯ ಫೌಂಡೇಷನ್, ಪುಣ್ಯಕೋಟಿ ಸೇವಾ ಟ್ರಸ್ಟ್ :** ನಾಡೋಜ ಮತ್ತು ಸಹಕಾರ ರತ್ನ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ, ಗೌರವ ಪುರಸ್ಕೃತರು : ನಾಡೋಜ ಗೌರವ ಪ್ರೊ. ಭಾಷ್ಯಂ ಸ್ವಾಮೀಜಿ, ಪ್ರೊ. ಟಿ.ವಿ. ವೆಂಕಟಾಚಲಶಾಸ್ತ್ರಿ, ಸಹಕಾರ ರತ್ನ ಪುರಸ್ಕೃತರು : ಮಾಜಿ ಶಾಸಕ ವಾಸು, ಅಭಿನಂದನಾ ನುಡಿ : ಖ್ಯಾತ ಕನ್ನಡ ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ, ಅಧ್ಯಕ್ಷತೆ : ಎಂ.ಕೆ. ನಂಜಯ್ಯ, ಉಪಸ್ಥಿತರು : ಕೆ. ಕಾಳಿಂಗು, ಆರ್. ಬಸವಣ್ಣ, ಗೋಪಾಲಸ್ವಾಮಿ, ಹನುಮಂತೇಶ್, ಸ್ಥಳ: ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.

■ **ರಂಗಾಯಣ :** ಭಾರತೀಯ ರಂಗ ವಿದ್ಯಾಲಯದ ವಿದ್ಯಾರ್ಥಿಗಳಿಂದ 'ಬೆಕ್ಕು–ಬಾವಿ' ನಾಟಕ ಪ್ರದರ್ಶನ, ನಿರ್ದೇಶನ : ಎಸ್. ರಾಮನಾಥ, ರಚನೆ : ಶಾ. ಬಾಲುರಾವ್, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಬ'ವ'ದ ಬಯಲಿಗರು –ವಚನಕಾರರ ಪರಿಚಯಾತ್ಮಕ ಕಾರ್ಯಕ್ರಮ, ಲೇಖನ ಮತ್ತು ಪ್ರಸ್ತುತಿ– ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಸಿ. ವಿಶ್ವನಾಥ್ ಮತ್ತು ಅಂಬಯ್ಯನುಲಿ, ವ್ಯಾಖ್ಯಾನ– ಡಾ. ಪ್ರದೀಪ್ ಕುಮಾರ್ ಹೆಬ್ರಿ, 7.15 ತ್ಯಾಜ್ಯ ನಿಭಾಯಿಸುವ ರೀತಿ–ಪ್ರಾಯೋಜಿತ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ', 10.05 ಖೇಲೋ ಇಂಡಿಯಾ ಯೂನಿವರ್ಸಿಟಿ ಕ್ರೀಡಾಕೂಟದ ಶುಕ್ರವಾರದ ಆಟಗಳ ಅವತರಣಿಕೆ 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.45 ಜನಪದಗೀತೆ–ನಾಗಣ್ಣ ಮತ್ತು ತಂಡ, 1.20 ಭಾವಗೀತೆ, 3.35 ಮಕ್ಕಳ ಮಂಟಪ – ಬೇಸಿಗೆ ಶಿಬಿರ ಕುರಿತು ಮಕ್ಕಳ ಅಭಿಪ್ರಾಯ ಸಂಗ್ರಹ ಕಾರ್ಯಕ್ರಮ, ಪ್ರಸ್ತುತಿ–ಎಂ.ಎಸ್. ಭಾರತಿ, 4.00 ನಾಟಕ 'ಇನ್ನಾದರೂ ಬದುಕೋಣ' ರಚನೆ–ಎ. ಚಿದಾನಂದಗೌಡ, ನಿರ್ದೇಶನ– ಪ್ರಭಾ ಶಿರೂರ್, 4.30 ನೆನಪಿನಂಗಳ–ಬಿ.ಎಂ.ಶ್ರೀ ಅವರನ್ನು ಕುರಿತು ಮಾತನಾಡುತ್ತಾರೆ ಪ್ರೊ.ಎಸ್.ವಿ. ರಂಗಣ್ಣ, ಎ.ಆರ್. ಕೃಷ್ಣಶಾಸ್ತ್ರಿಗಳನ್ನು ಕುರಿತು ಮಾತನಾಡುತ್ತಾರೆ ಕುವೆಂಪು, 6.50 ಕೃಷಿರಂಗ–ಕಿಸಾನ್‌ವಾಣಿ–ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಜನಪದ ಸಂಗೀತ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

ಗಣ್ಯರಿಗೆ ಡಾ.ರಾಜ್ ಭಾವೈಕ್ಯತಾ ಪ್ರಶಸ್ತಿ ಪ್ರದಾನ

ಪ್ರೇಕ್ಷಕರ ಮನಸೂರೆಗೊಂಡ ಡಾ.ರಾಜ್ ಚಿತ್ರಗಳ ರಸಮಂಜರಿ

ಮೈಸೂರು, ಏ.29(ಜಿಎ)- ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಸ್ನೇಹ ಸಿಂಚನ ಟ್ರಸ್ಟ್ ಸಹಯೋಗದಲ್ಲಿ ವಿಜಯನಗರದ ಸಾಹಿತ್ಯ ಭವನದಲ್ಲಿ ಶುಕ್ರವಾರ ಸಂಜೆ ಡಾ.ರಾಜ್ ಭಾವೈಕ್ಯತಾ ಪ್ರಶಸ್ತಿ ಪ್ರದಾನ ಮತ್ತು ಡಾ.ರಾಜ್ ಚಲನಚಿತ್ರಗಳ ರಸಮಂಜರಿ ಕಾರ್ಯಕ್ರಮ ನಡೆಯಿತು.

ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ಬ್ರಾಹ್ಮಣ ಮಹಾಸಭಾದ ಡಾ.ಬಿ.ಆರ್.ನಟರಾಜಜೋಯಿಸ್, ಡಾ.ಕೆ.ಕೃಷ್ಣಮೂರ್ತಿ ಪ್ರತಿಷ್ಠಾನದ ಅಧ್ಯಕ್ಷೆ ಡಾ.ಕೆ.ಲೀಲಾ ಪ್ರಕಾಶ್, ಕುಟುಂಬ ಸಲಹಾ ಕೇಂದ್ರದ ಅಧ್ಯಕ್ಷೆ ಡಾ.ಮಂಜುಳಾ ಉಮೇಶ್ ಮತ್ತು ಪೊಲೀಸ್ ಅಧಿಕಾರಿ ರವಿಶಂಕರ್ ಅವರಿಗೆ ಡಾ.ರಾಜ್ ಭಾವೈಕ್ಯತಾ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.



ನಂತರ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಮೂಡಿಗೆರೆ ಬಳಿ 1971ರ ಸಮಯದಲ್ಲಿ ಬಂಗಾರದ ಮನುಷ್ಯ ಸಿನಿಮಾದ ಚಿತ್ರೀಕರಣ ನಡೆಯುತ್ತಿತ್ತು. ಅದನ್ನು ನೋಡಲು ವಿದ್ಯಾರ್ಥಿಗಳೂ ಸಹ ನೆರೆದಿದ್ದರು. ಇದನ್ನು ಗಮನಿಸಿದ ಡಾ.ರಾಜ್ ಅವರು, ಆ ಮಕ್ಕಳನ್ನು ಕರೆದು ಶೂಟಿಂಗ್ ಅನ್ನು ನೋಡಲು ಇಲ್ಲಿಗೆ ಬರಬೇಡಿ. ಈಗ ಶಾಲೆ-ಕಾಲೇಜಿಗೆ ಹೋಗಿ ಅಭ್ಯಾಸ ಮಾಡಿ. ಕಲಿಕೆಗೆ ಗೈರಾರುವುದು ಸರಿಯಲ್ಲ. ನನ್ನೊಂದಿಗೆ ಮಾತನಾಡಬೇಕು ಎಂದರೆ, ಇನ್ನೂ 15 ದಿನಗಳ ಕಾಲ ಇಲ್ಲಿಯೇ ಸಮೀಪದಲ್ಲಿರುವ ಲಾಡ್ಜ್‌ನಲ್ಲಿರುವೆ. ರಾತ್ರಿ 12ರ ವರೆಗೆ ಆದರೂ ಪರವಾಗಿಲ್ಲ. ಅಲ್ಲಿಗೆ ಬಂದು ನನ್ನನ್ನು ಕಾಣಬಹುದು ಎಂದು ವಿದ್ಯಾರ್ಥಿಗಳಿಗೆ ಬುದ್ಧಿಮಾತು ಹೇಳಿ ಕಳುಹಿಸಿದ್ದರು. ಇದು ಅವರ ಶೈಕ್ಷಣಿಕ ಕಾಳಜಿಗೆ ಸಾಕ್ಷಿಯಾಗಿತ್ತು ಎಂದು ರಾಜ್‌ಕುಮಾರ್ ಅವರನ್ನು ಸ್ಮರಿಸಿದರು.

ಡಾ.ರಾಜ್ ಚಿತ್ರಗಳಿಂದ ಅನೇಕ ವ್ಯಕ್ತಿಗಳ ಜೀವನ ಶೈಲಿ ಬದಲಾಗಿದೆ. ಕಸ್ತೂರಿ ನಿವಾಸ, ಬಂಗಾರ ಮನುಷ್ಯ ಇನ್ನಿತರ ಚಿತ್ರಗಳು ಜನಸಾಮಾನ್ಯರ ಮೇಲೆ ಹೆಚ್ಚಿನ ಪರಿಣಾಮ ಬೀರಿದ್ದವು. ಅವರು ಕೇವಲ ಅಭಿನಯಕ್ಕೆ ಅಷ್ಟೇ ಸೀಮಿತವಾದವರಲ್ಲ. ನಾಡು-ನುಡಿ-ನೆಲ-ಜಲದ ಹಿತಾಸಕ್ತಿ ಕಾಪಾಡಲು ಬೀದಿಗಿಳಿದು ಹೋರಾಟದ ಮೇರು ಕಲಾವಿದರು. ಈ ರೀತಿಯ ಮತ್ತೊಮ್ಮೆ ನಟ ಎಲ್ಲೂ ಸಿಗುವುದಿಲ್ಲ ಎಂದರು.

ಡಾ.ರಾಜ್‌ಕುಮಾರ್ ಹೆಸರಿನಲ್ಲಿ ಅಂದಾಜು 1,280 ಸಂಘಗಳಿವೆ. 150 ಕೃತಿಗಳು ಬಂದಿವೆ. ಅವರಿಗೆ ನಾಲ್ಕು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಕೊಟ್ಟಿವೆ. ಇದು ನಿಜಕ್ಕೂ ದಾಖಲೆಯೇ ಸರಿ. ದೇಶದ ಯಾವುದೇ ಕಲಾವಿದನಿಗೂ ಸಿಗದಷ್ಟು ಸನ್ಮಾನ, ಗೌರವ ಇವರಿಗೆ ದೊರೆತಿರುವುದಕ್ಕೆ ಇದು ನಿದರ್ಶನ. ನೇತ್ರದಾನ ಮಾಡಿ ಬಹಳಷ್ಟು ಜನರಿಗೆ ಸ್ಫೂರ್ತಿಯಾದರು. ಇದರ ಫಲವಾಗಿ ಅಂದಾಜು ಸಾವಿರಾರು ರಾಜ್ ಅವರ ಅಭಿಮಾನಿಗಳು ನೇತ್ರದಾನ ಮಾಡಿ ಅಂಧರ ಬಾಳಿಗೆ ಬೆಳಕಾಗಿದ್ದಾರೆ ಎಂದರು.

ಇದಕ್ಕೂ ಮುನ್ನ ವಿದುಷಿ ಆರ್.ಸಿ. ರಾಜಲಕ್ಷ್ಮಿ ಅವರು ಪ್ರಾರ್ಥಿಸಿದರಲ್ಲದೆ, ಸುಮಧುರ ಗೀತೆಗಳನ್ನು ಹಾಡಿ ಎಲ್ಲರ ಗಮನ ಸೆಳೆದರು. ವಿದ್ಯಾರ್ಥಿನಿ ಸುಸ್ಮಿತಾ ಸುಖೀಭವ ಕಾರ್ಯಕ್ರಮ ನಿರೂಪಿಸಿದರು.

ಬಳಿಕ ರಾಜ್ ಚಲನಚಿತ್ರಗಳ ರಸಮಂಜರಿ ನಡೆಯಿತು. ದೀಪಕ್‌ಗೌಡ, ಶ್ರೀನಿವಾಸ್(ಸೀನು), ರಾಜೇಶ್ವರಿ, ಸಿಂಚನ, ಅನಂತ್ ದೀಕ್ಷಿತ್, ಸಿದ್ದೇಶ್, ಮಂಜೇಶ್ ನಂಜನಗೂಡು, ರೇಣುಕಾ, ಪ್ರಭಾ ಇನ್ನಿತರರು ಮಧುರ ಗೀತೆಗಳನ್ನು ಹಾಡಿ ನೆರೆದವರನ್ನು ರಂಜಿಸಿದರು. ಲೇಖಕಿ ಡಾ.ಪುಷ್ಪಾ ಅಯ್ಯಂಗಾರ್, ಟ್ರಸ್ಟ್‌ನ ಅಧ್ಯಕ್ಷೆ ಮ.ನ. ಲತಾ ಮೋಹನ್ ಇನ್ನಿತರರು ಪಾಲ್ಗೊಂಡಿದ್ದರು.



ಭಾರತೀಯ ಜೀವ ವಿಮಾ ನಿಗಮ, ಶಾರದಾದೇವಿನಗರ ಶಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ, ಬಿ.ಎ.ಉಮಾ ಅವರಿಗೆ ಆತ್ಮೀಯವಾಗಿ ಅಭಿನಂದಿಸಿ, ಬೀಳ್ಕೊಡಲಾಯಿತು. ಈ ಸಂದರ್ಭದಲ್ಲಿ ಶಾಖಾಧಿಕಾರಿ ಕೆ.ಎನ್. ಕಾಂತರಾಜಪ್ಪ, ಅಭಿವೃದ್ಧಿ ಅಧಿಕಾರಿ ಬೂಕನಕೆರೆ ವಿಜೇಂದ್ರ ಮತ್ತು ಶಾಖೆಯ ಸಿಬ್ಬಂದಿ ವರ್ಗ ಹಾಜರಿದ್ದರು.

ಪರೀಕ್ಷೆ ಫಲಿತಾಂಶ

ಮೈಸೂರು, ಏ.29-ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು (ಸ್ವಾಯತ್ತ), ಮಾರ್ಚ್/ಏಪ್ರಿಲ್‌ನಲ್ಲಿ ನಡೆಸಿದ ಸ್ನಾತಕ ಪದವಿಯ ಮೂರನೇ ಮತ್ತು ಐದನೇ ಸೆಮಿಸ್ಟರ್ ಹಾಗೂ ಪುನರಾವರ್ತಿತ ಪ್ರಥಮ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸಿದೆ.

ಎಲ್ಲಾ ಫಲಿತಾಂಶಗಳನ್ನು ಕಾಲೇಜಿನ ವೆಬ್‌ಸೈಟ್ http://www.jsscacs.edu.in or www.result.jsscacs.edu.in ನಲ್ಲಿ ಪಡೆಯಬಹುದು. ಅಂಕಗಳ ಮರು ಎಣಿಕೆ ಮತ್ತು ಫೋಟೋಪ್ರತಿ ಪಡೆಯಲು ಕೊನೆಯ ದಿನಾಂಕ ಮೇ 6, ಮರು ಮೌಲ್ಯಮಾಪನಕ್ಕೆ ಮೇ 10.

ಸಾರ್ವಜನಿಕ ತಿಳುವಳಿಕೆ ಪತ್ರ

ನಮ್ಮ ಕಕ್ಷಿದಾರರು ಮೈಸೂರು ಸಿಟಿ, ರಾಮಕೃಷ್ಣನಗರ ಬಡಾವಣೆ, ಇಂಜಿನಿಯರ್ಸ್ ಕ್ಲಬ್ ಹತ್ತಿರ, ವಿಶ್ವಮಾನವ 'ಬಿ' ಕ್ರಾಸ್, ಮನೆ ನಂ. 1597ರಲ್ಲಿ ವಾಸವಾಗಿರುವ ಲೇಟ್ ಟಿ. ಚನ್ನಯ್ಯ ನವರ ಮಗ ಶ್ರೀ ಶ್ರೀನಿವಾಸನ್. ಸಿ. ಇವರ ಪತ್ನಿ ಶ್ರೀಮತಿ ಸತ್ಯವತಿ ಎಂ.ವಿ., ಇವರ ಮಕ್ಕಳಾದ ಶ್ರೀಮತಿ ಪ್ರೀತಿ ಎಸ್. ಹಾಗೂ ಕುಮಾರಿ ಮಧುಶ್ರೀ. ಎಸ್.ರವರಿಂದ ಷೆಡ್ಯೂಲ್ ಆಸ್ತಿಗಳನ್ನು ಖರೀದಿ ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿದ್ದು, ಈ ಕ್ರಯದ ವ್ಯವಹಾರಕ್ಕೆ ಯಾರದಾದರೂ ಯಾವುದಾದರೂ ತಕರಾರು ಅಥವಾ ಈ ಆಸ್ತಿಯ ಬಗ್ಗೆ ಹಕ್ಕು ಬಾಧ್ಯತೆಗಳಿದ್ದಲ್ಲಿ ಈ ತಿಳುವಳಿಕೆ ಪತ್ರ ಪ್ರಕಟವಾದ ಎರಡು ವಾರಗಳ ಒಳಗಾಗಿ ಲಿಖಿತವಾಗಿ ಅದಕ್ಕೆ ಸಂಬಂಧಿಸಿದ ದಾಖಲಾತಿಗಳೊಡನೆ ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಕಾನೂನು ಬದ್ಧ ತಕರಾರು ಬಾರದಿದ್ದಲ್ಲಿ ಈ ವ್ಯವಹಾರಕ್ಕೆ ಯಾರದು ಯಾವ ಆಕ್ಷೇಪಣೆಯೂ ಇಲ್ಲ ಎಂದು ತಿಳಿದು ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸಲಾಗುವುದು ಮತ್ತು ನಂತರ ಬರುವ ಯಾವ ತಕರಾರಿಗೂ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ತಿಳಿಯುವುದು.

ಷೆಡ್ಯೂಲ್

1) ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಲಿಂಗಾಬುದಿ ಗ್ರಾಮದ ಸರ್ವೆ ನಂ. 67/1 ರಲ್ಲಿ 5 ಎಕರೆ, 03 ಗುಂಟೆ ಪೈಕಿ ಶ್ರೀ ಶ್ರೀನಿವಾಸನ್. ಸಿ. ರವರ ಮಾಲೀಕತ್ವದ 4 ಎಕರೆ 22 ಗುಂಟೆ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂಬರ್ 70ರ ಜಮೀನು ; ಪಶ್ಚಿಮಕ್ಕೆ: ಸರ್ವೆ ನಂಬರ್ 66ರ ಜಮೀನು ; ಉತ್ತರಕ್ಕೆ: ಸರ್ವೆ ನಂ. 67/1 ರ ಉಳಿಕೆ ಜಮೀನು ಮತ್ತು ಸರ್ವೆ ನಂಬರ್ 59ರ ಜಮೀನು ; ದಕ್ಷಿಣಕ್ಕೆ: ಸರ್ವೆ ನಂಬರ್ 67/2ರ ಜಮೀನು.

2) ಮೈಸೂರು ತಾಲ್ಲೂಕು ಕಸಬಾ ಹೋಬಳಿ, ಲಿಂಗಾಬುದಿ ಗ್ರಾಮದ ಸರ್ವೆ ನಂ. 71/2 ರಲ್ಲಿ 1 ಎಕರೆ, 38 ಗುಂಟೆ ಪೈಕಿ ಶ್ರೀ ಶ್ರೀನಿವಾಸನ್. ಸಿ. ರವರ ಮಾಲೀಕತ್ವದ 22 ಗುಂಟೆ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂಬರ್ 71/1 ರ ಜಮೀನು ; ಪಶ್ಚಿಮಕ್ಕೆ: ಸರ್ವೆ ನಂಬರ್ 70ರ ಜಮೀನು ; ಉತ್ತರಕ್ಕೆ: ಸರ್ವೆ ನಂ. 71/2ರ ಉಳಿಕೆ ಜಮೀನು ; ದಕ್ಷಿಣಕ್ಕೆ: ಸರ್ವೆ ನಂ. 71/2ರ ಉಳಿಕೆ ಜಮೀನು.

3)ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಲಿಂಗಾಬುದಿ ಗ್ರಾಮದ ಸರ್ವೆ ನಂ. 70/3 ರಲ್ಲಿ ಶ್ರೀಮತಿ ಪ್ರೀತಿ ಎಸ್. ರವರ ಮಾಲೀಕತ್ವದ 2 ಎಕರೆ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂಬರ್ 71/2 ರ ಜಮೀನು ; ಪಶ್ಚಿಮಕ್ಕೆ: ಸರ್ವೆ ನಂಬರ್ 67/1 ಮತ್ತು 2ರ ಜಮೀನು ; ಉತ್ತರಕ್ಕೆ: ಸರ್ವೆ ನಂ. 70/4 ರ ಜಮೀನು ; ದಕ್ಷಿಣಕ್ಕೆ: ಸರ್ವೆ ನಂ. 70/1 ರ ಜಮೀನು.

4)ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಲಿಂಗಾಬುದಿ ಗ್ರಾಮದ ಸರ್ವೆ ನಂ. 67/2 ರಲ್ಲಿ ಕುಮಾರಿ ಮಧುಶ್ರೀ ಎಸ್. ರವರ ಮಾಲೀಕತ್ವದ 2 ಎಕರೆ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂಬರ್ 70/3 ಮತ್ತು 70/1 ರ ಜಮೀನು ; ಪಶ್ಚಿಮಕ್ಕೆ: ಸರ್ವೆ ನಂಬರ್ 66ರ ಜಮೀನು ; ಉತ್ತರಕ್ಕೆ: ಸರ್ವೆ ನಂ. 67/1 ರ ಜಮೀನು ; ದಕ್ಷಿಣಕ್ಕೆ: ಸರ್ವೆ ನಂ. 67/3 ರ ಜಮೀನು.

5) ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಲಿಂಗಾಬುದಿ ಗ್ರಾಮದ ಸರ್ವೆ ನಂ. 70/4 ರಲ್ಲಿ 2 ಎಕರೆ, 29 ಗುಂಟೆ ಪೈಕಿ ಶ್ರೀಮತಿ ಸತ್ಯವತಿ ಎಂ.ವಿ. ರವರ ಮಾಲೀಕತ್ವದ 2 ಎಕರೆ 09 ಗುಂಟೆ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂಬರ್ 71/1ರ ಜಮೀನು ; ಪಶ್ಚಿಮಕ್ಕೆ: ಸರ್ವೆ ನಂಬರ್ 67/1 ರ ಜಮೀನು; ಉತ್ತರಕ್ಕೆ: ಸರ್ವೆ ನಂ. 59 ರ ಜಮೀನು ; ದಕ್ಷಿಣಕ್ಕೆ: ಸರ್ವೆ ನಂ. 70/3 ರ ಜಮೀನು.

Sd/- O. Shama Bhat, B.A., LL.B
O. Sathisha, B.Sc., LL.B.
Advocates
#20/C, 2nd Floor, Near Airlines Hotel, Jayalakshmi Vilas Road, Chamarajapuram, Mysuru 570-005
Ph: 0821-4262475

ನಕ್ಕರೆ ಅದೇ ಸ್ವರ್ಗ

ನ್ಯಾಯಧೀಶರು : "ದೇವಾಲಯಕ್ಕೆ ಯಾಕೆ ಕನ್ನ ಹಾಕಿದೆ?"
ಕಳ್ಳ : "ಅದು ನಮ್ಮ ಸಂಪ್ರದಾಯ ಸರ್, ಯಾವುದೇ ಕೆಲಸವನ್ನು ದೇವರಿಂದಲೇ ಶುರು ಮಾಡ್ತೀವಿ"

ಮೈಸೂರು ಮಿತ್ರ

ಶನಿವಾರ, 30 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನಮ್ಮ ಜೀವನ, ನಾವು ಬದುಕಲಿಕ್ಕಾಗಿಯೇ ಹೊರತು, ಪರರ ಮೆಚ್ಚಿಸಲಿಕ್ಕಾಗಿ ಅಲ್ಲ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಆಳಾಗದವ ಅರಸನಲ್ಲ, ಹಟ ಹಿಡಿದವ ಸಾಮ್ರಾಟನಲ್ಲ

ನಿಮ್ಮ ಪತ್ರಗಳು

ಎನ್.ಆರ್.ಮೊಹಲ್ಲಾದ ಶಿವಾಜಿ ರಸ್ತೆಯಲ್ಲಿ ರಸ್ತೆ ದೀಪಗಳಿಲ್ಲ



ಮಾನ್ಯರೆ,

ಮೈಸೂರಿನ ಎನ್.ಆರ್. ಮೊಹಲ್ಲಾದ ಶಿವಾಜಿ ರಸ್ತೆಯಲ್ಲಿ ಸುಮಾರು ಒಂದೂವರೆ ತಿಂಗಳಿಂದ ರಸ್ತೆ ದೀಪಗಳಿಲ್ಲದೆ ತುಂಬಾ ತೊಂದರೆಯಾಗಿದೆ.

ಈ ರಸ್ತೆಯಲ್ಲಿ ಎಲ್‌ಇಡಿ ಬಲ್ಬ್ ಬದಲಾಯಿಸುವ ಸಲುವಾಗಿ ಕೇಬಲ್ ಕಾಮಗಾರಿಯಿಂದಾಗಿ ರಸ್ತೆ ಅಗೆದಿದ್ದಾರೆ. ಆದರೆ ರಸ್ತೆ ಕಾಮಗಾರಿ ಪೂರ್ಣಗೊಳ್ಳದಿರುವುದರಿಂದ ವಾಹನ ಸವಾರರಿಗೆ, ಅದರಲ್ಲೂ ಬೆಳಗಿನ ವಾಯುವಿಹಾರಿಗಳು, ಮಹಿಳೆಯರು ಮತ್ತು ಹಿರಿಯ ನಾಗರಿಕರಿಗೆ ತುಂಬಾ ತೊಂದರೆಯಾಗಿದೆ.

ಫೌಂಟೇನ್ ಸರ್ಕಲ್‌ನಿಂದ ಎನ್.ಆರ್.ಮೊಹಲ್ಲಾದ ನಾರ್ಥ್–ಈಸ್ಟ್‌ವರೆಗೆ ಸುಮಾರು 2 ಕಿಲೋಮೀಟರ್ ಕತ್ತಲಿನಲ್ಲಿದ್ದು, ಓಡಾಡಲು ತುಂಬಾ ಭಯಪಡುವಂತಾಗಿದೆ. ಈ ಪ್ರದೇಶದಲ್ಲಿ ಸರ ಅಪಹರಣಗಳ ದೂರುಗಳು ವ್ಯಾಪಕವಾಗಿ ಕೇಳಿ ಬಂದಿವೆ. ಇಂತಹ ಆಧುನಿಕ ಯುಗದಲ್ಲಿ ಈ ಕಾಮಗಾರಿ ವಿಳಂಬವಾಗಲು ಕಾರಣ ಏನು ಎಂಬುದು ತಿಳಿಯುತ್ತಿಲ್ಲ. ಇದರ ಬಗ್ಗೆ ಪಾಲಿಕೆ ಸದಸ್ಯರಿಗೆ ಮತ್ತು ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಹಲವಾರು ದೂರುಗಳನ್ನು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ.

ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಕಾಮಗಾರಿಯನ್ನು ಗಂಭೀರವಾಗಿ ತೆಗೆದುಕೊಂಡು ಕತ್ತಲಿಂದ ಕೂಡಿರುವ ಈ ರಸ್ತೆಗೆ ಆದಷ್ಟು ಬೇಗ ಬೀದಿ ದೀಪ ಅಳವಡಿಸಿ ನಾಗರಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

– ಶಬ್ಬೀರ್, ಎನ್.ಆರ್. ಮೊಹಲ್ಲಾ, ಮೈಸೂರು.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ನಿರ್ಗಮಿಸಿದ ಇಮ್ರಾನ್ ಖಾನ್–ಅಸ್ಥಿರ ಪಾಕಿಸ್ತಾನ್

> ಮೂರು ವರ್ಷಗಳ ಕಾಲ ಇಮ್ರಾನ್ ಖಾನ್‌ರ ಸರಕಾರ ಮತ್ತು ಸೇನೆಯ ಮಧ್ಯೆ ಉತ್ತಮ ಬಾಂಧವ್ಯ-ಸಮನ್ವಯವಿತ್ತು. ಆದರೆ ಆಡಳಿತ ನಡೆಸುವ ಅನುಭವವಿಲ್ಲದ ಇಮ್ರಾನ್ ಖಾನ್‌ರಿಗೆ ಪಾಕ್ ಜನತೆಯ ಕನಿಷ್ಠ ಅಪೇಕ್ಷೆಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ. ಪಾಕ್ ಆರ್ಥಿಕತೆ ಸಂಪೂರ್ಣ ಕುಸಿದಿತ್ತು. ಹಣದುಬ್ಬರ ಸಾರ್ವಕಾಲಿಕ ಏರಿಕೆ ದಾಖಲಿಸಿತು. ಆಹಾರ ಪದಾರ್ಥಗಳ ಬೆಲೆಯಲ್ಲಾದ ತೀವ್ರ ಏರಿಕೆಯಿಂದ ಜನಸಾಮಾನ್ಯರು ಆಕ್ರೋಶಗೊಂಡಿದ್ದರು. ಪಾಕ್ ತನ್ನ ಸಾಂಪ್ರದಾಯಿಕ ಮುಸ್ಲಿಂ ಸಹೋದರ ದೇಶಗಳ ಬಳಿ ಆರ್ಥಿಕ ಸಹಾಯಕ್ಕಾಗಿ ನಿರಂತರವಾಗಿ ಒತ್ತಾಯಿಸುತ್ತಿದ್ದ ಕಾರಣ ದ್ವಿಪಕ್ಷೀಯ ಸಂಬಂಧಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿತು.

ಪಾಕಿಸ್ತಾನದಲ್ಲಿ ಇಮ್ರಾನ್ ಖಾನ್ ನಿರ್ಗಮನ ಅಲ್ಲಿನ ರಾಜಕಾರಣದಲ್ಲಿ ಮತ್ತೊಮ್ಮೆ ಸೇನೆಯ ಶಕ್ತಿಯನ್ನು ಸಾಬೀತು ಪಡಿಸಿದೆ. ಖಾನ್ ನಿರ್ಗಮನ ಸಂದರ್ಭದಲ್ಲಿ ದೇಶದ ಸಂಸತ್ತಿನಲ್ಲಿ, ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿದ್ದ ನಾಟಕೀಯ ವಿದ್ಯಮಾನಗಳ ಹಿಂದಿನ ಶಕ್ತಿ ಪಾಕ್ ಸೇನೆ ಎನ್ನಲು ವಿಶೇಷ ರಾಜಕೀಯ ಪರಿಜ್ಞಾನ ಬೇಕಾಗಿಲ್ಲ. ಪಾಕ್ ಸೇನಾ ಮುಖ್ಯಸ್ಥ ಖಮರ್ ಜಾವೇದ್ ಬಾಜ್ವಾರೊಂದಿಗೆ ಸಂಘರ್ಷಕ್ಕೆ ಇಳಿಯುತ್ತಿದ್ದಂತೆ ಪ್ರಧಾನಿ ಇಮ್ರಾನ್ ಖಾನ್ ಪತನ ನಿಶ್ಚಿತವಾಗಿತ್ತು. ಪಾಕಿಸ್ತಾನದ ಅಪಾಯಕಾರಿ ಗುಪ್ತಚರ ಸಂಸ್ಥೆ ಐ.ಎಸ್.ಐ.ನ ಮುಖ್ಯಸ್ಥನ ನೇಮಕಾತಿಗೆ ಸಂಬಂಧಿಸಿದಂತೆ ಉಂಟಾದ ಭಿನ್ನಮತದಿಂದ ಇಮ್ರಾನ್‌ಖಾನ್ ಪ್ರಧಾನಿ ಪಟ್ಟ ಕಳೆದುಕೊಂಡರು. ತನ್ನ ಪತನ ನಿಶ್ಚಿತವಾಗುತ್ತಿದ್ದಂತೆ ಖಾನ್ ಕೊನೆ ಘಳಿಗೆಯಲ್ಲಿ ಬಾಜ್ವಾರನ್ನು ವಜಾಗೊಳಿಸಿ ತಮ್ಮ ವಿಶ್ವಾಸಪಾತ್ರ ಲೆ.ಜ.ಫಯಾಜ್ ಸಮೀದ್‌ರನ್ನು ಸೇನಾ ಮುಖ್ಯಸ್ಥರನ್ನಾಗಿ ತರುವ ಯೋಜನೆಯಲ್ಲಿದ್ದರು. ಆದರೆ ಪಾಕ್‌ನ ರಾವಲ್ಪಿಂಡಿ ವಲಯದ ಐ.ಎಸ್.ಐ. ಪ್ರಮುಖರು ಖಾನ್‌ಗೆ ಪರಿಸ್ಥಿತಿಯನ್ನು ಮನವರಿಕೆ ಮಾಡಿದ ನಂತರ ಖಾನ್‌ರು ಸಂಘರ್ಷ ತ್ಯಜಿಸಿ ರಾತ್ರಿಯೇ ಇಸ್ಲಾಮಾಬಾದ್ ಹೊರ ವಲಯದಲ್ಲಿರುವ ತಮ್ಮ ನಿವಾಸಕ್ಕೆ ತೆರಳಿದ್ದರು. ಆದರೂ ಸೋಲೊಪ್ಪಿಕೊಂಡಿರಲಿಲ್ಲ.

ಚುನಾವಣೆಯ ಸಂದರ್ಭದಲ್ಲಿ ಪಾಕ್ ಜನತೆಗೆ ನೀಡಿದ ನಯಾ ಪಾಕಿಸ್ತಾನದ ಆಶ್ವಾಸನೆಯನ್ನು ಈಡೇರಿಸುವಲ್ಲಿ ಇಮ್ರಾನ್ ಖಾನ್‌ರ ಸಂಪೂರ್ಣ ವೈಫಲ್ಯ ಮತ್ತು ತಮ್ಮನ್ನು ಪ್ರಧಾನಿಯಾಗಿ ಆಯ್ಕೆ ಮಾಡುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ ಸೇನೆಯ ವಿಶ್ವಾಸ ಮತ್ತು ಬೆಂಬಲ ಕಳೆದುಕೊಂಡಿದ್ದರು.

ಇಮ್ರಾನ್ ಖಾನ್ ಪ್ರಧಾನಿ ಪಟ್ಟ ತ್ಯಜಿಸಿದ ನಂತರ ಅವರ ಪಾಕಿಸ್ತಾನ ತೆಂಡ್ರಿಕ್ ಎ–ಇನ್ಸಾಫು ಪಾರ್ಟಿಯು ದೇಶಾದ್ಯಂತ ಪ್ರತಿಭಟನಾ ಸಭೆಗಳು, ರ್‍ಯಾಲಿಗಳನ್ನು ನಡೆಸಿ ಶಕ್ತಿ ಪ್ರದರ್ಶನ ಪ್ರಾರಂಭಿಸಿದೆ. ಇಮ್ರಾನ್ ಖಾನ್‌ರು ತಾನು ಅಧಿಕಾರದಲ್ಲಿರದೇ ಇದ್ದಾಗ ಹೆಚ್ಚು ಅಪಾಯಕಾರಿ ಎನ್ನುವ ಮೂಲಕ ದೇಶದ ಸುಪ್ರೀಂಕೋರ್ಟ್ ಮತ್ತು ಸೇನೆಗೆ ಪರೋಕ್ಷವಾಗಿ ಎಚ್ಚರಿಕೆ ನೀಡಿದ್ದಾರೆ. ಇಮ್ರಾನ್ ಖಾನ್ ರ್‍ಯಾಲಿಗಳಲ್ಲಿ ತನ್ನ ನಿರ್ಗಮನದಲ್ಲಿ ವಿದೇಶಿ ಶಕ್ತಿಗಳ ಕೈವಾಡವಿದೆ. ಪಾಕಿಸ್ತಾನದಲ್ಲಿ ರಾಜಕೀಯ ಅಸ್ಥಿರತೆ ಉಂಟು ಮಾಡಲು ಈ ಶಕ್ತಿಗಳು ಕ್ರಿಯಾಶೀಲವಾಗಿದೆ ಎಂದು ಆರೋಪಿಸುತ್ತಿದ್ದಾರೆ. ವಿದೇಶಿ ಶಕ್ತಿಗಳು ತನ್ನ ದೇಶದ ಕೆಲವು ವಿರೋಧ ಪಕ್ಷಗಳ ನಾಯಕರು, ಸೇನಾಧಿಕಾರಿಗಳನ್ನು ಖರೀದಿಸಿ ತನ್ನನ್ನು ಅಧಿಕಾರದಿಂದ ಕಿತ್ತೆಸೆದಿದ್ದಾರೆ ಎಂದು ಹೇಳುತ್ತಿರುವುದು ವಿಲಕ್ಷಣವಾಗಿದೆ. ವಾಸ್ತವವಾಗಿ ಖಾನ್‌ರು ತಮ್ಮ ಅಸಮರ್ಥ್ಯ ಹಾಗೂ ಕೆಟ್ಟ ಆಡಳಿತವನ್ನು ಮರೆಮಾಚಿ ಜನರ ಗಮನ ಸೆಳೆಯಲು ಈ ರೀತಿ ಆರೋಪಿಸುತ್ತಿದ್ದಾರೆ.

ಸುಪ್ರೀಂಕೋರ್ಟ್ ದೇಶದ ಹೊಸ ಭರವಸೆ?: ಇಮ್ರಾನ್ ಸರಕಾರದ ವಿರುದ್ಧ ವಿಪಕ್ಷಗಳು ಮಂಡಿಸಿದ ಅವಿಶ್ವಾಸ ಗೊತ್ತುವಳಿ ಮೇಲೆ ಮತದಾನಕ್ಕೆ ಅವಕಾಶ ನೀಡದ ಉಪ ಸ್ಪೀಕರ್ ಕ್ರಮವನ್ನು ದೇಶದ ಸರ್ವೋಚ್ಚ ನ್ಯಾಯಾಲಯ ಅಸಂವಿಧಾನಿಕವೆಂದು ಒಮ್ಮತದ ತೀರ್ಪು ನೀಡಿತು. ಜಗತ್ತಿನ ಬೇರೆ ದೇಶಗಳಲ್ಲಿ ಇದೊಂದು ವಿಶೇಷ ತೀರ್ಪಲ್ಲ. ಆದರೆ ಪಾಕ್ ಸುಪ್ರೀಂಕೋರ್ಟ್‌ನ ತೀರ್ಪು ಅಲ್ಲಿನ ಪ್ರಜಾಪ್ರಭುತ್ವಕ್ಕೆ ಹೊಸ ವಿಶ್ವಾಸ ತುಂಬಿದೆ. ಇಮ್ರಾನ್ ಖಾನ್‌ರಿಗೆ ಸೇನೆಯೊಂದಿಗೆ ಭಿನ್ನಮತ ಹೆಚ್ಚಾಗುತ್ತಿದ್ದಂತೆ ವಿರೋಧ ಪಕ್ಷಗಳು ಖಾನ್ ವಿರುದ್ಧ ಸಂಘಟಿತರಾದ ಪರಿಣಾಮವೂ ಖಾನ್ ಅಧಿಕಾರ ತ್ಯಜಿಸಬೇಕಾಯಿತು.

2018ರ ಚುನಾವಣೆಯ ಸಂದರ್ಭದಲ್ಲಿ ಇಮ್ರಾನ್ ಖಾನ್‌ರು ಸೇನೆಗೆ ಅಚ್ಚುಮೆಚ್ಚಿನವರಾಗಿದ್ದರು. 2018ರ ಚುನಾವಣಾ ಪೂರ್ವದಲ್ಲಿ ಅಧಿಕಾರದಲ್ಲಿದ್ದ ನವಾಜ್ ಷರೀಫ್ ಸೇನೆಯ ಸಂಬಂಧದಲ್ಲಿ ಬಿರುಕು ಉಂಟಾಗಿತ್ತು. ಆದರೆ ಚುನಾವಣೆಗೆ ಎರಡು ತಿಂಗಳ ಹಿಂದಿನವರೆಗಿನ ಸಮೀಕ್ಷೆಗಳು ನವಾಜ್ ಷರೀಫ್ ಪರವಾಗಿದ್ದವು. ಈ ವೇಳೆ ಸೇನೆ ಇಮ್ರಾನ್ ಖಾನ್‌ರನ್ನು ಬೆಂಬಲಿಸುತ್ತಿದ್ದಂತೆ ಚುನಾವಣಾ ಸಮೀಕರಣಗಳು ಬದಲಾಗತೊಡಗಿದವು. ಸೇನೆಯು ಖಾನ್‌ಗೆ ನೀಡಿದ ಬೆಂಬಲ, ಖಾನ್ ಪಕ್ಷ ಪಾಕ್ ಜನತೆಗೆ ನೀಡಿದ ಸಮಗ್ರ ಅಭಿವೃದ್ಧಿಯ ಆಶ್ವಾಸನೆ, ವೈಯಕ್ತಿಕವಾಗಿ ಇಮ್ರಾನ್ ಖಾನ್ ತಾನು ಪಾಕ್‌ನ ಏಳಿಗೆಗಾಗಿ ರಾಜಕೀಯಕ್ಕೆ ಬಂದಿರುವುದಾಗಿ ಜನತೆಗೆ ಮನವರಿಕೆ ಮಾಡುವಲ್ಲಿ ಯಶಸ್ವಿಯಾದರು. ಇದೇ ಸಂದರ್ಭದಲ್ಲಿ ಆರ್ಥಿಕ ಹಿಂಜರಿತ, ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಾದ ಕುಸಿತದಿಂದ ಹೈರಾಣಾಗಿದ್ದ ಪಾಕ್ ಜನತೆ ಇಮ್ರಾನ್ ಖಾನ್‌ರಲ್ಲಿ ಓರ್ವ ಅತ್ಯುತ್ತಮ ನಾಯಕನನ್ನು ಕಂಡ ಕಾರಣ ಇಮ್ರಾನ್ ಪ್ರಧಾನಿಯಾದರು.

ಮೂರು ವರ್ಷಗಳ ಕಾಲ ಇಮ್ರಾನ್ ಖಾನ್‌ರ ಸರಕಾರ ಮತ್ತು ಸೇನೆಯ ಮಧ್ಯೆ ಉತ್ತಮ ಬಾಂಧವ್ಯ–ಸಮನ್ವಯವಿತ್ತು. ಆದರೆ ಆಡಳಿತ ನಡೆಸುವ ಅನುಭವವಿಲ್ಲದ ಇಮ್ರಾನ್ ಖಾನ್‌ರಿಗೆ ಪಾಕ್ ಜನತೆಯ ಕನಿಷ್ಠ ಅಪೇಕ್ಷೆಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ. ಪಾಕ್ ಆರ್ಥಿಕತೆ ಸಂಪೂರ್ಣ ಕುಸಿದಿತ್ತು. ಹಣದುಬ್ಬರ ಸಾರ್ವಕಾಲಿಕ ಏರಿಕೆ ದಾಖಲಿಸಿತು. ಆಹಾರ ಪದಾರ್ಥಗಳ ಬೆಲೆಯಲ್ಲಾದ ತೀವ್ರ ಏರಿಕೆಯಿಂದ ಜನಸಾಮಾನ್ಯರು ಆಕ್ರೋಶಗೊಂಡಿದ್ದರು. ಪಾಕ್ ತನ್ನ ಸಾಂಪ್ರದಾಯಿಕ ಮುಸ್ಲಿಂ ಸಹೋದರ ದೇಶಗಳ ಬಳಿ ಆರ್ಥಿಕ ಸಹಾಯಕ್ಕಾಗಿ ನಿರಂತರವಾಗಿ ಒತ್ತಾಯಿಸುತ್ತಿದ್ದ ಕಾರಣ ದ್ವಿಪಕ್ಷೀಯ ಸಂಬಂಧಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಅಂತರಾಷ್ಟ್ರೀಯ ಹಣಕಾಸು ನಿಧಿಯು (IMF) ಹೇರುತ್ತಿದ್ದ ಕಠಿಣ ನಿಬಂಧನೆಗಳಿಂದಾಗಿ ಪಾಕ್ ಆರ್ಥಿಕ ಸಮಸ್ಯೆ ಇನ್ನಷ್ಟು ಬಿಗಡಾಯಿಸಿತು. ಅಂತಿಮವಾಗಿ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಸೇನೆಯ ವಿರುದ್ಧ ಅಂದರೆ ಬಾಜ್ವಾ ವಿರುದ್ಧ ನೀಡಿದ ಕೆಲವು ವಿವಾದಾತ್ಮಕ ಹೇಳಿಕೆಗಳು ಖಾನ್ ಪದಚ್ಯುತಿ ನಿಶ್ಚಿತಗೊಳಿಸಿತು.

ವಿಫಲಗೊಂಡ ಖಾನ್‌ರ ಕೊನೆಯ ಯತ್ನ: ಇಮ್ರಾನ್ ಖಾನ್ ತಮ್ಮ ಪ್ರಧಾನಿ ಪಟ್ಟ ಉಳಿಸಿಕೊಳ್ಳುವ ಕೊನೆಯ ಪ್ರಯತ್ನದ ಅಂಗವಾಗಿ ಜ। ಬಾಜ್ವಾರನ್ನು ವಜಾಗೊಳಿಸಿ ಅವರ ಸ್ಥಾನಕ್ಕೆ ತಮ್ಮ ಆಪ್ತ ಲೆ.ಜ.ಫಯಾಜ್ ಹಮೀದ್‌ರನ್ನು ಸೇನಾ ಮುಖ್ಯಸ್ಥರನ್ನಾಗಿ ಮಾಡಲು ತುರ್ತು ಕಾರ್ಯತಂತ್ರ ರೂಪಿಸಿದರು. ಪೇಶಾವರದಲ್ಲಿದ್ದ ಅವರನ್ನು ಇಸ್ಲಾಮಾಬಾದ್‌ಗೆ ಕರೆತರಲು ವಿಶೇಷ ಹೆಲಿಕಾಪ್ಟರ್ ಸಿದ್ಧವಾಗಿತ್ತು. ಈ ಎಲ್ಲ ವಿದ್ಯಮಾನಗಳನ್ನು ಸತತವಾಗಿ ಗಮನಿಸುತ್ತಿದ್ದ ಸೇನಾಧಿಕಾರಿಗಳು ಸನ್ನದ್ಧರಾಗಿದ್ದರು. ಇಮ್ರಾನ್ ಖಾನ್‌ರಿಗೆ ದಿಗ್ಭ್ರಮೆಯಾಗುವ ರೀತಿಯಲ್ಲಿ ಅವರ ನಿವಾಸದ ಬಳಿ ಬಂದಿಳಿದ ಹೆಲಿಕಾಪ್ಟರ್‌ನಿಂದ ಹಮೀದ್ ಬದಲು ಜ। ಬಾಜ್ವಾ ಮತ್ತು ಓರ್ವ ಯುವ ಮೇಜರ್ ಬಂದಿದ್ದರು. ಬಾಜ್ವಾರೊಂದಿಗಿನ ಮಾತುಕತೆ ನಂತರ ಇಮ್ರಾನ್ ಖಾನ್ ರಾಜೀನಾಮೆ ನೀಡಿದರು ಎನ್ನಲಾಗುತ್ತಿದೆ.

ಪಾಕ್ ವಿದೇಶಾಂಗ ನೀತಿ: ದಶಕಗಳಿಂದ ಪಾಕ್ ವಿದೇಶಾಂಗ ನೀತಿಯು ಅಮೇರಿಕದ ಅಪೇಕ್ಷೆಯಂತೆ ರೂಪಿತವಾಗುತ್ತಿತ್ತು. ಆದರೆ ಇಮ್ರಾನ್ ಖಾನ್ ಕಾಲದಲ್ಲಿ ಅಮೇರಿಕದೊಂದಿಗಿನ ಬಾಂಧವ್ಯ ತೀವ್ರ ಹದಗೆಟ್ಟಿದೆ. ಪಾಕ್‌ಗೆ ಮಿಲಿಟರಿ ನೆರವನ್ನು ಕಡಿತಗೊಳಿಸಿದೆ. ಬೈಡನ್ ಅಧ್ಯಕ್ಷರಾದ ನಂತರ ಒಂದು ಬಾರಿಯೂ ಇಮ್ರಾನ್ ಜತೆ ಮಾತುಕತೆ ನಡೆಸಲಿಲ್ಲ. ಇದೇ ಅವಧಿಯಲ್ಲಿ ಇಮ್ರಾನ್ ನಾಲ್ಕು ಬಾರಿ ಚೀನಾಕ್ಕೆ ಭೇಟಿ ನೀಡಿದ್ದರು. ಉಕ್ರೇನ್ ಯುದ್ಧ ಶುರುವಾಗುತ್ತಿದ್ದಂತೆ ಇಮ್ರಾನ್ ರಷ್ಯಾ ಅಧ್ಯಕ್ಷರಾದ ಪುಟಿನ್‌ರನ್ನು ಭೇಟಿಯಾಗಿದ್ದರು. ಪಾಕ್‌ಗೆ ಬದುಕಲು ಅಮೇರಿಕದ ಸಹಾಯ ಅನಿವಾರ್ಯ. ಅಮೇರಿಕ ಮಾತ್ರವಲ್ಲ, ಖಾನ್ ಪ್ರಧಾನಿಯಾಗಿದ್ದಾಗ ಭಾರತದೊಂದಿಗಿನ ಸಂಬಂಧವೂ ತೀವ್ರ ಹಿನ್ನಡೆ ಕಂಡಿತ್ತು. 2021 ಫೆಬ್ರವರಿಯಲ್ಲಿ ಗಡಿ ನಿಯಂತ್ರಣ ರೇಖೆಯಲ್ಲಿ ಕದನ ವಿರಾಮದ ನಂತರವೂ ಸಂಬಂಧದಲ್ಲಿ ಸುಧಾರಣೆಯಾಗಿಲ್ಲ. ಭಾರತದ ವಿರುದ್ಧ ಸಾವಿರ ವರ್ಷಗಳ ಕಾಲ ಯುದ್ಧ ಮಾಡುತ್ತೇನೆಂದ ಝುಲ್ಫಿಕರ್–ಆಲಿ–ಭುಟ್ಟೋ ನಂತರ ಇಮ್ರಾನ್ ಖಾನ್ ಭಾರತದ ವಿರುದ್ಧ ಅತ್ಯಂತ ಕಟು ವಿರೋಧಿ ಧೋರಣೆ ಹೊಂದಿದ್ದರು. ಒಂದು ಹಂತದಲ್ಲಿ ಭಾರತವನ್ನು ನಾಝಿ ಸಿದ್ಧಾಂತವಾದಿಗಳು ಆಳುತ್ತಿದ್ದಾರೆಂದು ಅನೇಕ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ನಿಂದಿಸಿದ್ದರು. ಆದರೆ ಪ್ರಧಾನಿ ಪದದಿಂದ ನಿರ್ಗಮನದ ವೇಳೆ ಇಮ್ರಾನ್ ಖಾನ್‌ರು ಸದಾ ಭಾರತ ವಿರೋಧಿ ನೀತಿಯನ್ನು ಹೊಂದಿರುವ ಸೇನೆ, ISI ನ್ನು ಪರೋಕ್ಷವಾಗಿ ಖಂಡಿಸುವ ರೀತಿಯಲ್ಲಿ ಭಾರತವು ಸ್ವತಂತ್ರವಾದ ವಿದೇಶಾಂಗ ನೀತಿಯನ್ನು ಅನುಸರಿಸುತ್ತಿದೆಯೆಂದು ಪ್ರಶಂಸೆ ಮಾಡಿದರು.

ಕೊನೆ ಇಲ್ಲದ ಸಮಸ್ಯೆಗಳು: ಇಮ್ರಾನ್ ಖಾನ್ ನಿರ್ಗಮನ ಮಾತ್ರಕ್ಕೆ ಪಾಕಿಸ್ತಾನದ ಸಮಸ್ಯೆಗಳು ಮುಗಿದಿಲ್ಲ. ನೂತನ ಪ್ರಧಾನಿ ಶಹಬಾಜ್ ಶರೀಫ್‌ರಿಗೆ ದಿವಾಳಿಯಾದ ಆರ್ಥಿಕತೆ, ವಿಭಜಿತ, ದ್ವೇಷಪೂರಿತ ರಾಜಕೀಯ ಸಂಸ್ಕೃತಿ, ಹದಗೆಟ್ಟ ವಿದೇಶಾಂಗ ನೀತಿ, ನಿಷ್ಕ್ರೀಯ ಭ್ರಷ್ಟ ಆಡಳಿತ ಯಂತ್ರ ಮೊದಲಾದ ಸಮಸ್ಯೆಗಳನ್ನು ಇಮ್ರಾನ್ ಖಾನ್ ಉಡುಗೊರೆಯಾಗಿ ನೀಡಿದ್ದಾರೆ. ನೂತನ ಪ್ರಧಾನಿ ಶಹಬಾಜ್ ಷರೀಫರು ದೇಶದ ಪರಿಸ್ಥಿತಿ ಸುಧಾರಿಸಲು ಅಪಾರ ಶ್ರಮ ಪಡಬೇಕಾಗಿದೆ. ರಾಜಕೀಯ ಚಾಣಾಕ್ಷತೆ ತೋರಬೇಕಾಗಿದೆ. ಹದಗೆಟ್ಟ ಆರ್ಥಿಕತೆ ಸುಧಾರಿಸಲು ಅಮೇರಿಕದೊಡನೆ ರಾಜತಾಂತ್ರಿಕ ಸಂಬಂಧವನ್ನು ಮೊದಲು ಸರಿಪಡಿಸಬೇಕಾಗಿದೆ. ಉಪಖಂಡದಲ್ಲಿ ಅನೇಕ ವಸ್ತುಗಳಿಗೆ ಪಾಕಿಸ್ತಾನವು ಭಾರತವನ್ನು ಅವಲಂಬಿಸಿದೆ. ಆದರೆ ಭಾರತದೊಳಗೆ ಭಯೋತ್ಪಾದನೆಗೆ ಬೆಂಬಲ ನೀಡುವುದು ಸಂಪೂರ್ಣ ನಿಲ್ಲುವವರೆಗೆ ಯಾವುದೇ ರೀತಿಯ ಮಾತುಕತೆಗೆ ಅವಕಾಶವಿಲ್ಲವೆಂದು ಭಾರತ ಸ್ಪಷ್ಟಪಡಿಸಿದೆ. ಭಯೋತ್ಪಾದನೆ ಮತ್ತು ಮಾತುಕತೆ ಏಕಕಾಲದಲ್ಲಿ ಸಾಧ್ಯವಿಲ್ಲವೆಂದು ಪಾಕಿಸ್ತಾನಕ್ಕೆ ಭಾರತವು ಕಠಿಣ ಸಂದೇಶ ನೀಡಿದೆ. ಆದರೆ ಪಾಕಿಸ್ತಾನದಲ್ಲಿ ರಾಜಕಾರಣಿಗಳು ತಮ್ಮ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಭಾರತವನ್ನು ವಿರೋಧಿಸಬೇಕಾಗಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಶಹಬಾಜ್ ಷರೀಫ್ ಮುಳ್ಳಿನ ಹಾದಿಯಲ್ಲಿ ಮುನ್ನಡೆಯಬೇಕಾಗಿದೆ. ತಮ್ಮದೇ ಆದ ಸ್ವಾರ್ಥಕ್ಕಾಗಿ ಮಿತ್ರ ಪಕ್ಷಗಳು ಸರಕಾರವನ್ನು ಬೆಂಬಲಿಸುತ್ತಿವೆ. ಷರೀಫ್, ಇವರ ಅಪೇಕ್ಷೆಗೆ ತಕ್ಕಂತೆ ನಡೆಯಬೇಕಾಗಿದೆ. ಇವರ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಬೇಕಾಗಿದೆ. ಸೇನೆಗೆ ಸಲಾಂ ಹೊಡೆಯುತ್ತಾ ಜೀ ಹುಜೂರ್ ಎನ್ನುತ್ತಾ ಮುನ್ನಡೆಯಬೇಕಾಗಿದೆ. ಭಾರತ ದ್ವೇಷ, ಧರ್ಮ ದ್ವೇಷದಿಂದ ಅಸ್ತಿತ್ವಕ್ಕೆ ಬಂದ ಪಾಕಿಸ್ತಾನದಲ್ಲಿ ರಾಜಕೀಯ ಅಸ್ಥಿರತೆ, ಸಾಮಾಜಿಕ ಜೀವನದಲ್ಲಿ ಅಶಾಂತಿ ಮುಂದುವರೆದಿದೆ. ಇದರ ಪರಿಣಾಮ ಕಳೆದ ಎಪ್ಪತ್ತು ವರ್ಷಗಳಲ್ಲಿ ಪಾಕಿಸ್ತಾನದಲ್ಲಿ ಯಾವುದೇ ಪ್ರಧಾನಿ ಐದು ವರ್ಷಗಳ ಅಧಿಕಾರಾವಧಿ ಪೂರ್ಣಗೊಳಿಸಿಲ್ಲ.

ಮೇಯರ್ ಕೌನ್ಸಿಲ್ ಸಭೆ ನಡೆಸಬಹುದೇ... ಗದ್ದಲದ ನಡುವೆ

ಮನೆ ಮನೆಗೆ ಗ್ಯಾಸ್ ಪೈಪ್‌ಲೈನ್ ಯೋಜನೆಗೆ ಅನುಮೋದನೆ

• ವಿಪಕ್ಷ ಸದಸ್ಯರ ಭಾರೀ ಆಕ್ರೋಶ • ಕಾರ್ಯಸೂಚಿ ಪಾಲಿಸದ್ದಕ್ಕೆ ವಾಗ್ದಾಳಿ • ಅವಧಿ ಮುಗಿದರೂ ಮೇಯರ್ ಮುಂದುವರಿಕೆ; ಸಭೆ ನಡೆಸುವ ಸಂಬಂಧ ಆಯುಕ್ತರ ಸ್ಪಷ್ಟನೆ

ಮೈಸೂರು, ಏ.29(ಎಸ್‌ಬಿಡಿ)– ಮೇಯರ್ ಸುನಂದಾ ಪಾಲನೇತ್ರ ಅಧ್ಯಕ್ಷತೆಯ ಕೌನ್ಸಿಲ್ ಸಭೆಯ ಸಿಂಧುತ್ವದ ಗದ್ದಲದ ನಡುವೆಯೇ ಮನೆ ಮನೆಗೆ ಗ್ಯಾಸ್ ಪೈಪ್‌ಲೈನ್ ಅಳವಡಿಸುವ ಯೋಜನೆಗೆ ಅನುಮೋದನೆ ಸಿಕ್ಕಿದೆ.

ಮೈಸೂರು ನಗರ ಪಾಲಿಕೆ ನಾಲ್ವಡಿ ಕೃಷ್ಣ ರಾಜ ಒಡೆಯರ್ ಸಭಾಂಗಣದಲ್ಲಿ ಶುಕ್ರವಾರ ಮೇಯರ್ ಸುನಂದಾ ಪಾಲನೇತ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ಕೌನ್ಸಿಲ್ ಸಭೆ ಆರಂಭದಿಂದ ಕಡೆವರೆಗೂ ಗದ್ದಲದ ಗೂಡಾಗಿತ್ತು ಕೋರಂ ಅಭಾವದಿಂದ ಅರ್ಧ ಗಂಟೆ ಮುಂದೂಡಲ್ಪಟ್ಟಿದ್ದ ಸಭೆ, ಮತ್ತೆ ಮಧ್ಯಾಹ್ನ 3.30ಕ್ಕೆ ಪುನಾರಂಭ ವಾದ ಕ್ಷಣದಿಂದ ಸಭೆಯ ಸಿಂಧುತ್ವದ ಬಗ್ಗೆಯೇ ಚರ್ಚೆ ನಡೆಯಿತು. ಅಧಿಕಾರಾವಧಿ ಮುಕ್ತಾಯಗೊಂಡಿದ್ದರೂ ಸುನಂದಾ ಪಾಲನೇತ್ರ ಅವರು ಸಭೆ ನಡೆಸುತ್ತಿರುವ ಬಗ್ಗೆ ಕಾಂಗ್ರೆಸ್ ಹಾಗೂ ಜೆಡಿಎಸ್ ಸದಸ್ಯರು ಸ್ಪಷ್ಟನೆಗೆ ಪಟ್ಟು ಹಿಡಿದರು. ಗದ್ದಲ ಹೆಚ್ಚಿದ್ದರಿಂದ ಸಂಜೆ 4.50ರಿಂದ 5.50ರವರೆಗೆ ಮತ್ತೆ ಸಭೆ ಮುಂದೂಡಲಾಯಿತು. ನಂತರವೂ ಸಭೆಯಲ್ಲಿ ಗದ್ದಲ ಮುಂದುವರೆಯಿತಾದರೂ ಗ್ಯಾಸ್ ಪೈಪ್ ಲೈನ್ ಯೋಜನೆಗೆ ಅನುಮೋದನೆ ನೀಡಿರುವುದಾಗಿ ಮೇಯರ್ ಘೋಷಿಸಿದರು.

ಗ್ರಾಹಕರಿಗೆ ನೈಸರ್ಗಿಕ ಅನಿಲ ಸರಬರಾಜು ಮಾಡಲು ಅಗತ್ಯ ಗ್ಯಾಸ್ ಪೈಪ್‌ಲೈನ್ ಅಳವಡಿಸುವ ಯೋಜನೆಗೆ ಕೌನ್ಸಿಲ್ ಅನುಮೋದನೆ ನೀಡಿದ್ದು, ರೀಡ್ ಅಂಡ್ ರೆಕಾರ್ಡ್‌ಗೆ ಕಾಯದೆ ಕಾಮಗಾರಿಗೆ ಕಾರ್ಯಾದೇಶ ನೀಡಲು ಆದೇಶಿಸಲಾಗಿದೆ ಎಂದು ಮೇಯರ್ ಸುನಂದಾ ಪಾಲನೇತ್ರ ಘೋಷಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು. ಇದರಿಂದ ಕಕ್ಕಾಬಿಕ್ಕಿಯಾದ ಜೆಡಿಎಸ್ ಹಾಗೂ ಕಾಂಗ್ರೆಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಮೇಯರ್ ಅಧಿಕಾರಾವಧಿ ಮುಕ್ತಾಯವಾಗಿದ್ದರೂ ಸಭೆ ನಡೆಸುತ್ತಿರುವ ಬಗ್ಗೆ ಸರಿಯಾದ ಸ್ಪಷ್ಟನೆಯನ್ನೂ ನೀಡದೆ, ಕಾರ್ಯಸೂಚಿ ಬಗ್ಗೆ ಕೌನ್ಸಿಲ್‌ನಲ್ಲಿ ಚರ್ಚೆಗೆ ಅವಕಾಶವನ್ನೂ ನೀಡದೆ ಅನುಮೋದನೆ ನೀಡಿದ್ದು ಖಂಡನೀಯ ಎಂದು ಆಕ್ಷೇಪಿಸಿದರು. ಮೇಯರ್ ಹಾಗೂ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಸದನದ ಬಾವಿಯಲ್ಲಿ ಜಮಾಯಿಸಿ, ಪ್ರತಿಭಟನೆ ಆರಂಭಿಸಿದರು.



ಸಭೆ ಮುಗಿದ ನಂತರವೂ ಪ್ರತಿಭಟನೆ

ಮೈಸೂರು ನಗರ ಪಾಲಿಕೆ ಇತಿಹಾಸದಲ್ಲೇ ಕೌನ್ಸಿಲ್ ಸಭೆ ಮುಗಿದ ನಂತರವೂ ಸದನದ ಬಾವಿಗಿಳಿದು ಪ್ರತಿಭಟಿಸಿದ ಘಟನೆ ಇಂದು ನಡೆಯಿತು. ಗದ್ದಲದ ನಡುವೆಯೇ ಗ್ಯಾಸ್ ಪೈಪ್‌ಲೈನ್ ಯೋಜನೆಗೆ ಮೇಯರ್ ಕೌನ್ಸಿಲ್ ಅನುಮೋದನೆ ಘೋಷಿಸಿ, ಸಭೆ ಮುಕ್ತಾಯಗೊಳಿಸಿ ಹೊರನಡೆದರು. ಇದರಿಂದ ವಿಚಲಿತರಾದ ಕಾಂಗ್ರೆಸ್ ಹಾಗೂ ಜೆಡಿಎಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಮೇಯರ್ ಪೀಠದೆದುರು ಜಮಾಯಿಸಿ, ಮೇಯರ್ ನಡೆ ಹಾಗೂ ಇದಕ್ಕೆ ಅನುಕೂಲ ಮಾಡಿಕೊಟ್ಟ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. 40 ಪರ್ಸೆಂಟ್ ಸರ್ಕಾರ, ರೈತ ವಿರೋಧಿ, ಜನ ವಿರೋಧಿ ಸರ್ಕಾರ ಎಂದು ಕೂಗಿದರು. ಚರ್ಚೆಗೂ ಅವಕಾಶ ನೀಡದೆ ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಅರ್ಧ ಗಂಟೆಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿದ ವಿಪಕ್ಷ ಸದಸ್ಯರು, ಈ ವಿಚಾರವಾಗಿ ತಮ್ಮ ಪಕ್ಷಗಳ ನಾಯಕರೊಂದಿಗೆ ಚರ್ಚಿಸಿ ಮುಂದುವರೆಯಲು ನಿರ್ಧರಿಸಿದ್ದಾರೆ.

ಸಭೆಗೆ ಅವಕಾಶವಿದೆಯೇ?: ಸಭೆ ಆರಂಭವಾಗುತ್ತಿದ್ದಂತೆ ಮಾಜಿ ಉಪಮೇಯರ್ ಶ್ರೀಧರ್, ಮೇಯರ್ ಅಧಿಕಾರಾವಧಿ ಮುಗಿದಿದ್ದರೂ ಸಭೆ ನಡೆಸಲು ಕಾಯ್ದೆಯಲ್ಲಿ ಅವಕಾಶವಿದೆಯೇ? ಇದಕ್ಕೆ ಸರ್ಕಾರದ ಅನುಮತಿ ಇದೆಯೇ? ಅವಕಾಶವಿದ್ದರೆ ಕಳೆದ 3 ತಿಂಗಳಲ್ಲಿ ಏಕೆ ಸಭೆ ನಡೆಸಲಿಲ್ಲ? ಎಂದು ಪ್ರಶ್ನಿಸಿದರು. ಈ ವೇಳೆ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಮಾತನಾಡಿ, ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಆಕ್ಟ್–1976ರಲ್ಲಿರುವ ಅಂಶವನ್ನು ಉಲ್ಲೇಖಿಸಿ, ಸಭೆ ನಡೆಸಬಹುದು ಎಂದು ಸ್ಪಷ್ಟನೆ ನೀಡಿದರು. ಮಾಜಿ ಮೇಯರ್ ಅಯೂಬ್ ಖಾನ್, ಮೇಯರ್ ಅಧಿಕಾರಾವಧಿ ಮುಕ್ತಾಯವಾಗುವ ಕೊನೆಯ ತಿಂಗಳು ಸಭೆ ನಡೆಸುವ ಕಾನೂನಿನಡಿ ಅವಕಾಶವಿಲ್ಲ. ಆದರೆ ಚುನಾವಣೆ ನಡೆಯದ ಕಾರಣ ಮೇಯರ್ ಆಗಿ ಮುಂದುವರೆದಿರುವುದು ಸರಿ. ಹಾಗಾದರೆ ಸುನಂದಾ ಪಾಲನೇತ್ರ ಅವರ ಅಧಿಕಾರದ ಕೊನೆಯ ತಿಂಗಳು ಯಾವುದು? ಎಂದು ಸ್ಪಷ್ಟಪಡಿಸುವಂತೆ ಪಟ್ಟು ಹಿಡಿದರು.

'ಕೌನ್ಸಿಲ್ ಸಭೆಗೆ ಕಾರ್ಯಸೂಚಿ ಮಂಡನೆಯಾಗುವ ಮೊದಲು ಸ್ಥಾಯಿ ಸಮಿತಿಯಲ್ಲಿ ಚರ್ಚೆಯಾಗಿ ಅನುಮೋದನೆ ಪಡೆಯಬೇಕು. ಆದರೆ ಸದ್ಯ ಸ್ಥಾಯಿ ಸಮಿತಿಗಳ ಸದಸ್ಯರ ಅವಧಿ ಮುಕ್ತಾಯವಾಗಿದೆ. ಇದು ಮುಂದುವರೆದ ಸಭೆಯಾಗಿದ್ದರಿಂದ ಈಗಾಗಲೇ ಸ್ಥಾಯಿ ಸಮಿತಿಗಳ ಅನುಮೋದನೆ ಪಡೆಯಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ. ಇನ್ನೂ ಮೇಯರ್ ಅಧಿಕಾರಾವಧಿ ಮುಂದುವರೆದಿದೆ ಎನ್ನುವುದಾದರೆ ಮುಂದಿನ ಸಭೆ ಹೇಗೆ ನಡೆಸುತ್ತೀರಿ?' ಎಂದು ವಿಪಕ್ಷ(ಜೆಡಿಎಸ್) ನಾಯಕಿ ಅಶ್ವಿನಿ ಅನಂತು ಪ್ರಶ್ನಿಸಿದರು.

ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ರಜನಿ ಅಣ್ಣಯ್ಯ, ಎಸ್‌ಬಿಎಂ ಮಂಜು, ಶೋಭಾ ಸುನಿಲ್, ಷಫಿ ಅಹಮದ್, ಆರಿಫ್ ಹುಸೇನ್, ಕೆ.ವಿ.ಶ್ರೀಧರ್, ಗೋಪಿ, ಪ್ರೇಮಾ ಶಂಕರೇಗೌಡ, ವಿ.ರಮೇಶ್ ಸೇರಿದಂತೆ ಜೆಡಿಎಸ್ ಹಾಗೂ ಕಾಂಗ್ರೆಸ್‌ನ ಎಲ್ಲಾ ಸದಸ್ಯರೂ ಸಭೆಯ ಸಿಂಧುತ್ವದ ಬಗ್ಗೆ ಸೂಕ್ತ ಸ್ಪಷ್ಟನೆ ನೀಡಿ ಮುಂದುವರೆಸುವಂತೆ ಆಗ್ರಹಿಸಿದರು.

ಆಯುಕ್ತರ ಸ್ಪಷ್ಟನೆ: ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಆಕ್ಟ್–1976ರ ಪ್ರಕಾರ ಮೇಯರ್ ಅವಧಿ(1 ವರ್ಷ) ಮುಕ್ತಾಯವಾಗಿದ್ದರೂ ಚುನಾವಣೆ ಆಗುವವರೆಗೂ ಅವರೇ ಮೇಯರ್ ಆಗಿ ಮುಂದುವರೆಯಬಹುದು. ಅಲ್ಲಿ ಹಂಗಾಮಿ ಎನ್ನುವ ಪದವೇ ಇಲ್ಲ. ಸಭೆಯ ಬಗ್ಗೆ ಪ್ರಸ್ತಾಪವೇ ಇಲ್ಲ. ಚುನಾವಣೆವರೆಗೂ ಮೇಯರ್, ಉಪಮೇಯರ್ ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷರ ಅಧಿಕಾರಾವಧಿ ಮುಂದುವರೆಯಲಿದೆ. ಆದರೆ ಸಮಿತಿ ಸದಸ್ಯರ ಅಧಿಕಾರ ಮುಕ್ತಾಯವಾಗುತ್ತದೆ. ಚುನಾವಣೆ ಆಗದೆ ಮೇಯರ್ ಆಗಿ ಮುಂದುವರೆಯುವವರಿಗೆ ಅಧಿಕಾರವಿರುತ್ತದೆ. ಮೇಯರ್ ಸುನಂದಾ ಪಾಲನೇತ್ರ ಅವರ ಅಧಿಕಾರಾವಧಿ 2021ರ ಫೆ.23ರಿಂದ 2022ರ ಫೆ.23ರವರೆಗೆ ಇತ್ತಾದರೂ ಚುನಾವಣೆ ಘೋಷಣೆಯಾಗದ ಕಾರಣ ಇವರೇ ಮೇಯರ್ ಆಗಿ ಮುಂದುವರೆದಿದ್ದಾರೆ ಹಾಗಾಗಿ ಸಭೆ ನಡೆಸಲು ಆಕ್ಟ್‌ನಲ್ಲಿ ಅವಕಾಶವಿದೆ ಎಂದು ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ನಾಲ್ಕೈದು ಬಾರಿ ಸಭೆಗೆ ಸ್ಪಷ್ಟನೆ ನೀಡಿದರು.

ನಮಗೂ ಅಧಿಕಾರ ಕೊಡಿ: 'ಮೇಯರ್ ಅವರಿಗೆ ಸಭೆ ನಡೆಸಲು ಅವಕಾಶವಿರುವಂತೆ ನಾಲ್ಕು ಸ್ಥಾಯಿ ಸಮಿತಿಗಳಿಗೂ ಈ ಅಧಿಕಾರ ನೀಡಬೇಕು' ಎಂದು ವರ್ಕ್ಸ್ ಕಮಿಟಿ ಅಧ್ಯಕ್ಷ ಜಿ.ಎಸ್.ಸತ್ಯರಾಜ್ ಆಗ್ರಹಿಸಿದರು. ಈ ಬಗ್ಗೆ ಸ್ಪಷ್ಟನೆ ನೀಡಿದ ಮೇಯರ್ ಹಾಗೂ ಆಯುಕ್ತರು, ಸ್ಥಾಯಿ ಸಮಿತಿ ಅಧ್ಯಕ್ಷರ ಅಧಿಕಾರಾವಧಿ ಚುನಾವಣೆ ಘೋಷಣೆವರೆಗೂ ಮುಂದುವರೆಯುತ್ತದೆ. ಆದರೆ ಸಮಿತಿ ಸದಸ್ಯರ ಅಧಿಕಾರಾವಧಿ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಸ್ಪಷ್ಟನೆ ಕೇಳುವುದಾಗಿ ಹೇಳಿದರು. ಇದರಿಂದ ಸಮಾಧಾನಗೊಳ್ಳದ ಜಿ.ಎಸ್. ಸತ್ಯರಾಜ್ ಅವರೊಂದಿಗೆ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷೆ ಎಂ.ಎಸ್.ಶೋಭಾ, ಆರೋಗ್ಯ ಸಮಿತಿ ಅಧ್ಯಕ್ಷೆ ಉಷಾ, ಸದಸ್ಯ ವಿ.ರಮೇಶ್, ಲೆಕ್ಕ ಸಮಿತಿ ಅಧ್ಯಕ್ಷೆ ನಿರ್ಮಲಾ ಅವರು ಸದನದ ಬಾವಿಗಿಳಿದು ಪ್ರತಿಭಟನೆ ಆರಂಭಿಸಿದರು. ವೀಳ್ಯದೆಲೆ ಬೆಳೆಗಾರರ 45 ವರ್ಷಗಳ ಹೋರಾಟಕ್ಕೆ ನ್ಯಾಯ ಸಿಕ್ಕಿಲ್ಲ ಎಂದು ಸದಸ್ಯೆ ಪಲ್ಲವಿ ಬೇಗಂ ಸಹ ಬಾವಿಗಿಳಿದು ಪ್ರತಿಭಟಿಸಿದರು.

ಮೇಯರ್ ಆಕ್ರೋಶ: ಸಭೆ ನಡೆಸಲು ಅವಕಾಶವಿರುವ ಬಗ್ಗೆ ಆಯುಕ್ತರು ನಾಲ್ಕೈದು ಬಾರಿ ಸ್ಪಷ್ಟನೆ ನೀಡಿದ್ದರೂ ಮತ್ತೆ ಅದೇ ಪ್ರಶ್ನೆ ಕೇಳುವುದು ಸರಿಯಲ್ಲ ಎಂದು ವಿಪಕ್ಷಗಳ ವಿರುದ್ಧ ಬಿಜೆಪಿಯ ಶಿವಕುಮಾರ್, ಬಿ.ವಿ. ಮಂಜುನಾಥ್, ಎಂ.ಯು.ಸುಬ್ಬಯ್ಯ ಮತ್ತಿತರರು ಸಭೆ ಆರಂಭಿಸುವಂತೆ ಮೇಯರ್‌ಗೆ ಆಗ್ರಹಿಸಿದರು. ಗದ್ದಲದಿಂದ ಸಿಟ್ಟಿಗೆದ್ದ ಮೇಯರ್ ಎದ್ದು ನಿಂತು, ಬಿಜೆಪಿ ಸದಸ್ಯರ ಕಡೆ ನೋಡುತ್ತಲೇ 'ಮೊದಲ ದಿನದಿಂದ ಹೆಜ್ಜೆ ಹೆಜ್ಜೆಗೂ ಹೀಗೇ ಮಾಡುತ್ತಿದ್ದೀರಿ' ಎಂದು ಸಿಟ್ಟಿನಿಂದ ಹೇಳಿದರು.

ಮತ್ತೆರಡು ನಿರ್ಣಯ...

▶ ನೀರಿನ ಶುಲ್ಕದ ಬಾಕಿ ಮೊತ್ತಕ್ಕೆ ಚಕ್ರಬಡ್ಡಿ ವಿಧಿಸುವ ಬದಲು ಸರಳ ಬಡ್ಡಿ ವಿಧಿಸಲು ಕೌನ್ಸಿಲ್ ಅನುಮೋದನೆ ದೊರಕಿತು. ತಿಂಗಳ ಬಿಲ್‌ನಲ್ಲಿ ಹಿಂದಿನ ತಿಂಗಳ ಒಟ್ಟು ಬಾಕಿ (ಅಸಲು+ಬಡ್ಡಿ) ಮೊತ್ತಕ್ಕೆ ಬಡ್ಡಿ ವಿಧಿಸುತ್ತಿರುವುದರಿಂದ ಗ್ರಾಹಕರಿಗೆ ಹೆಚ್ಚಿನ ಹೊರೆಯಾಗುತ್ತಿದೆ. ಹಾಗಾಗಿ ತಿಂಗಳ ಬಿಲ್‌ನಲ್ಲಿ ಹಿಂದಿನ ಒಟ್ಟು ಬಾಕಿ ಮೊತ್ತದ ಅಸಲು ಅಂಶಕ್ಕೆ ಮಾತ್ರ ಶೇ.1 ರಂತೆ ಸರಳ ಬಡ್ಡಿ ವಿಧಿಸಲು ತೀರ್ಮಾನಿಸಲಾಯಿತು.

▶ ನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಮನೆಗಳಿಗೂ ಎರಡು ಬಟ್ಟೆ ಬ್ಯಾಗ್ ವಿತರಿಸುವ ಕ್ರಿಯಾಯೋಜನೆ ರದ್ದುಪಡಿಸಲು ಕೌನ್ಸಿಲ್ ನಿರ್ಣಯಿಸಿರುವುದಾಗಿ ಮೇಯರ್ ಘೋಷಿಸಿದರು.

ಅಧಿಕಾರಾವಧಿ ಮುಗಿದರೂ ಮೇಯರ್ ಅಧಿಕಾರ; ಸ್ಥಾಯಿ ಸಮಿತಿಗಳನ್ನೂ ಮಾನ್ಯ ಮಾಡಿ

ಎಂಎಲ್‌ಸಿಗಳಾದ ಶ್ರೀಕಂಠೇಗೌಡ, ಮಂಜೇಗೌಡ ಆಗ್ರಹ

ಮೈಸೂರು, ಏ.29(ಎಸ್‌ಬಿಡಿ)– ಮೇಯರ್ ಅಧಿಕಾರಾವಧಿ ಮುಕ್ತಾಯವಾದ ಬಳಿಕ ಸಭೆ ನಡೆಸುತ್ತಿರುವುದು ಮೈಸೂರು ನಗರ ಪಾಲಿಕೆ ಇತಿಹಾಸದಲ್ಲಿ ಇದೇ ಮೊದಲು. ಈ ಅಧಿಕಾರವನ್ನು ಸ್ಥಾಯಿ ಸಮಿತಿಗಳಿಗೂ ನೀಡಬೇಕು ಎಂದು ವಿಧಾನಪರಿಷತ್ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡ ಹಾಗೂ ಸಿ.ಎನ್.ಮಂಜೇಗೌಡ ಪಟ್ಟು ಹಿಡಿಯುವ ಮೂಲಕ ಮೇಯರ್ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ಪಾಲಿಕೆ ಇತಿಹಾಸದಲ್ಲೇ ಇಂತಹ ಸಂದರ್ಭ ಬಂದಿರಲಿಲ್ಲ. ಅಧಿಕಾರಾವಧಿ ಮುಕ್ತಾಯವಾದ ಬಳಿಕವೂ ಸಭೆ ನಡೆಸುವ ಪ್ರಯತ್ನ ಮಾಡಿದ್ದೀರಿ. ನೀವು ಮೇಯರ್ ಆಗುವುದಕ್ಕೆ ಯಾರ ಆಕ್ಷೇಪಣೆಯಿಲ್ಲ. ಆದರೆ ಸಭೆ ನಡೆಸಲು ಅವರ ತಕರಾರಿದ್ದು, ನಿಮ್ಮ ನಡೆ ಗೊಂದಲಕ್ಕೆ ಎಡೆ ಮಾಡಿಕೊಟ್ಟಿದೆ. ಮೊದಲು ಸದಸ್ಯರ ಪ್ರಶ್ನೆಗಳಿಗೆ ಸ್ಪಷ್ಟನೆ ನೀಡಿ. ಹಾಗೆಯೇ ನಿಮಗೆ ದೊರೆತಿರುವ ಅಧಿಕಾರವನ್ನು ಸ್ಥಾಯಿ ಸಮಿತಿಗಳಿಗೂ ಕಲ್ಪಿಸಿಕೊಡಿ. ನಮ್ಮೆಲ್ಲರಿಗೂ ಮೈಸೂರಿನ ಮೇಲೆ ಕಾಳಜಿಯಿದೆ. ಮುಖ್ಯಮಂತ್ರಿಯಾದಿಯಾಗಿ ಎಲ್ಲಾ ಸಚಿವರೂ ಅಧಿಕಾರಾವಧಿಯ ಕೊನೆಯಲ್ಲಿ ನಿರ್ಣಯ ತೆಗೆದುಕೊಳ್ಳುವುದಿಲ್ಲ. ನನಗೆ ತಿಳಿದಿರುವಂತೆ ನೀವೂ ಸಭೆ ನಡೆಸುವಂತಿಲ್ಲ' ಎಂದು ತಿಳಿಸಿದರು.

ಘೋಷಣೆಗೆ ಪಟ್ಟು: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಮೇಯರ್ ಅಧಿಕಾರಾವಧಿಯ ಕೊನೆ ತಿಂಗಳು ಸಭೆ ನಡೆಸಲು ಅವಕಾಶವಿಲ್ಲ ಎಂಬುದು ಸದಸ್ಯರ ವಾದ. ಈ ಬಗ್ಗೆ ಸರಿಯಾದ ರೀತಿಯಲ್ಲಿ ಸ್ಪಷ್ಟನೆ ನೀಡಿ, ಸಭೆ ನಡೆಸಿ. ಇಲ್ಲಿ ಪಾಲಿಸಿದ ಕಾನೂನು ಎಲ್ಲಾ ಕಡೆಗೂ ಅನ್ವಯವಾಗುತ್ತದೆ. ಹಾಗಾಗಿ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು ಎಂದು ಆಗ್ರಹಿಸಿದರು. ಮುಂದೂಡಿದ್ದ ಸಭೆ ಒಂದು ಗಂಟೆ ನಂತರ ಪುನಾರಂಭವಾದಾಗಲೂ ಸಿ.ಎನ್.ಮಂಜೇಗೌಡ ಅವರು ತಮ್ಮ ಪಟ್ಟು ಮುಂದುವರೆಸಿ, ಸ್ಥಾಯಿ ಸಮಿತಿ ಸಭೆ ನಡೆಸಲು ಅಧಿಕಾರ ಕೋರಿ ಸದನದ ಬಾವಿಗಿಳಿದು ಪ್ರತಿಭಟಿಸುತ್ತಿರುವ ಸಂದರ್ಭದಲ್ಲಿ ಸಭೆ ಹೇಗೆ ನಡೆಸುತ್ತೀರಿ? ನಿರ್ಣಯಗಳನ್ನು ಹೇಗೆ ತೆಗೆದುಕೊಳ್ಳುತ್ತೀರಿ? ಇದು ಸರಿಯಲ್ಲ. ಕಾನೂನಿನಲ್ಲಿ ಅವಕಾಶವಿಲ್ಲ ಎಂದಾದರೆ ಈ ಸಭೆ ಅಸಿಂಧುವಲ್ಲವೇ? ಎಂದು ಪ್ರಶ್ನಿಸಿದರು. ಇವರ ಆಕ್ಷೇಪದ ನಡುವೆಯೇ ಮೇಯರ್, ಗ್ಯಾಸ್ ಪೈಪ್‌ಲೈನ್ ಯೋಜನೆಗೆ ಅನುಮೋದನೆ ನೀಡಿ, ಸಭೆ ಮುಕ್ತಾಗೊಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಶೋಷಿತ ವರ್ಗಗಳ ಐಕ್ಯತಾ ಸಮಾವೇಶದ ಪ್ರಚಾರ ರಥಕ್ಕೆ ಚಾಲನೆ



ಮೈಸೂರು, ಏ.29(ಜಿಎ)– ಶೋಷಿತ ವರ್ಗಗಳ ಐಕ್ಯತಾ ಸಮಾವೇಶದ ಪ್ರಚಾರ ರಥಕ್ಕೆ ಮಾಜಿ ಸಚಿವ ಎಚ್.ಸಿ.ಮಹದೇವಪ್ಪ ಶುಕ್ರವಾರ ಚಾಲನೆ ನೀಡಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯಿಂದ ಮಾಜಿ ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಮೇ. 4 ರಂದು ನಡೆಯಲ್ಲಿರುವ ಐಕ್ಯತಾ ಸಮಾವೇಶದ ಪ್ರಚಾರ ರಥಕ್ಕೆ ನಗರದ ಪುರಭವನದ ಮುಂಭಾಗ ಎಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಶೋಷಿತರ ಮೀಸಲಾತಿ ವಿಚಾರದಲ್ಲಿ ಸಂವಿಧಾನ ಬಾಹಿರವಾಗಿ ನಡೆಯುತ್ತಿದ್ದು, ಸಂವಿಧಾನದ ಆಶಯಗಳನ್ನು ಜಾರಿಗೆ ತರುವ ನಿಟ್ಟಿನಲ್ಲಿ ಇಂತಹ ಸಮಾವೇಶ ಪ್ರಸ್ತುತವಾಗಿವೆ. ಇಂದು ರಾಜಕೀಯ ಮೀಸಲಾತಿ ಬದಲಾವಣೆಗೆ ಮುಂದಾಗುವ ಮೂಲಕ ಹಿಂದುಳಿದ ಸಮುದಾಯದ ಹಕ್ಕನ್ನು ಕಸಿದುಕೊಳ್ಳುವ ಕೆಲಸಕ್ಕೆ ಬಿಜೆಪಿ ಕೈಹಾಕಿದೆ. ಇದರ ವಿರುದ್ಧ ಇಂತಹ ಸಮಾವೇಶದ ಮೂಲಕ ಜನಜಾಗೃತಿ ಮೂಡಿಸಬೇಕಾದ ಅವಶ್ಯಕತೆಯಿದೆ. ದನಿ ಇಲ್ಲದವರ ಪರವಾಗಿ ಪಕ್ಷ ಸದಾ ಇರಲಿದೆ ಎಂದರು.

ಸಿದ್ದರಾಮಯ್ಯನವರಿಗೆ ಕ್ಷೇತ್ರವೇ ಇಲ್ಲದೆ ಅತಂತ್ರರಾಗಿದ್ದಾರೆಂಬ ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಹೇಳಿಕೆಗೆ ಪ್ರತಿಕ್ರಿಯಿಸಿ ಸಿದ್ದರಾಮಯ್ಯ ಅವರು 224 ಕ್ಷೇತ್ರದ ಅಭ್ಯರ್ಥಿಯಾಗಿದ್ದಾರೆ. ಅಷ್ಟೂ ಕ್ಷೇತ್ರ ಅವರದ್ದೇ ಆಗಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗದ ಕಾಂಗ್ರೆಸ್ ಸಮಿತಿಯ ರಾಜ್ಯಾಧ್ಯಕ್ಷ ಹಾಗೂ ಮಾಜಿ ಶಾಸಕರಾದ ಎಂ.ಡಿ.ಲಕ್ಷ್ಮೀನಾರಾಯಣ್ ಮಾತನಾಡಿ, ಇದು ಪಕ್ಷಾತೀತವಾಗಿ ಹಾಗೂ ಬಿಜೆಪಿ ವಿರುದ್ಧ ನಡೆಯುತ್ತಿರುವ ಹೋರಾಟವಾಗಿದೆ ಎಂದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಮುಖಂಡ ಹರೀಶ್ ಗೌಡ, ರಾಜ್ಯ ಹಿಂದುಳಿದ ವರ್ಗಗಳ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಮುಖಂಡರಾದ ನಾಗೇಶ್, ಹರೀಶ್, ಮಂಜುನಾಥ್, ಪವನ್ ಸಿದ್ದರಾಮು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಐಕ್ಯತಾ ಸಮಾವೇಶದ ಪೂರ್ವಭಾವಿ ಸಭೆ

ಮೈಸೂರು, ಏ.29–ಹಿಂದುಳಿದ ವರ್ಗಗಳ, ಶೋಷಿತ ಸಮುದಾಯಗಳ ಐಕ್ಯತಾ ಸಮಾವೇಶ ಮೇ 4ರಂದು ನಡೆಯಲಿದ್ದು, ಈ ಸಮಾವೇಶದ ಪೂರ್ವಭಾವಿ ಸಭೆ ಮೇ 1 ರಂದು ಬೆಳಗ್ಗೆ 11 ಗಂಟೆಗೆ ಮೈಸೂರಿನ ಸಿದ್ಧಾರ್ಥ ನಗರದಲ್ಲಿರುವ ಕನಕ ಭವನದಲ್ಲಿ ನಡೆಯಲಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ತಿಳಿಸಿದ್ದಾರೆ.

ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿ ರಕ್ಷಣೆಗಾಗಿ ಈ ಸಮಾವೇಶ ನಡೆಯಲಿದ್ದು, ಭಾನುವಾರ ನಡೆಯಲಿರುವ ಪೂರ್ವಭಾವಿ ಸಭೆಯಲ್ಲಿ ಹಿಂದುಳಿದ ಮತ್ತು ಶೋಷಿತ ಸಮುದಾಯದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅವರು ಮನವಿ ಮಾಡಿದ್ದಾರೆ.

ಮೈಸೂರು ಉತ್ಸವಕ್ಕೆ ಶಾಸಕ ರಾಮದಾಸ್ ಚಾಲನೆ





ಮೈಸೂರು, ಏ.29(ಜಿಎ)– ಸೈಮನ್ ಎಕ್ಸಿಬಿಟರ್ಸ್ ವತಿಯಿಂದ ದೊಡ್ಡಕೆರೆ ಮೈದಾನದ ಪಕ್ಕದಲ್ಲಿರುವ ಜೆ.ಎಸ್.ಎಸ್ ಮೈದಾನದಲ್ಲಿ ಆಯೋಜಿಸಿರುವ 'ಮೈಸೂರು ಉತ್ಸವ'ಕ್ಕೆ ಶಾಸಕ ಎಸ್.ಎ. ರಾಮದಾಸ್ ಶುಕ್ರವಾರ ಸಂಜೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಹಲವಾರು ವರ್ಷಗಳಿಂದ ಈ ಸಂಸ್ಥೆ ವಸ್ತು ಪ್ರದರ್ಶನ ಆಯೋಜಿಸಿಕೊಂಡು ಬಂದಿದೆ. ಆದರೆ ಈ ಬಾರಿ ಆಯೋಜಿಸಿರುವ ವಸ್ತು ಪ್ರದರ್ಶನ ಬಹಳ ವಿಭಿನ್ನವಾಗಿದೆ ಏಕೆಂದರೆ ಮೊದಲನೇ ಬಾರಿ ಮಕ್ಕಳಿಗಾಗಿ ವಿವಿಧ ವಿಜ್ಞಾನಗಳ ಪರಿಕರವನ್ನು ಒಂದೇ ಸ್ಥಳದಲ್ಲಿ ನೋಡುವ ಅವಕಾಶವನ್ನು ಕಲ್ಪಿಸಲಾಗಿದ್ದು, ಮಕ್ಕಳ ಶಿಕ್ಷಣಕ್ಕೆ ಇದು ಸಹಕಾರಿಯಾಗಲಿದೆ. ಇದರ ಜೊತೆಗೆ ಅಮ್ಯೂಸ್‌ಮೆಂಟ್ ಪಾರ್ಕ್ ಹಾಗೂ ತರಹೇವಾರಿ ತಿಂಡಿ ತಿನಿಸುಗಳೂ ಒಂದೇ ಸೂರಿನಡೆ ದೊರೆಯಲ್ಲಿದೆ. ಮನರಂಜನೆ ಜೊತೆಗೆ ವೈಜ್ಞಾನಿಕ ಕೌತುಕಗಳನ್ನು ತುಂಬಿಕೊಳ್ಳಲು ಅದ್ಭುತ ಸ್ಥಳವಾಗಿದೆ ಎಂದರು.

ಇದೇ ವೇಳೆ ಸೈಮನ್ ಎಕ್ಸಿಬಿಟರ್ಸ್ ನಿರ್ದೇಶಕರಾದ ಎಂ.ಎಸ್. ನಾಗಚಂದ್ರ ಅವರು ಮಾತನಾಡಿ, 'ಮೈಸೂರು ಉತ್ಸವ'ದಲ್ಲಿ 'ಸ್ಪೇಸ್ ಟೂರ್' ನೋಡಲು ಮೈಸೂರಿನ ಎಲ್ಲಾ ಶಾಲಾ ವಿದ್ಯಾರ್ಥಿಗಳನ್ನು ಆಹ್ವಾನಿಸಲಾಗುವುದು ಮತ್ತು 15 ದಿನಗಳ ನಂತರ ಶಾಲಾ ಮಕ್ಕಳಿಗೆ ವಿಶೇಷ ರಿಯಾಯಿತಿ ನೀಡಲಾಗುತ್ತದೆ ಎಂದು ತಿಳಿಸಿದರು.

ದೊಡ್ಡಕೆರೆ ಮೈದಾನದ ಪಕ್ಕದ ಜೆ.ಎಸ್.ಎಸ್ ಮೈದಾನದಲ್ಲಿ ಏಪ್ರಿಲ್ 29 ರಿಂದ ಮೇ 29 ರವರೆಗೂ ಆಯೋಜಿಸಿರುವ ಮೈಸೂರು ಉತ್ಸವದಲ್ಲಿ ಕರ್ನಾಟಕದಲ್ಲೇ ಮೊದಲ ಬಾರಿಗೆ 'ಸ್ಪೇಸ್ ಟೂರ್' ಎಂಬ ಪ್ರದರ್ಶನ ಏರ್ಪಡಿಸಿದ್ದು, ಮಂಗಳನ ಅಂಗಳಕ್ಕೆ ಕರೆದೊಯ್ಯಲಿದೆ. ಅಲ್ಲಿಂದಲೇ ನವಗ್ರಹಗಳು, ಸೌರಮಂಡಲದ ವಿಸ್ಮಯಗಳು, ರಾಕೆಟ್, ಉಪಗ್ರಹಗಳು, ಸ್ಪೇಸ್ ಸ್ಟೇಷನ್ ಮಾದರಿಗಳು ವಿಶೇಷ ಅನುಭವಗಳನ್ನು ನೀಡಲಿದೆ ಹಾಗೂ ಅನ್ಯ ಗ್ರಹ ಜೀವಿಗಳ ಮಾದರಿಯನ್ನು ನೋಡಬಹುದಾಗಿದೆ.

ಸೈಮನ್ ಎಕ್ಸಿಬಿಟರ್ಸ್ ನಿರ್ದೇಶಕರಾದ ಎಂ.ಎಸ್. ನಾಗಚಂದ್ರ ಅವರ ಕಲ್ಪನೆಯಲ್ಲಿ ರೂಪುಗೊಂಡಿರುವ ಸ್ಪೇಸ್ ಟೂರ್ ಅನ್ನು ಹೈದರಾಬಾದ್ ಕಲಾವಿದರು ಮತ್ತು ತಂತ್ರಜ್ಞರ ಕೈಚಳಕದಲ್ಲಿ ಮೂಡಿಬಂದಿದೆ. ಇಂದು ಆರಂಭವಾಗಿರುವ 'ಮೈಸೂರು ಉತ್ಸವ'ವು 31 ದಿನಗಳ ಬೃಹತ್ ಪ್ರದರ್ಶನಗೊಳ್ಳಲಿದ್ದು, ನಿತ್ಯವು ಕಲಾವಿದ ರಮೇಶ್ ಹಂಗಳ ಅವರ ತಂಡದ ವತಿಯಿಂದ ವೈವಿಧ್ಯಮಯ ಮನರಂಜನೆಗಳೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಅಷ್ಟೇ ಅಲ್ಲದೇ ಮನೆಯನ್ನು ಅಂದವಾಗಿಸಲು ಪೀಠೋಪಕರಣ ಮಾರಾಟ, ವಸ್ತು ಪ್ರದರ್ಶನ, ಟ್ರೆಂಡಿಂಗ್ ಬಟ್ಟೆಗಳು, ಗ್ಯಾಜೆಟ್‌ಗಳು, ಮಕ್ಕಳಿಗಾಗಿ ಅಮ್ಯೂಸ್‌ಮೆಂಟ್ ಪಾರ್ಕ್ ಕೂಡ ಇದೆ. ಮೈಸೂರು ಉತ್ಸವಕ್ಕೆ ಬೆಳಗ್ಗೆ 11 ರಿಂದ ರಾತ್ರಿ 10 ರವರೆಗೂ ಪ್ರವೇಶಾವಕಾಶ ಕಲ್ಪಿಸಲಾಗಿದೆ.



ಫೇಸ್‌ಬುಕ್‌ನಲ್ಲಿ ಅವಹೇಳನಕಾರಿ ಹೇಳಿಕೆ ಪ್ರಕರಣ

ಚಿಕ್ಕೋಡಿ ಪೊಲೀಸರಿಂದ ಹಾರೋಹಳ್ಳಿ ರವೀಂದ್ರ ವಶಕ್ಕೆ

ಮೈಸೂರು, ಏ.29(ಆರ್‌ಕೆ)–2017ರಲ್ಲಿ ದಾಖಲಾಗಿದ್ದ ಪ್ರಕರಣ ಸಂಬಂಧ ಚಿಕ್ಕೋಡಿ ಠಾಣೆ ಪೊಲೀಸರು ಮೈಸೂರು ತಾಲೂಕಿನ ಹಾರೋಹಳ್ಳಿ ರವೀಂದ್ರ ಅವರನ್ನು ಇಂದು ವಶಕ್ಕೆ ಪಡೆದಿದ್ದಾರೆ.



ಫೇಸ್‌ಬುಕ್, ವಾಟ್ಸಾಪ್‌ನಲ್ಲಿ ಶ್ರೀಕೃಷ್ಣ ಸಮಾಜದವರಿಗೆ ಅವಮಾನವಾಗುವ ಹೇಳಿಕೆಗಳನ್ನು ಪೋಸ್ಟ್ ಮಾಡಿದ್ದಾರೆಂದು ಆರೋಪಿಸಿ ಬೆಳಗಾವಿ ಜಿಲ್ಲೆಯ ಚಂದ್ರಶೇಖರ ಬಾಪು ಮುಂಡೆ ಎಂಬುವವರು 2017ರ ಡಿಸೆಂಬರ್ 27ರಂದು ದಲಿತ ಹೋರಾಟಗಾರ, ಬರಹಗಾರ ಹಾರೋಹಳ್ಳಿ ರವೀಂದ್ರ ವಿರುದ್ಧ ಚಿಕ್ಕೋಡಿ ಠಾಣೆಗೆ ದೂರು ನೀಡಿದ್ದರು. ಪ್ರಕರಣ ಸಂಬಂಧ 2019ರಿಂದಲೂ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ರವೀಂದ್ರರನ್ನು ಬಂಧಿಸುವಂತೆ ಕೋರ್ಟ್ ಆದೇಶಿಸಿದ್ದ ಹಿನ್ನೆಲೆಯಲ್ಲಿ ಇಂದು ಪೊಲೀಸರು ವರುಣಾ ಹೋಬಳಿಯ ಹಾರೋಹಳ್ಳಿಯ ಅವರ ಮನೆಯಲ್ಲಿ ವಶಕ್ಕೆ ಪಡೆದು, ಕರೆದೊಯ್ದಿದ್ದಾರೆ.

ಸಹಾಯಕ ಪ್ರಾಧ್ಯಾಪಕರ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ

ಸೌಮ್ಯರ ಪೋಸ್ಟ್ ಡಾಕ್ಟರಲ್ ಫೆಲೋಶಿಪ್ ಅಮಾನತು

ಮೈಸೂರು, ಏ.29(ಆರ್‌ಕೆ)–ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಬಂಧಿತರಾಗಿರುವ ಮೈಸೂರು ವಿಶ್ವವಿದ್ಯಾನಿಲಯದ ಭೂಗೋಳಶಾಸ್ತ್ರ ಅತಿಥಿ ಉಪನ್ಯಾಸಕಿ ಡಾ. ಆರ್.ಸೌಮ್ಯ ಅವರ ಪೋಸ್ಟ್ ಡಾಕ್ಟರಲ್ ಫೆಲೋಶಿಪ್ (PDF) ಅನ್ನು ಅಮಾನತುಗೊಳಿಸಲಾಗಿದೆ.

ಎಫ್‌ಐಆರ್ ದಾಖಲಾಗಿ ಬಂಧಿತರಾಗಿರುವ ಅವರನ್ನು 10 ದಿನಗಳವರೆಗೆ ಪೊಲೀಸ್ ವಶಕ್ಕೆ ಪಡೆದಿರುವುದರಿಂದ ಈ ಕ್ರಮ ವಹಿಸಲಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಆರ್.ಶಿವಪ್ಪ ತಿಳಿಸಿದ್ದಾರೆ. ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪಾತ್ರವಿಲ್ಲ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಪರೀಕ್ಷೆಯಲ್ಲಿನ ಭೂಗೋಳಶಾಸ್ತ್ರ ವಿಷಯದ ಪ್ರಶ್ನೆಗಳನ್ನು ಡಾ. ಸೌಮ್ಯ ತನ್ನ ಸ್ನೇಹಿತರಿಗೆ ವಾಟ್ಸಾಪ್‌ನಲ್ಲಿ ರವಾನಿಸಿರುವುದು ದೃಢಪಟ್ಟಿರುವುದರಿಂದ ಮಲ್ಲೇಶ್ವರಂ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಅದರಂತೆ ನಿಯಮಾನುಸಾರ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳು ಕ್ರಮ ಜರುಗಿಸಿದ್ದಾರೆ ಎಂದು ಅವರು ತಿಳಿಸಿದರು.

ಮುಕ್ತ ವಿವಿ ಪಾತ್ರವಿಲ್ಲ: ಅಸಿಸ್ಟೆಂಟ್ ಪ್ರೊಫೆಸರ್‌ಗಳ ನೇಮಕಾತಿ ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪಾತ್ರವಿಲ್ಲ ಎಂದು ಮುಕ್ತ ವಿವಿ ಮೂಲಗಳು ಸ್ಪಷ್ಟಪಡಿಸಿವೆ. ಈ ಮಧ್ಯೆ ಮೈಸೂರು ವಿಶ್ವವಿದ್ಯಾನಿಲಯ ಭೂಗೋಳಶಾಸ್ತ್ರ ವಿಭಾಗದ ಅತಿಥಿ ಉಪನ್ಯಾಸಕಿ ಡಾ. ಸೌಮ್ಯರನ್ನು ಬೆಂಗಳೂರು ಮಲ್ಲೇಶ್ವರಂ ಠಾಣೆ ಪೊಲೀಸರು ಬಂಧಿಸಿದ್ದು, ಈ ಪ್ರಕರಣದಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಯಾರೂ ಭಾಗಿಯಾಗಿಲ್ಲ ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ.



ಕೂಡಲಸಂಗಮ ಪ್ರಥಮ ಜಗದ್ಗುರು ಶ್ರೀ ಜಯಮೃತ್ಯುಂಜಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಲಿಂಗಾಯತ 2A ಮೀಸಲಾತಿಗಾಗಿ ಧರಣಿ ಸತ್ಯಾಗ್ರಹವನ್ನು ಬೆಂಬಲಿಸಿ ಮೈಸೂರು ಲಿಂಗಾಯತ ಗೌಡ ಮಹಾಸಭಾದಿಂದ ರಾಜ್ಯಾಧ್ಯಕ್ಷ ಆಲನಹಳ್ಳಿ ಪುಟ್ಟಸ್ವಾಮಿ, ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಕಣೇನೂರು ಜಗದೀಶ್, ಯೋಗೀಶ್, ಕುಮಾರ್, ಗೌರಿಶಂಕರ್ ಮತ್ತು ರಾಜಣ್ಣ ಅವರು ಭಾಗವಹಿಸಿದ ಕ್ಷಣ.

ಶಾಸಕ ಜಿಗ್ನೇಶ್ ಮೇವಾನಿಗೆ ಜಾಮೀನು

ಇಂಫಾಲ, ಏ. 29– ಮಹಿಳಾ ಪೊಲೀಸ್ ಪೇದೆ ಮೇಲೆ ಹಲ್ಲೆ ನಡೆಸಿದ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಗುಜರಾತ್ ಶಾಸಕ ಜಿಗ್ನೇಶ್ ಮೇವಾನಿ ಅವರಿಗೆ ಅಸ್ಸಾಂನ ಬಾರ್ಪೇಟಾದ ಅಸೆನ್ಸ್ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದೆ.



ಇದಕ್ಕೂ ಮೊದಲು ಗುರುವಾರ, ಐದು ದಿನಗಳ ಪೊಲೀಸ್ ಕಸ್ಟಡಿಗೆ ಕಳುಹಿಸಲಾದ ಮೇವಾನಿ ಅವರ ಜಾಮೀನು ಅರ್ಜಿಯ ಆದೇಶವನ್ನು ನ್ಯಾಯಾಲಯ ಕಾಯ್ದಿರಿಸಿತ್ತು.

ಮೇವಾನಿ ಪರ ವಕೀಲ ಅಂಗ್ಶುಮನ್ ಬೋರಾ ಅವರು ತಮ್ಮ ವಾದವನ್ನು ಮಂಡಿಸಿ ರಾಷ್ಟ್ರೀಯ ದಲಿತ ಅಧಿಕಾರ್ ಮಂಚ್‌ನ ಸಂಚಾಲಕರೂ ಆಗಿರುವ ಮೇವಾನಿಗೆ ಜಾಮೀನು ನೀಡುವಂತೆ ನ್ಯಾಯಾಲಯವನ್ನು ಒತ್ತಾಯಿಸಿದ್ದರು.

ಪ್ರಧಾನಿ ನರೇಂದ್ರ ಮೋದಿ ವಿರುದ್ಧ 'ಆಕ್ಷೇಪಾರ್ಹ' ಟ್ವೀಟ್‌ಗೆ ಸಂಬಂಧಿಸಿದಂತೆ ವಡ್ಗಾಮ್ ಶಾಸಕ ಮೇವಾನಿ ಅವರನ್ನು ಅಸ್ಸಾಂ ಪೊಲೀಸರು ಮೊದಲು ಬಂಧಿಸಿದರು. ತದನಂತರ ಮಹಿಳಾ ಪೊಲೀಸ್ ಪೇದೆ ಮೇಲೆ ಹಲ್ಲೆ ಸೇರಿದಂತೆ ವಿವಿಧ ಆರೋಪಗಳ ಮೇಲೆ ಏಪ್ರಿಲ್ 25 ರಂದು ಅಸ್ಸಾಂ ಪೊಲೀಸರು ಅವರನ್ನು ಮತ್ತೆ ಬಂಧಿಸಿದ್ದರು.

ಮೈಸೂರಲ್ಲಿ ಭಾರೀ ಗಾಳಿ, ಗುಡುಗು–ಸಿಡಿಲು ಸಹಿತ ಅಬ್ಬರದ ಮಳೆ

ಧರೆಗುರುಳಿದ ಮರಗಳು, ವಿದ್ಯುತ್ ಕಂಬ; ಹಲವೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಏ.29(ಎಸ್‌ಬಿಡಿ)– ಮೈಸೂರಿನಲ್ಲಿ ಶುಕ್ರವಾರ ಭಾರೀ ಗಾಳಿ, ಗುಡುಗು–ಸಿಡಿಲು ಸಹಿತ ಅಬ್ಬರದ ಮಳೆಯಾಗಿದ್ದು, 20ಕ್ಕೂ ಹೆಚ್ಚು ಮರಗಳು ಧರೆಗುರುಳಿವೆ. ಬಹುತೇಕ ಕಡೆ ವಿದ್ಯುತ್ ಕಂಬಗಳಿಗೆ ಹಾನಿಯಾಗಿದ್ದು, ತಂತಿ ಕಡಿದು ಬಿದ್ದ ಪರಿಣಾಮ ವಿದ್ಯುತ್ ಸರಬರಾಜಲ್ಲಿ ವ್ಯತ್ಯಯ ಉಂಟಾಗಿತ್ತು ಶುಕ್ರವಾರ ಸಂಜೆ 7 ಗಂಟೆ ವೇಳೆಗೆ ಭಾರೀ ಗಾಳಿಯೊಂದಿಗೆ ಆರಂಭವಾದ ಮಳೆ, 3 ಗಂಟೆಗೂ ಹೆಚ್ಚು ಕಾಲ ಎಡೆಬಿಡದೆ ಸುರಿಯಿತು. ಪರಿಣಾಮ ಬನ್ನಿಮಂಟಪ, ಮುನೇಶ್ವರನಗರ, ಎನ್.ಆರ್.ಮೊಹಲ್ಲಾ, ಗಾಂಧಿನಗರ, ಕ್ಯಾತಮಾರನಹಳ್ಳಿ, ಗೌರಿಶಂಕರನಗರ, ಕುವೆಂಪುನಗರ, ನಿವೇದಿತಾನಗರ, ಟಿ.ಕೆ.ಲೇಔಟ್, ಕುರುಬಾರಹಳ್ಳಿ ವೃತ್ತ, ಜೆ.ಪಿ.ನಗರ ಸೇರಿದಂತೆ ಹಲವೆಡೆ 20ಕ್ಕೂ ಹೆಚ್ಚು ಮರಗಳು ಧರೆಗುರುಳಿವೆ.

ಗಾಂಧಿನಗರ 5ನೇ ಕ್ರಾಸ್‌ನಲ್ಲಿ ಮರವೊಂದು ಕಾರಿನ ಮೇಲೆ ಬಿದ್ದಿದ್ದು, ಹಲವೆಡೆ ಕೊಂಬೆಗಳು ಮುರಿದು ಬಿದ್ದು ಅನೇಕ ವಾಹನಗಳಿಗೆ ಹಾನಿಯಾಗಿದೆ. ಕೆಸರೆಯಲ್ಲಿ ಮರ ಬಿದ್ದ ಕಾರಣ ನಾಲ್ಕೈದು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಕುವೆಂಪುನಗರದಲ್ಲೂ ವಿದ್ಯುತ್ ಮಾರ್ಗದ ಮೇಲೆ ಮರವೊಂದು ಮುರಿದು ಬಿದ್ದಿದೆ. ಅನೇಕ ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿಯಾಗಿದೆ. ಪರಿಣಾಮ ನಗರದ ಹಲವೆಡೆ ವಿದ್ಯುತ್ ಸಂಪರ್ಕ ಕಡಿತಗೊಂಡು, ಕಗತ್ತಲು ಆವರಿಸಿತ್ತು. ಗಾಳಿ–ಮಳೆಯಿಂದ ಅದೃಷ್ಟವಶಾತ್ ಸಾವು–ನೋವು ಸಂಭವಿಸಿಲ್ಲ. ನಗರ ಪಾಲಿಕೆ ಮೂರು ಅಭಯ ತಂಡಗಳ ಸಿಬ್ಬಂದಿ ಮಳೆ ನಡುವೆಯೇ ಧರೆಗುರುಳಿದ್ದ ಮರಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಿದರು. ಭಾರೀ ಮಳೆ ಪರಿಣಾಮ ತಗ್ಗು ಪ್ರದೇಶದ ಬಡಾವಣೆ ಹಾಗೂ ಮನೆಗಳಿಗೆ ನೀರು ನುಗ್ಗಿ, ಸಾರ್ವಜನಿಕರು ಪರಿತಪಿಸುವಂತಾಯಿತು.

ಸ್ವದೇಶಿ GPS ತಂತ್ರಜ್ಞಾನ 'ಗಗನ್' ಬಳಸಿ ಲ್ಯಾಂಡ್ ಆದ ಮೊದಲ ವಿಮಾನ 'ಇಂಡಿಗೋ'

ನವದೆಹಲಿ, ಏ. 29– ಭಾರತದ ಸ್ವಂತ ಉಪಗ್ರಹ ಆಧಾರಿತ ವರ್ಧನೆ ವ್ಯವಸ್ಥೆಯು ಗಗನ್ (GAGAN) ಅಥವಾ ಜಿಪಿಎಸ್ (GPS) ಸಹಾಯದ ಜಿಇಒ ಆಗ್ಮೆಂಟೆಡ್ ನ್ಯಾವಿಗೇಶನ್‌ನಿಂದ ಮಾರ್ಗದರ್ಶಿಸಲ್ಪಟ್ಟ ವಿಧಾನವನ್ನು ಬಳಸಿ ಇಂಡಿಗೋ–ವಿಮಾನವೊಂದು ಲ್ಯಾಂಡ್ ಆಗಿದೆ.

ಇಂಡಿಗೋ ವಿಮಾನ ಸಂಖ್ಯೆ ಎಟಿಆರ್ 72–600 ವಿಮಾನವು ಗುರುವಾರ ಸ್ವದೇಶಿ ಜಿಪಿಎಸ್ ತಂತ್ರಜ್ಞಾನ ಗಗನ್ ಆಧಾರಿತ ವ್ಯವಸ್ಥೆ ಬಳಸಿಕೊಂಡು ಕಿಶನ್‌ಗಢ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಗಿದೆ ಈ ಮೂಲಕ ಇಂಡಿಗೋ ದೇಶೀಯ ನ್ಯಾವಿಗೇಷನ್ ಸಿಸ್ಟಮ್ ಗಗನ್ ಅನ್ನು ಬಳಸಿಕೊಂಡು ವಿಮಾನವನ್ನು ಇಳಿಸಿದ ದೇಶದ ಮೊದಲ ವಿಮಾನಯಾನ ಸಂಸ್ಥೆ ಎಂಬ ಕೀರ್ತಿಗೆ ಭಾಜನವಾಗಿದೆ. ರಾಜಸ್ಥಾನದ ಅಜ್ಮೀರ್ ಬಳಿಯ ಸಣ್ಣ ವಿಮಾನ ನಿಲ್ದಾಣದಲ್ಲಿ ಈ ಪ್ರಾಯೋಗಿಕ ಲ್ಯಾಂಡಿಂಗ್‌ನೊಂದಿಗೆ, ಭಾರತವು ತನ್ನದೇ ಆದ ಉಪಗ್ರಹ ಆಧಾರಿತ ವರ್ಧನೆ ವ್ಯವಸ್ಥೆ (SBAS) ಬಳಕೆಯ ಮೂಲಕ ಅಮೆರಿಕ, ಜಪಾನ್ ಮತ್ತು ಯುರೋಪ್ ರಾಷ್ಟ್ರಗಳ ಗುಂಪಿಗೆ ಸೇರಿದೆ. ಎಟಿಆರ್–72 ವಿಮಾನವನ್ನು ಬಳಸಿ ಹಾರಾಟ ನಡೆಸಲಾಯಿತು ಮತ್ತು ಬುಧವಾರ ಬೆಳಗ್ಗೆ ರಾಜಸ್ಥಾನದ ಕಿಶನ್‌ಗಢ ವಿಮಾನ ನಿಲ್ದಾಣದಲ್ಲಿ ಜಿಪಿಎಸ್ ನೆರವಿನ ಜಿಯೋ–ಆಗ್ಮೆಂಟೆಡ್ ನ್ಯಾವಿಗೇಷನ್ (ಗಗನ್) ಅನ್ನು ಬಳಸಲಾಯಿತು, ಇದನ್ನು ಸೆಂಟರ್–ರನ್ ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ (ಎಎಐ) ಮತ್ತು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಜಂಟಿಯಾಗಿ ಅಭಿವೃದ್ಧಿಪಡಿಸಿದೆ ಎಂದು ಇಂಡಿಗೋ ಹೊರಡಿಸಿದ ಹೇಳಿಕೆಯಲ್ಲಿ ತಿಳಿಸಿದೆ.

ರಾಜ್ಯದಲ್ಲಿ ಡಬಲ್ ಇಂಜಿನ್ ಭ್ರಷ್ಟ ಸರ್ಕಾರ

- ಜೆಡಿಎಸ್ ಮುಖಂಡರು, ಕಾರ್ಯಕರ್ತರ ಸಭೆಯಲ್ಲಿ ಶಾಸಕ ಸಾ.ರಾ.ಮಹೇಶ್ ವಾಗ್ದಾಳಿ
- ದಕ್ಷಿಣ ಪದವೀಧರರ ಚುನಾವಣೆಯಲ್ಲಿ ರಾಮು ಗೆಲ್ಲಿಸಲು ಮನವಿ



ಮೈಸೂರು. ಏ.29(ಎಂಟಿವೈ)– ರಾಜ್ಯದಲ್ಲಿ ಡಬಲ್ ಇಂಜಿನ್ ಸರ್ಕಾರವಿದ್ದು, ಇಂತಹ ಭ್ರಷ್ಟ ಸರ್ಕಾರವನ್ನು ನಾನು ಯಾವತ್ತೂ ಕಂಡಿರಲಿಲ್ಲ ಎಂದು ಶಾಸಕ ಸಾ.ರಾ. ಮಹೇಶ್ ಇಂದಿಲ್ಲಿ ವಾಗ್ದಾಳಿ ನಡೆಸಿದ್ದಾರೆ.

ವಿಜಯನಗರ 2ನೇ ಹಂತದಲ್ಲಿರುವ ಕೊಡವ ಸಮುದಾಯ ಭವನದಲ್ಲಿ ದಕ್ಷಿಣ ಪದವೀಧರರ ಕ್ಷೇತ್ರದ ವಿಧಾನಪರಿಷತ್ ಚುನಾವಣೆ ಸಂಬಂಧ ನಡೆದ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ರಾಜ್ಯದಲ್ಲಿ ಪ್ರಾದೇಶಿಕ ಪಕ್ಷ ಉಳಿಯಬೇಕಾದರೆ ಜನ ಉಳಿಯಬೇಕು ಮತ್ತು ರೈತರು ಉಳಿಯಬೇಕು ಎಂದರು.

ರಾಜ್ಯ ಸರ್ಕಾರದಲ್ಲಿ ದುಡ್ಡಿಲ್ಲದೆ 8 ತಿಂಗಳಿಂದ ಬಡವರಿಗೆ ಸೀಮೆಎಣ್ಣೆ ಕೊಟ್ಟಿಲ್ಲ. ಗ್ಯಾಸ್, ಡೀಸೆಲ್, ಪೆಟ್ರೋಲ್, ಬೆಲೆ ಗಗನಕ್ಕೇರಿದೆ. 50 ಲಕ್ಷ ಜನ ಕೆಲಸ ಕಳೆದುಕೊಂಡಿದ್ದಾರೆ. ಸಬ್ ಇನ್ಸ್‌ಪೆಕ್ಟರ್ ನೇಮಕಾತಿಯಲ್ಲಿ ದೊಡ್ಡ ಹಗರಣ ನಡೆದಿದೆ ಎಂದು ಸರ್ಕಾರದ ಹಗರಣವನ್ನು ತಿಳಿಸಿದರು.

ಕುಮಾರಣ್ಣ 14 ತಿಂಗಳು ಮುಖ್ಯಮಂತ್ರಿಯಾಗಿದ್ದರು. ಒಂದೇ ಒಂದು ಹಗರಣ ನಡೆಯಲಿಲ್ಲ. ಆದ್ದರಿಂದ ಹಳೆ ಮೈಸೂರು ಭಾಗದಲ್ಲಿ ಈ ಚುನಾವಣೆ ಗೆಲ್ಲಲೇಬೇಕು. ನಾವು ಗೆದ್ದಿರುವ ಕ್ಷೇತ್ರವಿದು, ಇದನ್ನು ಉಳಿಸಿಕೊಳ್ಳಲೇಬೇಕು. ಕೀಲಾರ ಜಯರಾಂ ಜೊತೆ ಮಾತನಾಡಿ ಮನವೊಲಿಸುತ್ತೇನೆ. ದಯವಿಟ್ಟು ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ನೀವು ಅಂದುಕೊಂಡಂತೆ ಈ ಚುನಾವಣೆಯನ್ನು ಹಗುರವಾಗಿ ತೆಗೆದುಕೊಳ್ಳಬೇಡಿ. ಪ್ರತಿ 25 ಜನರಂತೆ ತಂಡ ರಚನೆ ಮಾಡಿ ಮತದಾರರ ಮನವೊಲಿಸಿ ಹೆಚ್.ಕೆ. ರಾಮು ಅವರನ್ನು ಗೆಲ್ಲಿಸಲು ಎಲ್ಲರು ಶ್ರಮಿಸಬೇಕೆಂದು ಕರೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ರಾಜ್ಯದ ಹಿತ ಕಾಪಾಡಲು ಪ್ರಾದೇಶಿಕ ಪಕ್ಷದಿಂದ ಮಾತ್ರ ಸಾಧ್ಯ. ಕುಮಾರಣ್ಣನವರು ಜೆ.ಡಿ.ಎಸ್ ಪಕ್ಷದ ಅಧಿಪತಿಯಾಗಿದ್ದಾರೆ. ಆದ್ದರಿಂದ ರಾಜ್ಯದ ಜನರಿಗೆ ಶಿಕ್ಷಣ, ಆರೋಗ್ಯ ಮತ್ತು ಪ್ರತಿ ಕುಟುಂಬಕ್ಕೆ ಒಂದು ಉದ್ಯೋಗ ನೀಡಿ, ರೈತರ ಸಾಲ ಮನ್ನಾ ಮಾಡಿ, ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಮೂಲಕ ಈ ರಾಜ್ಯವನ್ನು ಸಮೃದ್ಧ ಕರ್ನಾಟಕ ಮಾಡಲು ಕುಮಾರಣ್ಣ ಹೋರಾಟ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಜೆ.ಡಿ.ಎಸ್. ಪಕ್ಷಕ್ಕೆ ನೆಲೆ ಇಲ್ಲ ಎನ್ನುತ್ತಾರೆ. ಆದರೆ ಕೇವಲ 20 ದಿನದಲ್ಲೇ ಪಕ್ಷ ನನ್ನನ್ನು ಎಂ.ಎಲ್.ಸಿ. ಮಾಡಿದೆ. ಜಿಲ್ಲೆ ಜೆಡಿಎಸ್ ಪಕ್ಷದ ಭದ್ರಕೋಟೆ ಎಂದು ಸಾಬೀತು ಮಾಡಿದೆ. ಹೆಚ್.ಕೆ. ರಾಮುರವರು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಉತ್ತಮ ಕೆಲಸ ಮಾಡಿದ್ದಾರೆ. ಪಕ್ಷದ ಕಷ್ಟ ಸುಖದ ಬಗ್ಗೆ ಅವರಿಗೆ ಅರಿವಿದೆ. ಆದ್ದರಿಂದ ಹೆಚ್.ಕೆ.ರಾಮು ಅವರನ್ನು ಅತ್ಯಧಿಕ ಮತಗಳ ಅಂತರದಿಂದ ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ತಿ.ನರಸೀಪುರ ಶಾಸಕ ಅಶ್ವಿನ್ ಕುಮಾರ್, ಪಿರಿಯಾಪಟ್ಟಣ ಶಾಸಕ ಕೆ.ಮಹಾದೇವ, ಕೆ.ಟಿ. ಶ್ರೀಕಂಠೇಗೌಡ, ಹೆಚ್.ಕೆ. ರಾಮು ಮಾತನಾಡಿದರು. ಜಿಲ್ಲಾ ಜೆ.ಡಿ.ಎಸ್. ಅಧ್ಯಕ್ಷ ನರಸಿಂಹಸ್ವಾಮಿ ನಗರ ಜೆ.ಡಿ.ಎಸ್. ಅಧ್ಯಕ್ಷ ಚೆಲುವೇಗೌಡ, ಜಿಲ್ಲಾ ಯುವ ಅಧ್ಯಕ್ಷ ಗಂಗಾಧರಗೌಡ, ನಗರ ಮಹಿಳಾ ಅಧ್ಯಕ್ಷೆ ಪ್ರೇಮಾಶಂಕರೇಗೌಡ, ಜಿ.ಪಂ.ಮಾಜಿ ಅಧ್ಯಕ್ಷ ಸಿ.ಜೆ.ದ್ವಾರಕೀಶ್, ಅಹಿಂದ ಮುಖಂಡ ಅಪೆಕ್ಸ್ ಶ್ರೀನಿವಾಸ್, ಮಾಜಿ ಮೇಯರ್ ಎಂ.ಜೆ. ರವಿಕುಮಾರ್, ಗಂಗಾಧರ್ ಬೃಂದಾ ಕೃಷ್ಣೇಗೌಡ, ನಗರ ಪಾಲಿಕಾ ಸದಸ್ಯ ಶ್ರೀಧರ್, ಜಿ.ಪಂ.ಮಾಜಿ ಸದಸ್ಯರಾದ ಎಂ.ಪಿ.ನಾಗರಾಜು, ಎಂ.ಟಿ. ಕುಮಾರ್, ಶ್ರೀರಾಂಪುರ ರಮೇಶ್, ಕೆ.ವಿ. ಮಲ್ಲೇಶ್ ಹಾಜರಿದ್ದರು.

ಮೈಸೂರು ಮಿತ್ರ ಶನಿವಾರ 30 ಏಪ್ರಿಲ್ 2022

ಜೆಡಿಎಸ್ ಅಧಿಕಾರಕ್ಕೆ ಬಂದರೆ ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗೆ ಶಾಸಕ ಸ್ಥಾನ

ನಾಗಮಂಗಲ,ಏ.29– ಮುಂದಿನ ದಿನಗಳಲ್ಲಿ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಅಂಗನವಾಡಿ ಅಥವಾ ಆಶಾ ಕಾರ್ಯಕರ್ತೆಯರೊಬ್ಬರಿಗೆ ವಿಧಾನಸೌಧದ ಮೇಲ್ಮನೆಯ ಶಾಸಕ ಸ್ಥಾನ ಕಲ್ಪಿಸಲು ನಮ್ಮ ಪಕ್ಷದಲ್ಲಿ ತೀರ್ಮಾನಿಸಲಾಗಿದೆ ಎಂದು ಶಾಸಕ ಸುರೇಶ್‌ಗೌಡ ತಿಳಿಸಿದರು.



ಸ್ವಾತಂತ್ರ್ಯ ಭಾರತದ 75 ವರ್ಷದ ಅಮೃತ ಮಹೋತ್ಸವದ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಹಾಗೂ ಆಯುಷ್ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಒಳಾವರಣದಲ್ಲಿ ಆಯೋಜಿಸಲಾಗಿದ್ದ ತಾಲೂಕು ಮಟ್ಟದ 'ಆರೋಗ್ಯ ಮೇಳ ಹಾಗೂ ಆರೋಗ್ಯ ಕಾರ್ಯಕ್ರಮಗಳ ಜಾಗೃತಿ ಅಭಿಯಾನ'ದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಶ್ವಾದ್ಯಂತ ಸಮಸ್ಯೆಯಾಗಿದ್ದ ಕೊರೊನಾ ಮಹಾಮಾರಿಯ ತಡೆಗಾಗಿ ಆರೋಗ್ಯ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳಿಂದ ನೇಮಿಸಿಕೊಳ್ಳಲಾಗಿದ್ದ ಸಿಬ್ಬಂದಿಗಳನ್ನು ಯಾವುದೇ ಮುನ್ಸೂಚನೆ ಇಲ್ಲದೆ ಸೇವೆಯಿಂದ ಬಿಡುಗಡೆಗೊಳಿಸುವ ಮೂಲಕ ಅವರನ್ನು ಅತಂತ್ರಗೊಳಿಸಲಾಗಿದೆ. ಇದನ್ನು ಮನಗಂಡ ಜೆಡಿಎಸ್ ಒಂದು ತೀರ್ಮಾನಕ್ಕೆ ಬಂದಿದೆ. ಅದರಂತೆ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ, ಸೇವಾ ಭದ್ರತೆಗಾಗಿ ದಿನಂಪ್ರತಿ ಹೋರಾಟ ಮಾಡುತ್ತಿರುವ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ದ್ವನಿಯಾಗಿ ವಿಧಾನಸೌಧದ ಮೇಲ್ಮನೆಯಲ್ಲಿ ಅಂಗನವಾಡಿ ಅಥವಾ ಆಶಾ ಕಾರ್ಯಕರ್ತೆಯೊಬ್ಬರಿಗೆ ಅವಕಾಶ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಪ್ರತಿ ಗ್ರಾಮ ಅಥವಾ ವಾರ್ಡ್‌ಗಳ ಪ್ರತಿಯೊಂದು ಕುಟುಂಬಗಳ ಪರಿಚಯ ಆಶಾ ಕಾರ್ಯಕರ್ತೆಯರಿಗಿದೆ. ಸ್ಥಳೀಯ ಆರೋಗ್ಯದ ಸ್ಥಿತಿ–ಗತಿ ಮೇಲ್ಮಟ್ಟದ ವೈದ್ಯಾಧಿಕಾರಿಗಳಿಗಿಂತ ಅವರಿಗೆ ತಿಳಿದಿರುತ್ತದೆ. ಅಂತಹ ಸೇವೆಯನ್ನು ಪರಿಗಣಿಸುವುದು ಸರ್ಕಾರದ ಕರ್ತವ್ಯ. ಇಂತಹ ಆರೋಗ್ಯ ಮೇಳಗಳು ಆಗಿಂದಾಗ್ಗೆ ಆಯೋಜಿಸುವಲ್ಲಿ ನಾವು ಜಾಗೃತರಾಗಬೇಕಿದೆ ಎಂದರು.

ತಾಲೂಕಿನ 14 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 2 ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ 1 ಸಾರ್ವಜನಿಕ ಆಸ್ಪತ್ರೆಗಳಲ್ಲಿ ಆರೋಗ್ಯದ ಯಾವುದೇ ಸಮಸ್ಯೆಗೂ ಸರಿಯಾದ ಸ್ಪಂದನೆ ಇಲ್ಲ. ಪ್ರತಿಯೊಂದು ಸಮಸ್ಯೆಗಳಿಗೂ ನಾಳೆ ನಿಮಗೆ ಸಂಬಂಧಿಸಿದ ಆಸ್ಪತ್ರೆಗೆ ತೆರಳಿ ತಪಾಸಣೆ ಮಾಡಿಸಿ, ಇಲ್ಲವಾದರೆ ಜಿಲ್ಲಾಸ್ಪತ್ರೆಗೆ ತೆರಳಿ ಎಂಬ ಹಾರಿಕೆ ಉತ್ತರವಷ್ಟೆ ಇಲ್ಲಿನ ಚಿಕಿತ್ಸೆ ಇದರಿಂದ ಯಾವುದೇ ಪ್ರಯೋಜನವಿಲ್ಲ ಎಂಬುದು ಬಹುತೇಕ ರೋಗಿಗಳ ಮಾತಾಗಿತ್ತು.

ಮರೀಚಿಕೆಯಾಗಿದ್ದ ಮೂಲಭೂತ ಸೌಕರ್ಯ: ಮಧುಮೇಹ, ರಕ್ತದೊತ್ತಡ, ಮೂಳೆ, ಚರ್ಮ, ಕಿವಿ, ಮೂಗು ಮತ್ತು ಗಂಟಲು, ಕಣ್ಣು ಹಾಗೂ ಹಲ್ಲು ಸೇರಿದಂತೆ ಆರೋಗ್ಯ ಇತರ ತಪಾಸಣೆ, ಪ್ರಯೋಗಾಲಯ ಹಾಗೂ ಶಸ್ತ್ರಚಿಕಿತ್ಸೆಗಳಿಗಾಗಿ ನಿಗದಿಪಡಿಸಲಾಗಿದ್ದ ಕೊಠಡಿಗಳಲ್ಲಿ ವಿದ್ಯುತ್ ಸಂಪರ್ಕವಿಲ್ಲದೆ, ಬೆಳಕಿನ ವ್ಯವಸ್ಥೆ ಇರಲಿಲ್ಲ ಮತ್ತು ಬಿಸಿಲಿನ ತಾಪಮಾನ ಹೆಚ್ಚಿದ್ದ ಕಾರಣ ಫ್ಯಾನ್ ವ್ಯವಸ್ಥೆಯೂ ಇರಲಿಲ್ಲ ಮೊದಲ ಮಹಡಿಯಲ್ಲಿ ನಿಗದಿಪಡಿಸಲಾಗಿದ್ದ ಕೊಠಡಿಗಳಿಗೆ ಮೆಟ್ಟಿಲು ಹತ್ತುವಾಗ ಹರಸಾಹಸ ಪಡುತ್ತಿದ್ದ ವೃದ್ಧರ ಪರಿಸ್ಥಿತಿ ಹೇಳತೀರದಾಗಿತ್ತು. ಯಾವುದೇ ಕೊಠಡಿಯಲ್ಲಿ ರೋಗಿಗಳಿಗೆ ಕುಡಿಯುವ ನೀರಿನ ಸೌಲಭ್ಯವಿಲ್ಲ. ಶೌಚಾಲಯಗಳ ದುಸ್ಥಿತಿಯೂ ಹೇಳತೀರದಾಗಿದೆ ಎಂದು ನಾಗರಿಕರು ದೂರಿದರು.

ಇದೇ ಸಂದರ್ಭ ವೇದಿಕೆಯಲ್ಲಿ ಕಿವಿ ಕೇಳಿಸದ ಕೆಲವರಿಗೆ ಶ್ರವಣ ಸಾಧನಗಳನ್ನು ವಿತರಿಸಲಾಯಿತು. ಈ ಸಂದರ್ಭ ತಹಸೀಲ್ದಾರ್ ನಂದೀಶ್, ತಾಲೂಕು ಪಂಚಾಯತಿ ಆಡಳಿತಾಧಿಕಾರಿ ಕವಿತಾ, ತಾ.ಪಂ. ಕಾರ್ಯನಿರ್ವಹಕಾಧಿಕಾರಿ ಚಂದ್ರಮೌಳಿ ಹಾಗೂ ತಾಲೂಕು ಆರೋಗ್ಯಾಧಿಕಾರಿ ಡಾ.ಪ್ರಸನ್ನ ಸೇರಿದಂತೆ ತಾಲೂಕಿನ ಎಲ್ಲಾ ಪ್ರಾಥಮಿಕ, ಸಮುದಾಯ ಹಾಗೂ ಸಾರ್ವಜನಿಕ ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿ ಜಿಲ್ಲಾ ಆಯುಷ್ ಇಲಾಖೆಯ ಅಧಿಕಾರಿ ಪುಷ್ಪಲತಾ ಇತರರಿದ್ದರು.

ವಿದ್ಯುತ್ ಬಿಲ್ ಕೇಳಿದ್ದಕ್ಕೆ ಲೈನ್‌ಮನ್ ಮೇಲೆ ಹಲ್ಲೆ

ಪಾಂಡವಪುರ,ಏ.29– ವಿದ್ಯುತ್ ಬಿಲ್ ಕೇಳಲು ಹೋದ ಲೈನ್‌ಮನ್ ಹಾಗೂ ಗ್ರಾಮದ ವಿದ್ಯುತ್ ಪ್ರತಿನಿಧಿಯ ಮೇಲೆ ವ್ಯಕ್ತಿಯೊಬ್ಬ ಹಲ್ಲೆ ನಡೆಸಿರುವ ಘಟನೆ ನಡೆದಿದೆ.

ತಾಲೂಕಿನ ಕನಗನಮರಡಿ ಗ್ರಾಮದ ಜಯರಾಮೇಗೌಡರ ಪುತ್ರ ನಂದೀಶ್ ಎಂಬಾತ ಹಲ್ಲೆ ನಡೆಸಿದ್ದು, ಲೈನ್‌ಮನ್ ಎ.ಎಸ್.ಕುಮಾರಸ್ವಾಮಿ ಹಾಗೂ ಗ್ರಾಮದ ವಿದ್ಯುತ್ ಪ್ರತಿನಿಧಿ ಹರೀಶ್ ಎಂಬವರು ಹಲ್ಲೆಗೆ ಒಳಗಾಗಿ ಪಾಂಡವಪುರ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದಾರೆ.

ಕಳೆದ ಏ.25ರಂದು ಎ.ಎಸ್.ಕುಮಾರಸ್ವಾಮಿ ಹಾಗೂ ಹರೀಶ್ ಎಂಬವರು ನಂದೀಶ್ ಅವರ ಮನೆಗೆ ತೆರಳಿ ಮೂರು ತಿಂಗಳಿಂದ ವಿದ್ಯುತ್ ಬಿಲ್‌ಬಾಕಿ ಇದ್ದು, ಪಾವತಿಸುವಂತೆ ಕೇಳಿದ್ದಾರೆ. ಬಿಲ್ ಪಾವತಿಸದಿದ್ದರೆ ವಿದ್ಯುತ್ ಕಡಿತಗೊಳಿಸುವುದಾಗಿ ತಿಳಿಸಿದ್ದಾರೆ. ಮನೆಯಲ್ಲಿದ್ದ ನಂದೀಶ್ ಅವರ ಪತ್ನಿ ಈ ವಿಚಾರವನ್ನು ನಂದೀಶ್ ಅವರಿಗೆ ದೂರವಾಣಿ ಮೂಲಕ ತಿಳಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂದೀಶ್ ವಿದ್ಯುತ್ ಲೈನ್‌ಮನ್ ಎ.ಎಸ್.ಕುಮಾರಸ್ವಾಮಿ ವಿರುದ್ಧ ಹರಿಹಾಯ್ದು ಮಾಡಿದ್ದಾರೆ. ಈ ಘಟನೆಯನ್ನು ಮೊಬೈಲ್ ಮೂಲಕ ವಿಡಿಯೋ ಚಿತ್ರೀಕರಣ ಮಾಡಲು ಮುಂದಾದ ವಿದ್ಯುತ್ ಗ್ರಾಮ ಪ್ರತಿನಿಧಿ ಹರೀಶ್ ಅವರ ಮೊಬೈಲ್‌ನ್ನು ಸಹ ಕಿತ್ತು ಎಸೆದು ಒಡೆದು ಹಾಕಿದ್ದಾನೆ ಎಂದು ಕುಮಾರಸ್ವಾಮಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಘಟನೆಯ ಸಂಬಂಧ ಪಾಂಡವಪುರ ಪೊಲೀಸರು ದೂರು ದಾಖಲಿಸಿಕೊಂಡು ನಂದೀಶ್ ಅವರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ಘಟನೆ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾಂಡವಪುರ ತಾಲೂಕಿನ ವಿವಿಧೆಡೆ ಕಳ್ಳತನ

ಪಾಂಡವಪುರ,ಏ.29– ತಾಲೂಕಿನ ದೊಡ್ಡಬ್ಯಾಡರಹಳ್ಳಿ, ತಿಮ್ಮನಕೊಪ್ಪಲು ಹಾಗೂ ಚಿಕ್ಕಬ್ಯಾಡರಹಳ್ಳಿ ಗ್ರಾಮದಲ್ಲಿ ಕಳ್ಳತನವಾಗಿದ್ದು, ದೇವಸ್ಥಾನದ ಹುಂಡಿ, ಶುದ್ಧಕುಡಿಯುವ ನೀರಿನ ಘಟಕದ ಹಣದ ಬಾಕ್ಸ್, ಬೇಕರಿಯಲ್ಲಿ ದೋಚಿ ಪರಾರಿಯಾಗಿದ್ದಾರೆ.



ದೊಡ್ಡಬ್ಯಾಡರಹಳ್ಳಿ ಗ್ರಾಮದ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನದ ಬಾಗಿಲು ಮುರಿದು ಒಳನುಗ್ಗಿದ ದುಷ್ಕರ್ಮಿಗಳು ಹುಂಡಿಯನ್ನು ಒಡೆದು ಹಣವನ್ನು ದೋಚಿದ್ದಾರೆ. ಬಳಿಕ ದೊಡ್ಡಬ್ಯಾಡರಹಳ್ಳಿ ಗ್ರಾಮದ ನಂದಿನಿ ಬೇಕರಿಯ ಬಾಗಿಲು ಮುರಿದು ಹಣ ಹಾಗೂ ಸಾಮಗ್ರಿ ದೋಚಿದ್ದಾರೆ. ದೊಡ್ಡಬ್ಯಾಡರಹಳ್ಳಿ –ತಿಮ್ಮನಕೊಪ್ಪಲು ಮಧ್ಯಭಾಗದಲ್ಲಿ ಇರುವ ಚಿಕನ್ ಕಬಾಬ್ ಸೆಂಟರ್‌ನ ಬಾಗಿಲು ಮುರಿದು ಅಲ್ಲಿದ್ದ ಸಿಗರೇಟು ಸೇರಿದಂತೆ ಹಲವು ಸಾಮಗ್ರಿ ದೋಚಿದ್ದಾರೆ.

ಬಳಿಕ ತಿಮ್ಮನಕೊಪ್ಪಲು ಗ್ರಾಮದಲ್ಲಿ ಇರುವ ಮಾರಮ್ಮನ ದೇವಸ್ಥಾನದ ಬಾಗಿಲು ಮುರಿದು ಅಲ್ಲಿದ್ದ ಹುಂಡಿ ಹಣವನ್ನು ದೋಚಿದ್ದಾರೆ. ಬಳಿಕ ಚಿಕ್ಕಬ್ಯಾಡರಹಳ್ಳಿ ಗ್ರಾಮದಲ್ಲಿ ಇರುವ ಶುದ್ಧ ಕುಡಿಯುವ ನೀರಿನ ಘಟಕದಲ್ಲಿ ಇದ್ದ ಕಾಯಿನ್ ಬಾಕ್ಸ್‌ಗಳ ಹಣ ದೋಚಿ ಪರಾರಿಯಾಗಿದ್ದಾರೆ. ವಿಷಯ ತಿಳಿದು ಸಬ್ ಇನ್ಸ್‌ಪೆಕ್ಟರ್ ಕೆ.ಮಂಜುನಾಥ್ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಘಟನೆ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಕೂಲಿ ಕೆಲಸಕ್ಕೆ ಆಗ್ರಹಿಸಿ ಎಸ್.ಐ. ಹೊನ್ನಲಗೆರೆ ಗ್ರಾಪಂಗೆ ಬೀಗ ಜಡಿದು ಪ್ರತಿಭಟನೆ

ಭಾರತೀನಗರ,ಏ.29(ಅಣ್ಣೂರು ಸತೀಶ್)– ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ಕೆಲಸಕ್ಕಾಗಿ ಆಗ್ರಹಿಸಿ ಕೃಷಿಕೂಲಿಕಾರರ ಸಂಘದ ಕಾರ್ಮಿಕರು ಸಮೀಪದ ಎಸ್.ಐ. ಹೊನ್ನಲಗೆರೆ ಗ್ರಾ.ಪಂಗೆ ಬೀಗ ಜಡಿದು ಪ್ರತಿಭಟನೆ ನಡೆಸಿದರು.



ಕೃಷಿ ಕೂಲಿಕಾರರ ಸಂಘದ ಕಾರ್ಮಿಕರು ಗ್ರಾಪಂಗೆ ಮುತ್ತಿಗೆ ಹಾಕಿ ಸಮರ್ಪಕವಾಗಿ ಕೂಲಿಕಾರರಿಗೆ ಕೆಲಸ ನೀಡುವಂತೆ ಆಗ್ರಹಿಸಿದರು. ಗ್ರಾಪಂ ಕಚೇರಿ ಆವರಣದಲ್ಲೇ ಅಡುಗೆ ತಯಾರಿಸಿ ಊಟ ಮಾಡಿ ಅಧಿಕಾರಿಗಳಿಗೆ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕೃಷಿ ಕೂಲಿಕಾರರ ಸಂಘದ ರಾಜ್ಯಘಟಕದ ಸಹ ಕಾರ್ಯದರ್ಶಿ ಹನುಮೇಗೌಡ ಮಾತನಾಡಿ, ಮಂಡ್ಯ ಜಿಪಂ ಸಿಇಓ ಅವರು ಉದ್ಯೋಗ ಖಾತರಿ ಯೋಜನೆಯಡಿ ಏ.10ರಿಂದ ಕೂಲಿ ಕಾರ್ಮಿಕರಿಗೆ ಜಿಲ್ಲೆಯ ಎಲ್ಲಾ ಗ್ರಾ.ಪಂಗಳಲ್ಲೂ ಕೆಲಸ ನೀಡುವುದಾಗಿ ಆಶ್ವಾಸನೆ ನೀಡಿದ್ದರು. ಆದರೆ ಕೂಲಿಕಾರರಿಗೆ ಸಮರ್ಪಕವಾಗಿ ಕೆಲಸ ನೀಡದೆ ಅನ್ಯಾಯ ವ್ಯಸಗುತ್ತಿದ್ದಾರೆಂದು ಹರಿಹಾಯ್ದರು. ತಾಪಂ ಅಧಿಕಾರಿ ಮಂಜುನಾಥ್ ಪ್ರತಿಭಟನಾಕಾರರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಸಮರ್ಪಕ ಉದ್ಯೋಗ ಕಲ್ಪಿಸಿಕೊಡುವ ಭರವಸೆ ನೀಡಿದ ಬಳಿಕ ಪ್ರತಿಭಟನೆಯನ್ನು ಹಿಂಪಡೆಯಲಾಯಿತು.

ಪ್ರತಿಭಟನೆಯಲ್ಲಿ ಕೃಷಿಕೂಲಿಕಾರರ ಸಂಘದ ಮುಖಂಡ ಶಿವಕುಮಾರ್, ಸರೋಜಮ್ಮ, ಪ್ರಕಾಶ್, ಮಹದೇವು, ಪ್ರೇಮಮ್ಮ, ಪುಷ್ಪಾವತಿ ಸೇರಿದಂತೆ ಹಲವರಿದ್ದರು.

ಕೋವಿಡ್ ಲಸಿಕೆ ಅಭಿಯಾನ ಪರಿಣಾಮಕಾರಿಯಾಗಿಸಿ

ಡಿಸಿ ಚಾರುಲತಾ ಸೋಮಲ್ ಸೂಚನೆ

ಚಾಮರಾಜನಗರ, ಏ.29–ಕೊರೊನಾ ತಡೆಯುವ ನಿಟ್ಟಿನಲ್ಲಿ ಅಧಿಕಾರಿಗಳು ಕೋವಿಡ್ ಲಸಿಕೆ ನೀಡುವ ಅಭಿಯಾನವನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚಿಸಿದರು.



ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಕೋವಿಡ್ ನಿಯಂತ್ರಣ ಸಂಬಂಧ ನಡೆದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಈಗಾಗಲೇ ಕೋವಿಡ್ ಲಸಿಕೆಯ ಮೊದಲ ಡೋಸ್ ನೀಡುವ ಕಾರ್ಯವು ಯಶಸ್ವಿಯಾಗಿದ್ದು, ಎರಡನೇ ಡೋಸ್ ಲಸಿಕೆ ನೀಡುವ ಕಾರ್ಯವು ಶೇ. 100ರಷ್ಟು ಆಗಬೇಕಿದೆ. 60 ವರ್ಷ ಮೇಲ್ಪಟ್ಟವರಿಗೆ ಮುನ್ನೆಚ್ಚರಿಕೆ ಡೋಸ್ ನೀಡುವ ಕೆಲಸವೂ ಜಿಲ್ಲೆಯಲ್ಲಿ ನಿರ್ವಹಿಸಬೇಕಿದೆ. ಹೀಗಾಗಿ ಲಸಿಕಾಕರಣದ ನಿರ್ವಹಣೆ ಉಸ್ತುವಾರಿಗೆ ನೇಮಕ ನೋಡಲ್ ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಯಾವ ಭಾಗದಲ್ಲಿ ಎರಡನೇ ಡೋಸ್ ಲಸಿಕೆ ಪ್ರಗತಿ ಕಡಿಮೆಯಿದೆ ಎಂಬ ಬಗ್ಗೆ ಪರಿಶೀಲಿಸಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರದ ಅಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ನೋಡಲ್ ಅಧಿಕಾರಿಗಳು ಒಟ್ಟಾಗಿ ಲಸಿಕೆ ಪಡೆಯಲು ಬಾಕಿ ಉಳಿದಿರುವ ಪ್ರದೇಶಗಳಲ್ಲಿ ವ್ಯಾಪಕವಾಗಿ ಭೇಟಿ ನೀಡಿ ಲಸಿಕೆ ಪಡೆಯುವ ಕಾರ್ಯಕ್ಕೆ ಉತ್ತೇಜಿಸಬೇಕು ಎಂದು ಸೂಚಿಸಿದರು.

ಜಿಲ್ಲೆಯಲ್ಲಿ 12ರಿಂದ 14 ಮತ್ತು 15 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಸಂಪೂರ್ಣವಾಗಿ ಲಸಿಕೆ ನೀಡುವ ಕಾರ್ಯ ನಡೆಯಬೇಕಿದೆ. ಮೊದಲನೇ ಡೋಸ್ ಪಡೆದುಕೊಂಡಿರುವ ಮಕ್ಕಳಿಗೆ ಎರಡನೇ ಡೋಸ್ ಲಸಿಕೆ ನೀಡಬೇಕಿದೆ. ಶಾಲೆಗಳಿಗೆ ಬೇಸಿಗೆ ರಜೆ ಇರುವ ಹಿನ್ನೆಲೆಯಲ್ಲಿ ಪೋಷಕರ ನೆರವು ಪಡೆದು ಶಾಲೆಗಳಲ್ಲಿ ಒಂದು ದಿನ ಲಸಿಕಾಕರಣ ದಿನವನ್ನು ಏರ್ಪಡಿಸಿ ಮಕ್ಕಳನ್ನು ಕರೆತಂದು ಎರಡನೇ ಡೋಸ್ ಲಸಿಕೆ ನೀಡಬೇಕು. ಇದಕ್ಕಾಗಿ ಶಿಕ್ಷಣ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿ ದೇವಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಎಂ.ವಿಶ್ವೇಶ್ವರಯ್ಯ, ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡೀನ್ ಡಾ.ಸಂಜೀವ್, ಜಿಲ್ಲಾ ನೋಡಲ್ ಅಧಿಕಾರಿ ಡಾ.ಮಹೇಶ್, ಜಿಲ್ಲಾ ಸರ್ವಲೆನ್ಸ್ ಅಧಿಕಾರಿ ಡಾ.ನಾಗರಾಜು, ಜಿಲ್ಲಾ ಸರ್ಜನ್ ಡಾ.ಶ್ರೀನಿವಾಸ್, ಡಾ.ಕಾಂತರಾಜು, ಡಾ.ಮಹದೇವು, ತಾಲೂಕು ಆರೋಗ್ಯ ಅಧಿಕಾರಿಗಳಾದ ಡಾ.ಶ್ರೀನಿವಾಸ್, ಡಾ.ರವಿಕುಮಾರ್, ಡಾ.ಗೋಪಾಲ್, ಡಾ. ಪ್ರಕಾಶ್, ಶಿಕ್ಷಣ ಅಧಿಕಾರಿ ಮಂಜುನಾಥ್, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ನಾಗಮಲ್ಲೇಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಗೀತಾಲಕ್ಷ್ಮಿ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿದ್ದರು.

ವಿಜೃಂಭಣೆಯ ಪಟ್ಟಾಧಿಕಾರ ರಜತ ಮಹೋತ್ಸವ

ಚಾಮರಾಜನಗರ, ಏ.29(ಎಸ್‌ಎಸ್)– ತಾಲೂಕಿನ ಮಲೆಯೂರು ಗ್ರಾಮದ ಹೊರವಲಯದಲ್ಲಿರುವ ಪ್ರಸಿದ್ಧ ಜೈನಮತ ಕನಕಗಿರಿಯಲ್ಲಿ ಅತಿಶಯ ಮಹೋತ್ಸವದ ಮೂರನೇ ದಿನ ಶ್ರೀ ಕ್ಷೇತ್ರದ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ 25ನೇ ವರ್ಷದ ರಜತ ಪಟ್ಟಾಧಿಕಾರ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು.



ಕಾರ್ಯಕ್ರಮದಲ್ಲಿ ಹೊಂಬುಜ ಜೈನ ಕ್ಷೇತ್ರದ ದೇವಕೀರ್ತಿ ಭಟ್ಟಾರಕ ಸ್ವಾಮೀಜಿ, ತಮಿಳುನಾಡಿನ ಅರಹಂತಗಿರಿ ಕ್ಷೇತ್ರದ ಧವಳಕೀರ್ತಿ ಸ್ವಾಮೀಜಿ, ಎನ್.ಆರ್.ಪುರದ ಲಕ್ಷ್ಮೀ ಸೇನಾ ಭಟ್ಟಾರಕ ಸ್ವಾಮೀಜಿ, ಕಂಬದಹಳ್ಳಿ ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿ, ಮಂಡ್ಯ ಆರತಿಪುರ ಜೈನಮಠದ ಸಿದ್ಧಾಂತ ಕೀರ್ತಿ ಭಟ್ಟಾರಕ ಸ್ವಾಮೀಜಿ, ನಾಂದಿನಿ ಕ್ಷೇತ್ರದ ಜಿನಸೇನಾ ಭಟ್ಟಾರಕ ಸ್ವಾಮೀಜಿ ಸೇರಿದಂತೆ ಜೈನ ಸಮಾಜದ ಮುಖಂಡರು, ಶ್ರೀ ಮಠದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಶ್ರೀ ಕ್ಷೇತ್ರ ಕನಕಗಿರಿಯಲ್ಲಿ ವಿವಿಧ ಸೌಲಭ್ಯ ಉದ್ಘಾಟನಾ ಸಮಾರಂಭ

ಚಾಮರಾಜನಗರ, ಏ.29–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಪ್ರವಾಸೋದ್ಯಮ ಇಲಾಖೆ ಸಂಯುಕ್ತಾಶ್ರಯದಲ್ಲಿ ಚಾಮರಾಜನಗರ ತಾಲೂಕು ಮಲೆಯೂರು ಗ್ರಾಮದ ಶ್ರೀ ಕ್ಷೇತ್ರ ಕನಕಗಿರಿಯಲ್ಲಿ 2015–16ನೇ ಸಾಲಿನ ಕೇಂದ್ರ ಪುರಸ್ಕೃತ ಯೋಜನೆಯಡಿ ನಿರ್ಮಿಸಲಾಗಿರುವ ಧ್ಯಾನ ಮಂದಿರ, ನಿರೀಕ್ಷಣಾಲಯ, ಬಸ್ ಶೆಲ್ಟರ್ ಹಾಗೂ ಮತ್ತಿತ್ತರ ಪ್ರವಾಸಿ ಸೌಲಭ್ಯ ಕೇಂದ್ರ ಕಟ್ಟಡಗಳ ಉದ್ಘಾಟನಾ ಸಮಾರಂಭವನ್ನು ಏ. 30ರಂದು ಬೆಳಗ್ಗೆ 10 ಗಂಟೆಗೆ ಮಲೆಯೂರು ಗ್ರಾಮದ ಶ್ರೀ ಕ್ಷೇತ್ರ ಕನಕಗಿರಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಶ್ರೀ ಕ್ಷೇತ್ರ ಕನಕಗಿರಿಯ ಭುವನಕೀರ್ತಿ ಭಟ್ಟಾಕರ ಮಹಾಸ್ವಾಮಿಗಳು ಸಮಾರಂಭದ ಸಾನ್ನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸಮಾರಂಭ ಉದ್ಘಾಟಿಸುವರು. ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ಆನಂದ್‌ಸಿಂಗ್ ಅವರು ಜ್ಯೋತಿ ಬೆಳಗಿಸುವರು.

ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಅಧ್ಯಕ್ಷರೂ ಆದ ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸಪ್ರಸಾದ್ ಉಪಸ್ಥಿತರಿರುವರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಆರ್.ನರೇಂದ್ರ, ಎನ್.ಮಹೇಶ್, ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಕೆ.ಟಿ. ಶ್ರೀಕಂಠೇಗೌಡ, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ. ರಾಮಚಂದ್ರ, ಮಲೆಯೂರು ಗ್ರಾಪಂ ಅಧ್ಯಕ್ಷ ಪುಟ್ಟಸ್ವಾಮಿ, ಸದಸ್ಯರಾದ ಬಿ.ಮಹದೇವಪ್ಪ, ಕಮಲಮ್ಮ, ಮಹಾಲಕ್ಷ್ಮಿ, ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಪಡಿತರ ಅಕ್ಕಿ ಅಕ್ರಮ ಸಾಗಣೆ; ವ್ಯಕ್ತಿ ಬಂಧನ

ಯಳಂದೂರು, ಏ.29(ವಿ.ನಾಗರಾಜು)– ಸಾರ್ವಜನಿಕರಿಂದ ಅಕ್ರಮವಾಗಿ ಪಡಿತರ ಅಕ್ಕಿ ಖರೀದಿಸಿ ಕಾರಿನಲ್ಲಿ ಸಾಗಣೆ ಮಾಡುತ್ತಿದ್ದಾಗ ವ್ಯಕ್ತಿಯೋರ್ವನನ್ನು ತಾಲೂಕಿನ ಯರಿಯೂರು ಗ್ರಾಮದಲ್ಲಿ ಬಂಧಿಸಲಾಗಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಕಿರುಗಾವಲು ಗ್ರಾಮದ ನಿವಾಸಿ ಸಾದತ್ ಅಲಿ ಬಂಧಿತ ವ್ಯಕ್ತಿ. ಈತ ತಾಲೂಕಿನ ಯರಿಯೂರು ಹಾಗೂ ಮದ್ದೂರು ಗ್ರಾಮಗಳಲ್ಲಿ ಸಾರ್ವಜನಿಕರಿಂದ ಅಕ್ರಮವಾಗಿ ಪಡಿತರ ಅಕ್ಕಿಯನ್ನು ಚಿಲ್ಲರೆಯಾಗಿ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಕಾರಿನಲ್ಲಿ ಸಾಗಿಸುತ್ತಿದ್ದ. ಖಚಿತ ಮಾಹಿತಿ ಮೇರೆಗೆ ಆಹಾರ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ದಾಳಿ ನಡೆಸಿ ಅಕ್ಕಿ ಸಾಗಣೆ ಮಾಡುತ್ತಿದ್ದ ವ್ಯಕ್ತಿ ಹಾಗೂ ಕಾರಿನ ಸಮೇತ 13 ಮೂಟೆಯಲ್ಲಿದ್ದ 440 ಕೆ.ಜಿ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದೆ. ಬಂಧಿತ ವ್ಯಕ್ತಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ದಾಳಿಯ ಸಂದರ್ಭದಲ್ಲಿ ಯಳಂದೂರು ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಕರಿಬಸಪ್ಪ, ಆಹಾರ ಇಲಾಖೆ ಅಧಿಕಾರಿ ಬಿಸಲಯ್ಯ, ಮುಖ್ಯಪೇದೆ ಮಹೇಶ್, ನಾಗೇಂದ್ರ ಭಾಗವಹಿಸಿದ್ದರು.



ಬೇಗೂರು–ತೆರಕಣಾಂಬಿ ಠಾಣೆಯ ನೂತನ ಸರ್ಕಲ್ ಇನ್ಸ್‌ಪೆಕ್ಟರ್ ಕಿರಣ್ ಕುಮಾರ್ ಅವರನ್ನು ಬೇಗೂರು ಠಾಣೆ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ರಿಹಾನಾ ಬೇಗಂ, ಎಎಸ್ಐ ಪ್ರಕಾಶ್, ಸಿಬ್ಬಂದಿ ಸ್ವಾಗತಿಸಿದರು. ಫೋಟೋ: ಕಿರಣ್ ಬೇಗೂರು

ರಾಷ್ಟ್ರಪತಿಗಳ ಖಾಸಗಿ ಅಧಿಕಾರಿಯಾಗಿ ಲೆ.ಜ.ಕೋದಂಡ ಪಿ.ಕಾರ್ಯಪ್ಪ ನಿಯುಕ್ತಿ



ಮಡಿಕೇರಿ,ಏ.29– ದೇಶದ ರಕ್ಷಣಾ ಪಡೆಗಳ ಮುಖ್ಯಸ್ಥರೂ ಆಗಿರುವ ರಾಷ್ಟ್ರಪತಿಗಳ ಖಾಸಗಿ ಅಧಿಕಾರಿಯಾಗಿ (ಎ.ಡಿ.ಸಿ– Aide de.Camp) ಕೊಡಗಿನವರಾದ ಲೆಫ್ಟಿನೆಂಟ್ ಜನರಲ್ ಕೋದಂಡ ಪಿ.ಕಾರ್ಯಪ್ಪ ಅವರು ನಿಯುಕ್ತಿಗೊಂಡಿದ್ದಾರೆ. ಇದೊಂದು ಗೌರವಯುತವಾದ ಸ್ಥಾನವಾಗಿದ್ದು, ಸೇನಾ ಜಿಲ್ಲೆ ಖ್ಯಾತಿಯ ಕೊಡಗಿಗೆ ಮತ್ತೊಂದು ಹಿರಿಮೆ ದೊರೆತಂತಾಗಿದೆ.

ಲೆಫ್ಟಿನೆಂಟ್ ಜನರಲ್ ಕೋದಂಡ ಕಾರ್ಯಪ್ಪ ಅವರು ಕೆಲವು ಸಮಯದ ಹಿಂದೆ ಹೊಸದಾಗಿ ಸೃಷ್ಟಿಯಾಗಿರುವ ಮಾಸ್ಟರ್ ಜನರಲ್ ಸಸ್ಟೆನೆನ್ಸ್ (ಎಂ.ಜಿ.ಎಸ್), ಮಾತ್ರವಲ್ಲದೆ 'ಪ್ರಿನ್ಸಿಪಲ್ ಸ್ಟಾಫ್ ಆಫೀಸರ್ ಟು ಚೀಫ್ ಆಫ್ ಆರ್ಮಿ ಸ್ಟಾಫ್' ಆಗಿಯೂ ನಿಯುಕ್ತಿಗೊಂಡಿದ್ದರು. ರಜಪೂತ್ ರೈಫಲ್ಸ್‌ನ ಮುಖ್ಯಸ್ಥರೂ ಆಗಿರುವ ಇವರು, ಇದೀಗ ಈ ಸ್ಥಾನದೊಂದಿಗೆ ರಾಷ್ಟ್ರಪತಿಗಳ ಎ.ಡಿ.ಸಿ.ಯಾಗಿಯೂ ನೇಮಕಗೊಂಡಿದ್ದಾರೆ.

ಮುಖ್ಯಮಂತ್ರಿಗಳ ಮಾತಿಗೆ ಕಿಮ್ಮತ್ತಿಲ್ಲವೆ?

ಕಾಫಿ ಬೆಳೆಗಾರರ ಪಂಪ್‌ಸೆಟ್‌ಗೆ ಉಚಿತ ವಿದ್ಯುತ್ ಪೂರೈಕೆ ಸಾಧ್ಯವಿಲ್ಲ

ಇಂಧನ ಇಲಾಖೆ ಅಧೀನ ಕಾರ್ಯದರ್ಶಿ ಸುತ್ತೋಲೆ

ಗೋಣಿಕೊಪ್ಪಲು,ಏ.29–ಕಾಫಿ ಬೆಳೆಗಾರರ 10 ಹೆಚ್‌ಪಿ ವರೆಗಿನ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ಪೂರೈಕೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ ಬೆನ್ನಲ್ಲೇ ಇಂಧನ ಇಲಾಖೆ ಅಧೀನ ಕಾರ್ಯದರ್ಶಿ ಎಂ.ಮಂಗಳಗೌರಿ ಅವರು ಕಾಫಿ ಬೆಳೆಗಾರರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆ ಮಾಡಲು ಸಾಧ್ಯವಿಲ್ಲ ಎಂದು ಸುತ್ತೋಲೆ ಹೊರಡಿಸಿದ್ದು, ಮುಖ್ಯಮಂತ್ರಿಗಳ ಮಾತಿಗೆ ಕಿಮ್ಮತ್ತಿಲ್ಲವೆ? ಎಂಬ ಪ್ರಶ್ನೆ ಉದ್ಭವಿಸಿದೆ.



ಇಂಧನ ಇಲಾಖೆಯ ಅಧೀನ ಕಾರ್ಯದರ್ಶಿ ಹೊರಡಿಸಿರುವ ಸುತ್ತೋಲೆಯನ್ನು ಕರ್ನಾಟಕ ರಾಜ್ಯ ರೈತ ಸಂಘ ಕಟುವಾಗಿ ಖಂಡಿಸಿದೆ. ಕರ್ನಾಟಕ ರಾಜ್ಯ ರೈತ ಸಂಘದ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ಕಾಡ್ಯಮಾಡ ಮನುಸೋಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸರ್ಕಾರದ ಕಾರ್ಯದರ್ಶಿಗಳು ರೈತ ಸಂಘಕ್ಕೆ ಬರೆದ ಪತ್ರದಲ್ಲಿ ಈ ವಿಷಯವನ್ನು ಸ್ಪಷ್ಟಪಡಿಸಿದ್ದು, ಕೊಡಗಿನ ಕಾಫಿ ಬೆಳೆಗಾರಿಗೆ ಮತ್ತೆ ಸರ್ಕಾರ ಅನ್ಯಾಯ ಮಾಡಿದೆ. ಈ ಬಗ್ಗೆ ಮತ್ತೆ ರಾಜ್ಯದ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಅತಿಸಣ್ಣ ರೈತರಿಗೆ 10 ಹೆಚ್.ಪಿ.ವರೆಗೆ ಉಚಿತ ವಿದ್ಯುತ್ ನೀಡಲು ಒತ್ತಾಯಿಸಲಾಗುತ್ತದೆ ಎಂದರು.

ಕಳೆದ ಹತ್ತು ವರ್ಷಗಳಿಂದ ಈ ಬಗ್ಗೆ ರೈತ ಸಂಘ ನಿರಂತರ ಹೋರಾಟ ನಡೆಸುತ್ತಾ ಬಂದಿದೆ ಈ ಬಾರಿ ಅಧಿವೇಶನ ವೇಳೆ ಮುಖ್ಯಮಂತ್ರಿಗಳನ್ನು ರೈತ ಸಂಘ ನಿಯೋಗ ಭೇಟಿ ಮಾಡಿ ಜಿಲ್ಲೆಯ ರೈತರ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಡಲಾಗಿತ್ತು. ಮುಖ್ಯಮಂತ್ರಿಗಳು ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸುವ ಭರವಸೆ ನೀಡಿದ್ದರು. ಇದೀಗ ಉಚಿತ ವಿದ್ಯುತ್ ನೀಡುವ ವಿಚಾರದಲ್ಲಿ ಇಂಧನ ಇಲಾಖೆಯ ಕಾರ್ಯದರ್ಶಿಗಳು ಕೊರೊನಾ ಸಂದರ್ಭದ ಆರ್ಥಿಕ ಪರಿಸ್ಥಿತಿಯನ್ನು ಮುಂದಿಟ್ಟುಕೊಂಡು ರೈತರಿಗೆ ಉಚಿತ ವಿದ್ಯುತ್ ನೀಡಲು ಸಾಧ್ಯವಿಲ್ಲ ಎಂದಿದ್ದಾರೆ. ಇದರಿಂದಾಗಿ ರಾಜ್ಯದ ಮುಖ್ಯಮಂತ್ರಿಗಳ ಮಾತಿಗೆ ಕಿಮ್ಮತ್ತು ಇಲ್ಲದಂತೆ ಮಾಡಿದ್ದಾರೆ ಎಂದರು.

ರೈತ ಸಂಘದ ಕಾನೂನು ಘಟಕದ ಸಲಹೆಗಾರರಾದ ವಕೀಲ ಹೇಮಚಂದ್ರ ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಇಂಧನ ಇಲಾಖೆಯ ಕಾರ್ಯದರ್ಶಿ ಹೊರಡಿಸಿರುವ ಆದೇಶದ ಪ್ರತಿಯನ್ನು ಸುಡುವುದರ ಮೂಲಕ ತಮ್ಮ ಹೋರಾಟ ಮುಂದುವರಿಯಲಿದೆ. ಇಂತಹ ಅನ್ಯಾಯವನ್ನು ಸಹಿಸಲು ಸಾಧ್ಯವಿಲ್ಲ ಎಂದರು.

ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಚೆಟ್ರಮಾಡ ಸುಜಯ್ ಬೋಪಯ್ಯ, ಜಿಲ್ಲಾ ಸಂಚಾಲಕ ಪುಚ್ಚಿಮಾಡ ಸುಭಾಷ್, ಜಿಲ್ಲಾ ಕಾರ್ಯದರ್ಶಿ ಅಜ್ಜಮಾಡ ಚಂಗಪ್ಪ ವಿ.ಪೇಟೆ ತಾಲೂಕು ಅಧ್ಯಕ್ಷ ಬಾಚಮಾಡ ಭವಿ ಕುಮಾರ್, ಪ್ರಮುಖರಾದ ಮಂಡೆ ಪಂಡ ಪ್ರವೀಣ್, ಚಟ್ಟಂಗಡ ಕಂಬ ಕಾರ್ಯಪ್ಪ, ಆಲೆಮಾಡ ಮಂಜುನಾಥ್, ಚಂಗುಲಂಡ ಸೂರಜ್, ಕಿಶ ಮಾಚಯ್ಯ, ಪುಚ್ಚಿಮಾಡ ರಾಯ್ ಮಾದಪ್ಪ, ತೀತರ ಮಾಡ ರಾಜ, ಚೆಟ್ಟಿಮಾಡ ರಾಬಿನ್, ಶ್ರೀಕಂಠ ಸಭೆಯಲ್ಲಿ ಭಾಗವಹಿಸಿದ್ದರು.



ಗುಡ್ಡೆಹೊಸೂರು ಸಮೀಪದ ಬಸವನಹಳ್ಳಿ ಹೊಸಕಾಡು ಗ್ರಾಮದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ವಾರ್ಷಿಕ ಮಹಾಪೂಜೆ ವಿಜೃಂಭಣೆಯಿಂದ ನಡೆಯಿತು. ಪೂಜಾ ಕಾರ್ಯದಲ್ಲಿ ದೇವಸ್ಥಾನದ ಸಮಿತಿ ಅಧ್ಯಕ್ಷ ಗುಡ್ಡೆಮನೆ ಅಶ್ವತ್, ಕಾರ್ಯದರ್ಶಿ ಹನಿಕುಮಾರ್, ಸಮಿತಿ ಸದಸ್ಯರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಈ ಬಾರಿ ಮಳೆಯಿಂದ ಪ್ರಾಕೃತಿಕ ವಿಕೋಪ ಸಂಭವಿಸದು

ಹಿರಿಯ ಭೂ ವಿಜ್ಞಾನಿ ಡಾ. ಹೆಚ್.ಎಸ್.ಎಂ.ಪ್ರಕಾಶ್

ಮಡಿಕೇರಿ,ಏ.29– ಈ ಮುಂಗಾರಿನಲ್ಲಿ ಕರ್ನಾಟಕ ಮತ್ತು ಕೇರಳದಲ್ಲಿ ಈ ಹಿಂದೆ ಸಂಭವಿಸಿದಂತೆ ಭಾರೀ ಪ್ರಮಾಣದ ಮಳೆ, ಪ್ರವಾಹ ಮತ್ತು ಭೂ ಕುಸಿತದಂತಹ ಪ್ರಾಕೃತಿಕ ವಿಕೋಪಗಳ ಅಪಾಯ ಇರುವುದಿಲ್ಲವೆಂದು ಜಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾದ ನಿವೃತ್ತ ಪ್ರಧಾನ ಉಪ ನಿರ್ದೇಶಕ, ಹಿರಿಯ ಭೂ ವಿಜ್ಞಾನಿ ಡಾ. ಹೆಚ್.ಎಸ್.ಎಂ. ಪ್ರಕಾಶ್ ತಿಳಿಸಿದ್ದಾರೆ.



ಮಡಿಕೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಭೂಮಿಯ ಮೇಲೆ 400ಕ್ಕೂ ಹೆಚ್ಚಿನ ಜ್ವಾಲಾಮುಖಿಗಳಿದ್ದು, ಇವುಗಳಲ್ಲಿ ಪ್ರತಿನಿತ್ಯ 40ಕ್ಕೂ ಹೆಚ್ಚಿನ ಜ್ವಾಲಾಮುಖಿಗಳು ಸಕ್ರಿಯವಾಗಿರುತ್ತವೆ. ಜ್ವಾಲಾಮುಖಿ ಸ್ಫೋಟದಿಂದ ಭೂಮಿಯ ವಾಯು ಪದರಗಳಲ್ಲಿ ಉಂಟಾಗುವ ಬದಲಾವಣೆ, ತೇವಾಂಶದ ಹೆಚ್ಚಳದ ಕುರಿತು ವೈಜ್ಞಾನಿಕವಾಗಿ ಮಾಹಿತಿ ಕಲೆ ಹಾಕಿ ನಡೆಸಿರುವ ಆಳವಾದ ಅಧ್ಯಯನಗಳಿಂದ ಈ ಬಾರಿ ಗಂಭೀರ ಸ್ವರೂಪದ ಮಳೆ ಮುಂಗಾರಿನ ಅವಧಿಯಲ್ಲಿ ಇರುವುದಿಲ್ಲವೆಂದು ಗುರುತಿಸಿರುವುದಾಗಿ ಸ್ಪಷ್ಟಪಡಿಸಿದರು.

ಸಾಮಾನ್ಯವಾಗಿ ಹವಾಮಾನ ಇಲಾಖೆ ಭೂಮಿಯ ವಾಯುಪದರಗಳ ವ್ಯತ್ಯಯವನ್ನಷ್ಟೆ ಅಂದಾಜಿಸಿ ಮಳೆಯ ಮುನ್ಸೂಚನೆಗಳನ್ನು ನೀಡುತ್ತದೆ. ಆದರೆ, ನಿರಂತರ ಅಧ್ಯಯನದ ಮೂಲಕ ಜ್ವಾಲಾಮುಖಿಗಳ ಪರಿಣಾಮ ಭೂಮಿಯ ಮೇಲ್ಭಾಗದ ನಾಲ್ಕು ಪದರಗಳಲ್ಲಿನ ಬದಲಾವಣೆಗಳನ್ನು ಸ್ಪಷ್ಟವಾಗಿ ಗುರುತಿಸುವ 'ವೈಜ್ಞಾನಿಕ ಅಂತರ ಶಿಸ್ತೀಯ ಅಧ್ಯಯನ ಸಿದ್ಧಾಂತ'ವನ್ನು ವಿಜ್ಞಾನ ಜಗತ್ತಿಗೆ ತಾವು ನೀಡಿದ್ದು, ಅದರ ಮೂಲಕ ಮುಂಗಾರಿನ ಮುನ್ಸೂಚನೆಯನ್ನು ವೈಜ್ಞಾನಿಕ ಹಿನ್ನೆಲೆಯನ್ನು ಆಧರಿಸಿ ನೀಡುತ್ತಿರುವುದಾಗಿ ಸ್ಪಷ್ಟಪಡಿಸಿದರು.

ಕೊಡಗು ಒಳಗೊಂಡಂತೆ ರಾಜ್ಯದ ಹಲವೆಡೆ ಮತ್ತು ನೆರೆಯ ಕೇರಳದಲ್ಲಿ 2018ರಲ್ಲಿ ಭಾರೀ ಪ್ರಮಣದ ಮಳೆಯಾಗಿ ಅನಾಹುತಗಳು ಸಂಭವಿಸಿತ್ತು. ಇದರ ಕಾರಣಗಳನ್ನು ತನ್ನ ಹೊಸ ಸಿದ್ಧಾಂತದಡಿ ವೈಜ್ಞಾನಿಕ ಮಾಹಿತಿಗಳನ್ನು ಕಲೆ ಹಾಕಿ ಪರೀಕ್ಷೆಗೆ ಒಳಪಡಿಸಿದಾಗ, ಮಾರಿಷಸ್ ದ್ವೀಪದ ಬಳಿಯ ಸಮುದ್ರದಾಳದ ಜ್ವಾಲಾಮುಖಿ 2018ರ ಆಗಸ್ಟ್‌ಗೂ ಮುಂಚೆ ಮೂರು ತಿಂಗಳಿನಿಂದ ಸಕ್ರಿಯವಾಗಿದ್ದು, ಇದರಿಂದ ಅತ್ಯಧಿಕ ಮಟ್ಟದಲ್ಲಿ ತೇವಾಂಶ ಹೆಚ್ಚಿರುವುದು ಭಾರೀ ಮಳೆಗೆ ಕಾರಣವೆಂಬುದು ಸ್ಪಷ್ಟವಾಯಿತು. ಈ ನೂತನ ವೈಜ್ಞಾನಿಕ ಸಿದ್ಧಾಂತದಡಿ 2020 ಮತ್ತು 2021ರಲ್ಲಿ ಸಾಧಾರಣ ಮಟ್ಟದ ಮಳೆಯಾಗುತ್ತದೆಂದು ತಾನು ನೀಡಿದ ಮುನ್ಸೂಚನೆಗಳು ದೃಢವಾಗಿದೆಯೆಂದು ಡಾ.ಪ್ರಕಾಶ್ ತಿಳಿಸಿದರು.

ಕಾರ್ಬನ್ ಡಯಾಕ್ಸೈಡ್ ಕಾರಣವಲ್ಲ: ಭೂಮಿಯ ತಾಪಮಾನ ಹೆಚ್ಚಳಕ್ಕೆ ಕಾರ್ಖಾನೆಗಳಿಂದ, ವಾಹನಗಳಿಂದ ಉತ್ಪತ್ತಿಯಾಗುವ ಕಾರ್ಬನ್ ಡೈಆಕ್ಸೈಡ್ ಕಾರಣವೆನ್ನುವುದಕ್ಕೆ ಯಾವುದೇ ಸ್ಪಷ್ಟ ಪುರಾವೆಗಳಿಲ್ಲವೆಂದು ಪ್ರತಿಪಾದಿಸಿದ ಅವರು ಕಾರ್ಖಾನೆಗಳು, ವಾಹನಗಳು ಇಲ್ಲದ ನೂರಾರು ವರ್ಷಗಳ ಹಿಂದೆಯೂ ಭಾರೀ ಪ್ರಮಾಣದ ಬರಗಾಲ ಉಂಟಾಗಿರುವುದನ್ನು ಇತಿಹಾಸದ ಮೂಲಕ ನಾವು ಕಾಣಬಹುದೆಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕುಶಾಲನಗರ ಪ್ರವಾಹ ಸಂತ್ರಸ್ತರ ವೇದಿಕೆ ಅಧ್ಯಕ್ಷ ಎಂ.ಎನ್. ಚಂದ್ರಮೋಹನ್ ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಬೇಕಾಗಿದ್ದಾರೆ
10th ಪಾಸ್ ಅಥವಾ ಫೇಲ್ ಆದವರು ಮತ್ತು ಲ್ಯಾಬ್ ಟೆಕ್ನಿಷಿಯನ್ (Fresher) ಸಯ್ಯಾಜಿರಾವ್ ರೋಡ್ ಹತ್ತಿರ ವಾಸವಿರುವವರು ಅಥವಾ 2 ರಿಂದ 3 ಕಿ.ಮೀ ಒಳಗೆ ಇರುವವರು ಬೇಕಾಗಿದ್ದಾರೆ. ಸಂಪರ್ಕಿಸಿ:
7353191227

FOR SALE
30'x40' - E/F Site No. 349 at Dwarakanagar, Near Ring Road Maramma Temple.
20'x30' - S/F House # 399, Double Floor, 4 bedrooms with Solar at Srirampura 2nd Stage, 12th Cross.
99004-93490
96638-38530

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಬೇಕಾಗಿದ್ದಾರೆ
ಬಿ.ಕಾಂ. ಪದವೀಧರರು, ಶ್ರೀರಂಗಪಟ್ಟಣದ ಕಚೇರಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಮಹಿಳೆಯರಿಗೆ ಆದ್ಯತೆ.
ಸಂಪರ್ಕಿಸಿ:
Mob: 8861106220

ಮಾರಾಟಕ್ಕಿದೆ
30x40 ಡ್ಯುಪ್ಲೆಕ್ಸ್ ಮನೆ 3 ಬೆಡ್‌ರೂಮ್ ಆಲ್ ಟೀಕ್ ಮಾಡ್ರನ್ ಮನೆ. 2 ವರ್ಷದ ಮನೆ ವಿಜಯನಗರದ ಹತ್ತಿರ ಮಾರಾಟಕ್ಕಿದೆ. 90 Lakhs
9945042875

ಮಾರಾಟಕ್ಕಿದೆ
30x40 ಸೈಟು ಹೊಸ ಆರ್.ಟಿನಗರದ ಹತ್ತಿರ ಮಾರಾಟಕ್ಕಿದೆ. 35 ಲಕ್ಷ, 20x30, 30x40, 40x60 ಹೊಸ ಮನೆ, ಹಳೆ ಮನೆ ಮತ್ತು ಸೈಟು ಎಲ್ಲಾ ಬಡಾವಣೆಯಲ್ಲಿ ಮಾರುವವರು, ಕೊಳ್ಳುವವರು ಸಂಪರ್ಕಿಸಿ
8618495118

AGRICULTURAL LAND FOR SALE
4 acres 3 guntas fenced Agriculture Land, 90 Coconut Trees at Nanjanagudu, Mysuru District, 7 km From Nanjangudu Temple, Main Road, Adjacent Bannariyamman Sugar Factory. 1. 60 Cr.
Manjunath 7259592104 9164374021
Shivakumar 9845875555

ನಿರ್ಮಲಧಾರೆ SOLUTIONS
ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
9606871188

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಕಂಪನಿ / ಆಫೀಸ್ ಕೆಲಸಗಳಿಗೆ ಯುವಕ / ಯುವತಿಯರು ಬೇಕಾಗಿದ್ದಾರೆ. SSLC, PUC, ITI, JOC, Diploma (Any Trade) and Degree ವಸತಿಯೂಟದೊಂದಿಗೆ Salary + ಓಟಿ 18,000-32,000/-
7204117164
7204655164

WANTED
Marketing Executive in Mysore for a leading Book Publisher. Two wheeler is a must.
Contact:
96111 85999

WANTED PIGMY AGENTS
Atractive interest Rate on FD upto 11.55% PA Shares are opened for more details Contact:
9036967266
SAI MULTISTATE CREDIT CO-OPERATIVE SOCIETY
3rd Main, 5th Cross, Jayanagara, Mysore

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಹೆಸರಾಂತ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ–ಮೊದಲು ಬಂದವರಿಗೆ ಆದ್ಯತೆ, ವಿದ್ಯಾರ್ಹತೆ– ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ: 12,165+ESI&PF ಮತ್ತು ಉಚಿತ ಊಟದ ವ್ಯವಸ್ಥೆ. ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ. (ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ)
8453408502 / 9108100117

2 Bed Room ಕಾರ್ನರ್ ಮನೆ ಮಾರಾಟಕ್ಕಿದೆ
ನಂ 331, KRS Road, (ಕುಸುಮ ಚಂದ್ರಶೇಖರ್ ಛತ್ರದ ಎದುರು) ಚಾಮುಂಡೇಶ್ವರಿ ಲೇಔಟ್, ನಾರ್ತ್ ಫೇಸ್, ಗ್ರೌಂಡ್ ಫ್ಲೋರ್ ಮತ್ತು First Floor (21x40)
9686995959
8660754874

ಬತ್ತಲು ಸಾಂಬ್ರಾಣಿ ಉದ್ಯೋಗ
ಉತ್ತಮ ಗುಣಮಟ್ಟದ ಬತ್ತಲು ಸಾಂಬ್ರಾಣಿಯನ್ನು ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 1000 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196
9880548596

HOUSE FOR SALE
MUDA 30x40
New 4 BHK Duplex with 22 Squares House, E/F Door at SBM Layout, Bogadi- Rs.1.40 cr, Pillar Construction, 100 mtrs from Gaddige Road.
Direct Owner: 6361295132

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
26/5 ಕಾಶಿ, ವಿಶ್ವನಾಥ, ಜಾರ್ಖಂಡ್, ವೈದ್ಯನಾಥ, ಗಯ, ಬುದ್ಧ ಗಯ, ಪ್ರಯಾಗ ರಾಜ್, ಅಯೋಧ್ಯಾ. 01/07 ಅಮರನಾಥ ಯಾತ್ರೆ ಜಮ್ಮು ಮತ್ತು ಕಾಶ್ಮೀರ, 23/6 ಗುಜರಾತ್, ದ್ವಾರಕಾ, ಸೋಮನಾಥ, ನಾಗನಾಥ, ಸರ್ದಾರ್ ವಲ್ಲಭಭಾಯಿ ಪಟೇಲ್. 16/05 ಕೇರಳ ಪ್ರವಾಸ, ಕೊಚಿನ್, ಗುರುವಾಯೂರು, ಪದ್ಮನಾಭಸ್ವಾಮಿ ಟೆಂಪಲ್, ಅಟ್ಟುಕಲ್ ಭಗವತಿ ದೇವಸ್ಥಾನ, ಚೋಟನಿಕೆರೆ, ಅಲ್ಲೆಪ್ಪಿ, ಟ್ರಿವಂಡ್ರಮ್,
9964527782 / 9591017782

WANTED
Immediate joining to work at Mysore
1) STEWARDS
2) CAPTAINS
3) CHEFS
4) ACCOUNTANT : Tally must & 3 to 4 years experienced.
Contact between 11 am & 7 pm
9008558030, 8050950493

SITES FOR SALE
20x30 - 13.20 Lakhs
30x40 - 26.40 Lakhs
Bank Loan upto 75%, Ready for Registration near, Gurur Bus Stop, Ramabainagar, Mysore, DTCP approved (Corporation Limits) 1.5 kms from J P Nagar Ring Road
8660105902

ಸೈಟುಗಳು ಮತ್ತು ಮನೆ ಮಾರಾಟಕ್ಕಿದೆ
Bank loan available.
ಶ್ರೀರಾಂಪುರ ರಿಂಗ್ ರೋಡ್ ಹತ್ತಿರ, ಮೈಸೂರು
Mob: 8050345574

WANTED
* Service Manager
* Floor Incharge
* Technicians / Mechanics
For HINDUSTAN TRUCKS TATA MOTORS AURTHORISED COMMERCIAL VEHICLE SERVICE STATION
9945698822 / 9731563939

SRI LAKSHMI GROUPS
SPECIALIST IN Painting, Interior, Exterior and Water Proofing. Contractor, Dr.Fixit, Terrace, Roof, Mould.
Website: www.slgpainters.com
Present Google Review is 4.9
Call : 99459 38632 / 87927 08269
9886773293 (Karnataka Services)

HOME LOAN
11B, 9/11A ಕಾರ್ಪೋರೇಷನ್ & ಮುಡಾ ಖಾತಾಗಳಿಗೆ ಸಾಲ ಸೌಲಭ್ಯ ಕೊಡಿಸಲಾಗುವುದು. ಮನೆ ಖರೀದಿ, ಸೈಟ್ ಖರೀದಿ, ಮನೆ ಕನ್ಸ್ಟ್ರಕ್ಷನ್, ಮಾರ್ಟ್‌ಗೇಜ್, ಫ್ಲಾಟ್ ಖರೀದಿ
HOUSING LOAN FOR PENSIONERS
ಶ್ರೀ ಸಾಯಿ ಎಂಟರ್‌ಪ್ರೈಸಸ್ ಮೈಸೂರು
8884176836

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
9880813586 / 6360884930

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣಿಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

CHANGE OF NAME
I, Anisha Jain, D/o. Suresh H. Jain, residing at # C-003, Ground Floor, Prithvi Palace, Lalithamahal Main Road, Sicharthanagar, Mysore-570 011, Karnataka do hereby solemnly affirm & state on oath that, I have changed my name from Anisha S. Jain to Anisha Jain on my own free will vide affidavit sworn in before Notary L.N. Rajendran on 22.04.2022. In future in all my documents, deeds dealings and all transactions whatsoever, I will sign & identified as Anisha Jain Sd/- Anisha Jain

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು / ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1) ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.
2) ಶಿಕ್ಷರಣೆ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ವಿವಾಹ ವೇದಿಕೆ
ಒಕ್ಕಲಿಗ ಗೌಡರು ವಧು – ವರರಿಗಾಗಿ ಸಂಪರ್ಕಿಸಿ. ವಿಧವೆ – ವಿಧುರರು ಕೂಡ ಸಂಪರ್ಕಿಸಬಹುದು
8660870553

HOUSE FOR SALE
30x50 MUDA
New 4 BHK Duplex with Home Theatre, N/F Door with Pillar Construction at Somnathanagar, Dattagalli - Rs. 1.95 Cr. (Brokers Excuse)
Contact Owner: 9035412545

ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ 15,000/– ರಿಂದ 46,000/–
7259865221 / 8867373902

10.06.2022 15 ದಿನಗಳ ಬದರಿನಾಥ್
ಕೇದಾರನಾಥ್ ಗಂಗೋತ್ರಿ, ಯಮುನೋತ್ರಿ, ಹರಿದ್ವಾರ್, ರಿಷಿಕೇಶ್, 27.06.2022 14 ದಿನಗಳ ವೈಷ್ಣವಿದೇವಿ ಕಾಶ್ಮೀರ, ಗುಲ್ಮಾರ್ಗ್ ಅಮರನಾಥ್ ಯಾತ್ರೆ ಸಂಪರ್ಕಿಸಿ: ವಿಷ್ಣು ಟೂರ್ಸ್ ಅಂಡ್ ಟ್ರಾವೆಲ್ಸ್ ತ್ಯಾಗರಾಜನಗರ ಬೆಂಗಳೂರು –70
9342287551 / 8050629305

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5250
ಪ್ಯೂರಿಟಿಯ ಗುಣಮಟ್ಟಕ್ಕೆ ಅನುಗುಣವಾಗಿ ಕೊಡಲಾಗುತ್ತದೆ. ನೀವು ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿಯಿಟ್ಟು ಬಿಡಿಸಿ ಕೊಳ್ಳಲಾಗದ ಚಿನ್ನದ ಆಭರಣಗಳನ್ನು ಬಿಡಿಸಿ ಮಾರುಕಟ್ಟೆಗಿಂತ ಅಧಿಕ ಬೆಲೆಗೆ ತೆಗೆದುಕೊಂಡು ಉಳಿದ ಹಣವನ್ನು ತಕ್ಷಣಕೊಡುತ್ತೇವೆ. ನಿಮಗೆ ಮತ್ತೆ ಚಿನ್ನಾಭರಣ ಬೇಕಾದಲ್ಲಿ ಕೂಲಿ ವೇಸ್ಟೇಜ್ ಇಲ್ಲದೆ ಮಾಡಿಕೊಡಲಾಗುತ್ತದೆ. ಕೂಡಲೇ (T&C) ಸಂಪರ್ಕಿಸಿ– S.M ಗೋಲ್ಡ್ ಫೈನಾನ್ಸ್
8050518881

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಮನೆಯಿಂದಲೇ ಕೆಲಸ ತಕ್ಷಣ ಬೇಕಾಗಿದ್ದಾರೆ
ಗೃಹಿಣಿಯರು, ವಿದ್ಯಾರ್ಥಿಗಳು, ನಿವೃತ್ತರು ಎಲ್ಲರಿಗೂ ಅವಕಾಶ, ಕನ್ನಡ ಇಂಗ್ಲೀಷ್ ಬರವಣಿಗೆ ಹಾಗೂ ಡೇಟಾ ಎಂಟ್ರಿ ಕೆಲಸಗಳು, ಗಳಿಸಿ ತಿಂಗಳಿಗೆ 15,000–26,000/–
9663321516 / 8904253623

ಫ್ಲಾಟ್ ಮಾರಾಟಕ್ಕಿದೆ
2 ಬೆಡ್ ರೂಂ, ಪೂರ್ವದ ಬಾಗಿಲು ಉತ್ತರಕ್ಕೆ 80 ಅಡಿ ರಸ್ತೆ, 1100 ಚ.ಅಡಿ, ವಾಸಕ್ಕೆ ಸುಸಜ್ಜಿತ, ನೆಲಮಾಳಿಗೆ ಕಾರ್ ನಿಲುಗಡೆ ಇದೆ. ವಿಜಯನಗರ 1ನೇ ಹಂತ, ರೂ.47 ಲಕ್ಷ (ಮಧ್ಯವರ್ತಿಗೆ ಅವಕಾಶವಿಲ್ಲ)
7022548914 / 9845050224

ತಕ್ಷಣ ಬೇಕಾಗಿದ್ದಾರೆ
PART TIME / FULL TIME / HOME-BASED
E-CODE GAS SAFE

EDUCATION ವಿದ್ಯಾರ್ಹತೆ	WORK TIME ಕೆಲಸದ ಸಮಯ	SALARY ಸಂಬಳ
SSLC,PUC ,Dip,Degree	4 HOURS	6000/-
SSLC,PUC ,Dip,Degree	8 HOURS	16000/-

ಗ್ಯಾಸ್ ಸೇಫ್ ಬಗ್ಗೆ
ಮನೆಯಲ್ಲೆ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಆಫೀಸ್ ಕ್ಲೀನಿಂಗ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ 10-6 pm 8000/-
Ph.9380142144
ಶಿವರಾಂಪೇಟೆ, ಮೈಸೂರು

ಬೇಕಾಗಿದ್ದಾರೆ
ತಮಿಳು ಮತ್ತು ಕನ್ನಡ ಮಾತನಾಡಲು ಬರುವ Telecaller ಮತ್ತು Executive ಬೇಕಾಗಿದ್ದಾರೆ.
ಸಂಬಳ - 20000/-
8884304444

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

FOR RENT
Ground Floor & First Floor House for Rent in Vijayanagar 1st Stage, Near Kuvempu Trust
9480289005

ಟೈಲರಿಂಗ್ ತರಬೇತಿ
ನಮ್ಮಲ್ಲಿ ನುರಿತ ತರಬೇತುದಾರರಿಂದ ಟೈಲರಿಂಗ್ ತರಬೇತಿ ನೀಡಲಾಗುತ್ತದೆ. ಇಂದೇ ಸಂಪರ್ಕಿಸಿ.
ಗಾನವಿ ಇಂಟರ್ ನ್ಯಾಷನಲ್
22/2, ಚಂದ್ರಗುಪ್ತ ರಸ್ತೆ, ಸಂಗಮ್ ಥಿಯೇಟರ್ ಹತ್ತಿರ, ಮೈಸೂರು
8073502957 / 9590666328
8123819136

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

30x40 ಸೈಟು @ Rs.20 ಲಕ್ಷ
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ತಕ್ಷಣ ಮನೆ ಕಟ್ಟಬಹುದು. ಮೈದನಹಳ್ಳಿ, ಇಲವಾಲ, ಹುಣಸೂರು ರೋಡ್, ಮೈಸೂರು
9538583377

BRIDE / GROOMS MATCH MAKERS ವಧು–ವರರ ಮಾಹಿತಿ ಕೇಂದ್ರ
ಎಲ್ಲಾ ಜಾತಿಯ 18 to 65 Life Partner Govt. Jobs/ Private /Own Business / Farmers, 18000 ವಧುಗಳಿಗೆ ವರಬೇಕು. 28000 ವರಗಳಿಗೆ ವಧು ಬೇಕು. 3800 ಡೈವೋರ್ಸ್ / ವಿಧವೆಯರು, ವಿಧುರರಿಗೆ ಸಂಗಾತಿಗಾಗಿ ನೇರ ಭೇಟಿ ಮಾಡಿ K.R.Circle
Wanted Computer Operator Female
ಚೇತನ ಗಂಗಾ: 7975728012

ತಕ್ಷಣ ಬೇಕಾಗಿದ್ದಾರೆ
1) 30 ವರ್ಷ ಒಳಗಿರುವ ಹುಡುಗ ಹುಡುಗಿಯರು ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ ಹಾಗೂ ಹೌಸ್‌ಕೀಪಿಂಗ್ ಹುಡುಗ ಬೇಕಾಗಿದ್ದಾರೆ.
2) 50 ವರ್ಷ ಒಳಗಿರುವ ಓದು ಬರಹ ಬಲ್ಲ ದೃಢಕಾಯರಾದ ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಮೈಸೂರು ನಗರದ ಹೋಟೆಲ್ ಹಾಗೂ ಶೋರೂಂ, ಕಂಪನಿಗಳಲ್ಲಿ ಕೆಲಸಮಾಡಲು ಬೇಕಾಗಿದ್ದಾರೆ.
9035050653 / 9035050656

ಸುವರ್ಣ ಯಾತ್ರ
01/06/22 ಕಾಶಿ ಪ್ರವಾಸ 7 ದಿನಗಳು ಕಾಶಿ, ಗಯಾ ಬುದ್ಧಗಂಗಾ, ಪ್ರಯಾಗರಾಜ್, ಜಾರ್ಖಂಡ್, ಅಯೋಧ್ಯೆ,
11/06/22 ದೆಹಲಿ ಕೇದಾರನಾಥ್, ಬದ್ರಿನಾಥ್ ಯಮುನೋತ್ರಿ, ಗಂಗೋತ್ರಿ 13 ದಿನಗಳು
28/05/22 ಪುರಿ ಜಗನ್ನಾಥ ಹಾಗೂ ವಿಶಾಖಪಟ್ಟಣಂ ಪ್ರವಾಸ 9 ದಿನಗಳು
9019462508
9008381022

'ನೆಲೆ' ವೃದ್ಧಾಶ್ರಮ
ಆರೋಗ್ಯ ಆರೈಕೆ ಬೇಕಾದ ಹಿರಿಯ ನಾಗರೀಕರಿಗೆ ಹಾಗೂ ಹಾಸಿಗೆ ಹಿಡಿದವರಿಗೆ ವಸತಿ, ಸಸ್ಯಹಾರಿ ಊಟ, ವೈದ್ಯಕೀಯ ತಪಾಸಣೆ, ನರ್ಸಿಂಗ್ ಸೌಲಭ್ಯ ಹಾಗೂ ಅಂಬುಲೆನ್ಸ್ ಸೌಲಭ್ಯ ದೊರೆಯುತ್ತದೆ. ದಾಖಲಾತಿಗಾಗಿ ಸಂಪರ್ಕಿಸಿ.
ಡಾ.ಕಾಂತರಾಜು.ಸಿ.ಕೆ
9845058023

WANTED TEACHERS
1 to 5th English, EVS, Hindi.
6th to 10th English, Social. Any graduate in English Medium
Office:- 10am to 2.00 pm
9845924194 / 9535587045

ಡ್ರೈವರ್ ಬೇಕಾಗಿದ್ದಾರೆ
ಅನುಭವವುಳ್ಳ ಸ್ವಂತ ದ್ವಿಚಕ್ರವಾಹನವಿರುವ ಕಾರ್ ಡ್ರೈವರ್ ಬೇಕಾಗಿದ್ದಾರೆ. ಸ್ವಂತ ಕಾರಿಗೆ ಸಂಬಳ. ರೂ.10,000/– ಊಟ+ತಿಂಡಿ+ವಸತಿ ಸೌಲಭ್ಯವಿರುತ್ತದೆ. ಅಗ್ರಹಾರ, ಜೆ.ಪಿನಗರ ಸುತ್ತಮುತ್ತಲಿನವರಿಗೆ ಆದ್ಯತೆ.
9448293548

WANTED
Experienced or Fresher Sales Boys & Girls required for HBR Silks
Salary 8000 to 15,000
Accountant Requred (Female) for Details Contact:
9845112221

ವಧು ಬೇಕಾಗಿದೆ
ಮೈಸೂರು ಮೂಲದ ಬೆಂಗಳೂರಿನಲ್ಲಿ ವಾಸವಿರುವ ಸಿರಿವಂತ, ಗೌರವಸ್ಥ ಕುಟುಂಬಕ್ಕೆ ಸೇರಿರುವ 40 ವರ್ಷ ವಯಸ್ಸಿನ ವರನಿಗೆ ಸುಂದರ ತೆಳ್ಳಗಿನ 28 ರಿಂದ 34 ವರ್ಷ ವಯಸ್ಸಿನ SC ಬಲಗೈ ಸೇರಿರುವ SSLC ಇಂದ ಡಿಗ್ರಿ ವರೆಗೂ ವಿದ್ಯಾಭ್ಯಾಸ ಮಾಡಿರುವ ವಧು ಬೇಕಾಗಿದೆ. ಬಡ ಅಥವಾ ಹಳ್ಳಿಯ ವಧುವಾದರು ಸರಿ
9060377177

ಬಾಡಿಗೆಗೆ ಇದೆ
ನೆಲ ಮಹಡಿಯಲ್ಲಿರುವ (Ground Floor) ಒಂದು ರೂಮಿನ ಮನೆ ಬಾಡಿಗೆಗೆ ಇದೆ. One Single bed Room with attached bathroom is for rent ವಿದ್ಯಾರಣ್ಯಪುರಂ, ಮೈಸೂರು (ಸಸ್ಯಹಾರಿಗಳಿಗೆ ಮಾತ್ರ)
9844059138 / 9880961150

LINGAYAT MATRIMONY
First Marriage, Second Marriage, Divorce, Widow, Vidhura
9972526183

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಸಂಬಳ 14,000 ದಿಂದ 16,000 (ESI, PF ಸೌಲಭ್ಯ ಇರುತ್ತದೆ)
8050699742

WORK FROM HOME
ಮನೆಯಲ್ಲಿ ಕುಳಿತು ಕೆಲಸ, ನೋ ಟಾರ್ಗೆಟ್, ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು ತುಂಬುವ ಕೆಲಸ. ವಾರಕ್ಕೆ ಗಳಿಸಿ 3,000 ರಿಂದ 5,000 (ಕೊರಿಯರ್ ಸೌಲಭ್ಯವಿದೆ)
9535248054
7353369458

SITE FOR SALE
30x40 East Facing MUDA Khata, Price: 20 Lacs
9342123373

WANTED
1) Site Supervisor (BE in Electrical)
2) Account Assistant
3) Welder
4) Sheet Metal Work
7259016509
7259016512

ತಕ್ಷಣ ಬೇಕಾಗಿದ್ದಾರೆ
ಫೀಲ್ಡ್ ಆಫೀಸರ್, ಸೆಕ್ಯೂರಿಟಿ ಗಾರ್ಡ್, ಸೆಕ್ಯೂರಿಟಿ ಸೂಪರ್‌ವೈಸರ್, ಹೌಸ್ ಕೀಪಿಂಗ್, ಗನ್‌ಮ್ಯಾನ್, ಹೆಬ್ಬಾಳು ಸುತ್ತಮುತ್ತ, ಮದ್ದೂರು, ಕುವೆಂಪುನಗರ, ಸರಸ್ವತಿಪುರಂ, ಬೋಗಾದಿ. 8 hours, 12 hours, ESI, PF, ಆಕರ್ಷಕ ಸಂಬಳ
9945291877
7899836033

ವಧು ಬೇಕಾಗಿದೆ
ನನ್ನ ವಯಸ್ಸು 32 MBA ಪದವಿಧರ ಕೆಲಸ: ನ್ಯೂಟ್ರಿಷಿಯನ್ ಕೋಚ್ ಮತ್ತು ಸಮಾಜ ಸೇವಕರು ಬೆಂಗಳೂರು ಸಂಬಳ: 77000, ನಿಮ್ಮ ಜಾತಿ ಯಾವುದೇ ಇರಲಿ ಸುಂದರವಾದ ಹುಡುಗಿ ಬೇಕು. ವಯಸ್ಸು: 22 ರಿಂದ 29 ಒಳಗಿನವರು ಮಾತ್ರ ಸಂಪರ್ಕಿಸಿ.
8618961679

WANTED
Drivers & Care Takers for Manasadhama, Chikkalli
Male Candidates - Any Qualifications.
Dr. Kantharaju C.K
9845058023

ಕೆಲಸಕ್ಕೆ ಬೇಕಾಗಿದ್ದಾರೆ
ITI / Dip in Electrical ಅಥವಾ Electronic ಮಾಡಿರುವ ಪುರುಷ ಹಾಗೂ ಮಹಿಳೆಯರು ಬೇಕಾಗಿದ್ದಾರೆ.
Pragathi Tech (Hebbal)
9986241412

FOR RENT
1,200 Sq. ft Space (Home) For Commercial Purpose only Nirmithi Kendra, Bus Stand Opposite Road, Bogadi 2nd Stage, Mysuru
9448167494

ಮನೆ ಭೋಗ್ಯಕ್ಕೆ ಇದೆ
ಮನೆ ನಂ.4392 2BHK 4ನೇ ಕ್ರಾಸ್, 2ನೇ ಹಂತ, ಹಾಸನ ಬೇಕರಿ ಹತ್ತಿರ, ಕೆ.ಡಿ.ಸರ್ಕಲ್, ವಿಜಯನಗರ, ಮೈಸೂರು. ಸಂಪರ್ಕಿಸಿ.
8123941037

FOR SALE
2BHK NEW FLAT Near Kuvempunagar Complex, 1100 Sq.ft
9448324232
9480606154

ಉದ್ಯೋಗವಕಾಶ
ಮೈಸೂರು, ನಂಜನಗೂಡು ಮತ್ತು ಮಂಡ್ಯ ಜಿಲ್ಲಾದ್ಯಂತ ಸರ್ಕಾರದಿಂದ ನಿವೃತ್ತಿ ಹೊಂದಿರುವ ಹಾಗೂ ಸ್ವಯಂ ನಿವೃತ್ತಿ ಪಡೆದುಕೊಂಡಿರುವ ಸರ್ಕಾರಿ ಅಧಿಕಾರಿಗಳಿಗೆ ಮತ್ತು ಗೃಹಿಣಿಯರಿಗೆ ಹಾಗೂ ಆಸಕ್ತಿ ಇರುವ ಅಭ್ಯರ್ಥಿಗಳಿಗೆ ಅರ್ಜಿಗಳನ್ನು ಆಫೀಸರ್ ಹುದ್ದೆಗೆ ಆಹ್ವಾನಿಸಲಾಗಿದೆ. 27 ವರ್ಷ ಮೇಲ್ಪಟ್ಟಿರಬೇಕು. ಫಿಕ್ಸಡ್ ತಿಂಗಳ ಸಂಬಳ, ESI /PF
9110676257
8073300749

ಬೇಕಾಗಿದ್ದಾರೆ
ಬಟ್ಟೆ ಬ್ಯಾಗ್ ಹೊಲೆಯಲು ಟೈಲರ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
ಎಸ್.ಎಲ್.ವಿ ಇಂಡಸ್ಟ್ರೀಸ್
384/4ಬಿ, ಸಿ.ವಿ.ರಸ್ತೆ, 2ನೇ ಕ್ರಾಸ್, ಬನ್ನಿಮಂಟಪ, ಮೈಸೂರು
9886412655 / 8050102655

SITE / HOUSE FOR RENT / LEASE / SALE
20x40 N/F House in N R Mohalla
20x30 Site Rajiv Nagar
New MIG Welding Machine 180 AMPS, (Brokers Excuse)
7204857700

SITE FOR SALE
Kashi pathi Agrahar 20x30 S/F Behind 100 ft Road, Rate- 55 Lakhs
20x30 E/F Devanur 3rd Stage No.1109, Rate: 25.50 Lakhs (Broker Excuse)
9845244738

ನೋವು ನಿವಾರಣೆ
ಮಂಡಿನೋವು, ಸೊಂಟನೋವು, ಬೆನ್ನು ನೋವು, ಕೈಕಾಲು ನೋವು ಇವುಗಳಿಗೆಲ್ಲಾ ನಾವು ನಿಮ್ಮ ಮನೆಗೆ ಬಂದು ಆಯುರ್ವೇದಿಕ್ ಎಣ್ಣೆ ಹಚ್ಚಿ ಮಸಾಜ್ ಮಾಡುತ್ತೇವೆ. ಸಂಪರ್ಕಿಸಿ:
9448434190

HOUSE FOR LEASE
3BHK, 2nd Floor, J.P.Nagar, Mysore, Contact:
9902235465 / 9380367231
Brokers Excuse

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಛೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೊಳ್ಳೇಗಾಲದ ಜ್ಯೋತಿಷ್ಯರು ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಭಾದೆ, ಶತ್ರುಭಾದೇ, ದುಷ್ಟಶಕ್ತಿ, ಇಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ. ನಂಬಿ ಬನ್ನಿ. ಖಾಯಂ ವಿಳಾಸ: (Reliance Smart) ಹತ್ತಿರ, ATM ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 9 ರಲ್ಲಿ

ಒಂದನೇ ಪುಟದಿಂದ

ಆರೋಪಿ ದಿವ್ಯಾ ಹಾಗರಗಿ ಬಂಧನ

ಸಿಐಡಿ ತಂಡ ಉತ್ತಮವಾಗಿದ್ದು ಈ ಪ್ರಕರಣದಲ್ಲಿ ನಿಷ್ಪಕ್ಷಪಾತವಾಗಿ ತನಿಖೆ ನಡೆಸಲಿದೆ, ಎಷ್ಟೇ ಪ್ರಭಾವಿಗಳಿದ್ದರೂ ಸರ್ಕಾರ ಯಾವುದೇ ಕಾರಣಕ್ಕೂ ಮಧ್ಯೆ ಪ್ರವೇಶಿಸುವುದಿಲ್ಲ ಎಂದರು. ತನಿಖೆಯಿಂದ ಎಲ್ಲಾ ಮಾಹಿತಿಗಳು ಹೊರ ಬರುತ್ತದೆ. ಈ ಪ್ರಕರಣದ ಹಿಂದೆ ಪ್ರಭಾವಿ ನಾಯಕರ ಕೈವಾಡ ವಿದೆ ಎಂದು ಸಂದೇಹ ಕೂಡ ಇದೆ, ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಖಾತ್ರಿ ಮಾಡಿಕೊಂಡು ಹೋಗಿ ಬಂಧಿಸಿರುವುದರಿಂದ ಆರೋಪಿಗಳನ್ನು ಬಂಧಿಸು ವಲ್ಲಿ ತಡವಾಯಿತು ಎಂದರು.



ಪ್ರಕರಣಕ್ಕೆ ಸಂಬಂಧಪಟ್ಟಂತೆ ಸರ್ಕಾರ ಖಂಡಿತವಾಗಿಯೂ ತಾತ್ವಿಕ ನಿರ್ಣಯ ತೆಗೆದುಕೊಳ್ಳಲಿದೆ. ಕಾಯ್ದೆಗಳಡಿಯಲ್ಲಿ ಪ್ರಕರಣ ದಾಖಲಿಸಿ ಅಪರಾಧಿಗಳಿಗೆ ಶಿಕ್ಷೆಯಾಗು ವಂತೆ ನೋಡಿಕೊಳ್ಳಲಾಗುವುದು. ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆಸುವವರಿಗೆ ಇದೊಂದು ತಕ್ಕ ಪಾಠವಾಗಬೇಕು. ಪರೀಕ್ಷೆ ಬರೆದ ಅಭ್ಯರ್ಥಿಗಳಿಗೆ ನ್ಯಾಯ ದೊರಕಿಸಿಕೊಡಲಾಗುವುದು ಎಂದರು. ಹುಬ್ಬಳ್ಳಿಯಲ್ಲಿ ಪೊಲೀಸ್ ಠಾಣೆ ಮೇಲೆ ನಡೆದ ಕಲ್ಲು ತೂರಾಟ ಪ್ರಕರಣದಲ್ಲಿ ಬಂಧಿತಕ್ಕೊಳಗಾದವರಿಗೆ ಶಾಸಕ ಜಮೀರ್ ಅಹ್ಮದ್ ಕಡೆಯವರು ಆರ್ಥಿಕ ಸಹಾಯ ಮಾಡುತ್ತಿರುವ ಬಗ್ಗೆ ಕೇಳಿದಾಗ, ಇಂತಹವ ರಿಂದಲೇ ಸಮಾಜ ಕಂಟಕರು ಬೆಳೆಯುತ್ತಾರೆ. ಇದು ಸಮಾಜಕ್ಕೆ ಮಾರಕ, ಅವರು ಡಿಜೆ ಹಳ್ಳಿ, ಕೆಜಿ ಹಳ್ಳಿ ಗಲಭೆಯಲ್ಲಿಯೂ ಹೀಗೆ ಮಾಡಿದರು ಎಂದು ಟೀಕಿಸಿದರು. ಶಾಸಕ ಪ್ರಿಯಾಂಕ್ ಖರ್ಗೆಯವರು ಪಿಎಸ್ಐ ನೇಮಕಾತಿ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಿಯಾದ ಸಾಕ್ಷಿಗಳನ್ನು ನೀಡಿ ತನಿಖೆಗೆ ಶಕ್ತಿ ತುಂಬಿಸುವ ಕೆಲಸ ಮಾಡಲಿ ಎಂದರು.

ಪುಣೆ ಉದ್ಯಮಿ ಆಶ್ರಯ

ಮುಖ್ಯಸ್ಥೆ, ಅಕ್ರಮಕ್ಕೆ ಸಂಬಂಧಿಸಿದಂತೆ ಸಿಐಡಿ ಪೊಲೀಸರು ಶಹಾಬಾದ್ ನಗರಸಭೆಯ ದ್ವಿತೀಯ ದರ್ಜೆ ಸಹಾಯಕಿ ಜ್ಯೋತಿ ಪಾಟೀಲ್ ಎಂಬುವವರನ್ನು ವಶಕ್ಕೆ ಪಡೆದಿದ್ದರು. ಪಿಎಸ್ಐ ಪರೀಕ್ಷೆ ಬರೆದಿದ್ದ ಸೇಡಂನ ಶಾತಿಬಾಯಿ ಬಸ್ಯನಾಯ್ಕ ಎಂಬುವವರಿಗೆ ಬ್ಲೂಟೂತ್ ಮೂಲಕ ಉತ್ತರ ಹೇಳುವಲ್ಲಿ ಸಹಕರಿಸಿದ ಆರೋಪವಿದೆ. ಜ್ಯೋತಿ ಪಾಟೀಲ್ ಅವರ ಮೊಬೈಲ್‌ಗೆ ಬಂದ ಹಾಗೂ ಅವರ ಮೊಬೈಲ್‌ನಿಂದ ಹೊರಹೋದ ಕರೆಗಳನ್ನು ಸಿಐಡಿ ತಂಡ ಜಾಲಾಡಿದಾಗ ಆರೋಪಿಗಳಲ್ಲಿ ಒಬ್ಬರು ಜ್ಯೋತಿ ಪಾಟೀಲ್ ಅವರ ಜೊತೆ ಸಂಪರ್ಕದಲ್ಲಿ ಇರುವುದು ಗೊತ್ತಾಯಿತು. ಆ ಮೊಬೈಲ್ ಲೊಕೇಷನ್ ಪತ್ತೆ ಹಚ್ಚಿದ ತನಿಖಾಧಿಕಾರಿಗಳು ಮಹಾರಾಷ್ಟ್ರದ ಪೊಲೀಸರ ನೆರವಿನೊಂದಿಗೆ ಆರೋಪಿಗಳನ್ನು ಕಳೆದ ಮಧ್ಯರಾತ್ರಿ ಪುಣೆಯಲ್ಲಿ ದಿವ್ಯಾ ಹಾಗರಗಿ ಹಾಗೂ ಇತರರನ್ನು ಬಂಧಿಸಿದ್ದಾರೆ.

ಸಚಿವಾಕಾಂಕ್ಷಿಗಳಲ್ಲಿ ಕುರ್ಚಿ ಕನಸು

ಪುನಾರಚನೆ ಆಗುತ್ತದೆಯೇ ಅಥವಾ ಇಲ್ಲವೋ ಎನ್ನುವ ಆತಂಕವೂ ಸಚಿವಾಕಾಂಕ್ಷಿಗಳಲ್ಲಿ ಇದೆ. ಬಿಜೆಪಿ ಮೂಲಗಳ ಪ್ರಕಾರ, ಮೇ ಮೊದಲ ವಾರದಲ್ಲಿ ಸಚಿವ ಸಂಪುಟ ಪುನಾರಚನೆ ಯಾಗುವ ಸಾಧ್ಯತೆ ಇದ್ದು, ಖಾಲಿ ಇರುವ ಐದು ಸ್ಥಾನಗಳ ಜೊತೆಗೆ ನಾಲ್ಕರಿಂದ ಐದು ಹಿರಿಯ ಸಚಿವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ಕಲ್ಪಿಸುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ. ಕೆಲವು ಸಚಿವರನ್ನು ಸಂಪುಟದಿಂದ ಕೈಬಿಟ್ಟು ಇತರರಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲೂ ಚರ್ಚೆ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ಅವರ ದೆಹಲಿ ಪ್ರವಾಸವೂ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

ಮನನೊಂದು ಪತಿ ಆತ್ಮಹತ್ಯೆ

ಮೈಸೂರಿನಲ್ಲಿರುವ ಈತನ ಮಾವನ ಮನೆಯಲ್ಲಿ ಬಾಡಿಗೆಗಿದ್ದ ಡೋಂಗಿ ಬಾಬಾ ಖುರ್‍ರಂ ಪಾಷಾ ಎಂಬಾತನ ಬಳಿ ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಪಡೆಯಲು ಈ ದಂಪತಿ ಆಗಿಂದಾಗ್ಗೆ ಹೋಗುತ್ತಿದ್ದರು ಎಂದು ಹೇಳಲಾಗಿದೆ. ಕಳೆದ ಒಂದು ತಿಂಗಳಿಂದ ತವರು ಮನೆಯಲ್ಲೇ ಇರುವ ಈತನ ಪತ್ನಿ, ಎಷ್ಟೇ ಕರೆದರೂ ಗಂಡನ ಮನೆಗೆ ಬಂದಿಲ್ಲ ಎಂದು ಹೇಳಲಾಗಿದೆ. ಡೋಂಗಿ ಬಾಬಾ ಖುರ್‍ರಂ ಪಾಷಾ ತನ್ನ ಪತ್ನಿಯ ತಲೆ ಕೆಡಿಸಿ ತನ್ನಿಂದ ದೂರ ಮಾಡಿದ್ದಾನೆ. ಅದಕ್ಕೆ ಆತನ ಸಹಚರರಾದ ಮಹಮ್ಮದ್ ಹಕೀಂ ಮತ್ತು ಅಯೂಬ್ ಷರೀಫ್ ಸಹಕರಿಸಿದ್ದಾರೆ ಎಂದು ಡೆತ್‌ನೋಟ್‌ನಲ್ಲಿ ಅಫ್ಘಾನ್ ಬರೆದಿದ್ದು, ತನ್ನ ಸಮಾಜದ ಮುಖಂಡರು ತನ್ನ ಸಾವಿಗೆ ನ್ಯಾಯ ಒದಗಿಸಬೇಕೆಂದು ಮನವಿ ಮಾಡಿದ್ದಾನೆ. ಆತ್ಮಹತ್ಯೆಗೆ ಶರಣಾದ ಅಫ್ಘಾನ್‌ನ ತಂದೆ ನೀಡಿದ ದೂರಿನ ಮೇರೆಗೆ ಡೊಂಗಿಬಾಬಾ ಖುರ್‍ರಂ ಪಾಷಾ ಅಲಿಯಾಸ್ ಅಬ್ದುಲ್ ರೆಹಮಾನ್, ಆತನ ಸಹಚರರಾದ ಮಹಮ್ಮದ್ ಹಕೀಂ ಮತ್ತು ಅಯೂಬ್ ಷರೀಫ್ ವಿರುದ್ಧ ಗುಂಡ್ಲುಪೇಟೆ ಪಟ್ಟಣ ಠಾಣೆ ಪೊಲೀಸರು ಆತ್ಮಹತ್ಯೆಗೆ ಪ್ರಚೋದನೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಅನುಮತಿ ನೀಡಲು ಹೈಕೋರ್ಟ್ ನಕಾರ

ಸ್ವಾತಂತ್ರ್ಯ ಉದ್ಯಾನದವರೆಗೂ ಟ್ರೇಡ್ ಯೂನಿಯನ್‌ಗಳು ನಡೆಸಲು ಉದ್ದೇಶಿಸಿದ್ದ ಮೆರವಣಿಗೆಗೆ ಅನುಮತಿಯನ್ನು ನಿರಾಕರಿಸಿದೆ. ಮೇ 1 ರಂದು ರ್‍ಯಾಲಿ ನಡೆಸಲು ಅನುಮತಿ ನೀಡಬೇಕೆಂದು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮತ್ತಿತರ ಸಂಘಟನೆಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆಯಲ್ಲಿ ನ್ಯಾಯಮೂರ್ತಿಗಳಾದ ಆರ್ ದೇವದಾಸ್ ಮತ್ತು ಕೆಎಸ್ ಹೇಮಲೇಖಾ ಅವರಿದ್ದ ವಿಭಾಗೀಯ ಪೀಠ ಈ ಆದೇಶವನ್ನು ನೀಡಿತು.

ಸಂಚಾರ ದಟ್ಟಣೆ ಹಿನ್ನೆಲೆಯಲ್ಲಿ ಸ್ವಾತಂತ್ರ ಉದ್ಯಾನವನ ಹೊರತುಪಡಿಸಿ ನಗರದ ಉಳಿದೆಡೆ ಮೆರವಣಿಗೆ, ಪ್ರತಿಭಟನೆಗೆ ಅವಕಾಶ ನೀಡದಂತೆ ಮಾರ್ಚ್ 3, 2022 ರಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತ್ತು. ಆದಾಗ್ಯೂ, ಸಂಚಾರ ದಟ್ಟಣೆಗೆ ಕಾರಣವಾಗದಂತೆ ಕರಗ ಮಹೋತ್ಸವ ಆಚರಿಸುವಂತೆ ಹಿಂದಿನ ಆದೇಶವನ್ನು ಹೈಕೋರ್ಟ್ ಮಾರ್ಪಡಿಸಿತ್ತು. ಮಾರ್ಪಡಿಸಿದ ಆದೇಶ ಉಲ್ಲೇಖಿಸಿದ ಅರ್ಜಿದಾರರ ಪರ ವಕೀಲರು, ಯೂನಿಯನ್ ಪರ ಸದಸ್ಯರು ಫ್ರೀಡಂ ಪಾರ್ಕ್‌ನಲ್ಲಿ ಶಾಂತಿಯುತ ಮೆರಣಿಗೆ ನಡೆಸಲು ಅವಕಾಶ ನೀಡುವಂತೆ ಮನವಿ ಮಾಡಿದರು. ಆದರೆ, ಈ ಮೆರವಣಿಗೆಯನ್ನು ಕರಗದೊಂದಿಗೆ ಹೋಲಿಕೆ ಮಾಡಲು ಸಾಧ್ಯವಿಲ್ಲ. ಒಂದು ವೇಳೆ ಅರ್ಜಿದಾರರ ಪರ ಸದಸ್ಯರು ಫುಟ್‌ಪಾತ್‌ನಲ್ಲಿ ನಡೆದು ಹೋದರೆ ಅನುಮತಿಯ ಅಗತ್ಯವೇ ಇಲ್ಲ ಆದರೆ, ಮೆರವಣಿಗೆ ನಡೆಸಬಾರದು ಎಂದು ಹೈಕೋರ್ಟ್ ಹೇಳಿತು.

ಪಟ್ಟಿ ರದ್ದು ಬೇಡ

ಹೆಚ್.ಡಿ.ಕುಮಾರಸ್ವಾಮಿ ಪಿಎಸ್ಐ ಪಟ್ಟಿ ರದ್ದು ಬೇಡ ಎಂದು ಆಗ್ರಹ ಮಾಡಿದ್ದಾರೆ.

"ಹಣದ ದುರಾಸೆಗೆ ಬಿದ್ದು ಕೆಲ ಧನ ಪಿಶಾಚಿಗಳು ತಪ್ಪು ಮಾಡಿದ್ದಾರೆ. ಸುಲಭವಾಗಿ ದುಡ್ಡು ಮಾಡುವ ದುರುದ್ದೇಶದಿಂದ ಇಡೀ ವ್ಯವಸ್ಥೆಯನ್ನು ಹಾಳು ಮಾಡಲು ಹೊರಟಿರುವ ಅಂಥವರನ್ನು ಮೊದಲು ಹಿಡಿದು ಶಿಕ್ಷಿಸಿ. ಯಾವ ಅಭ್ಯರ್ಥಿಗಳು ಅಡ್ಡದಾರಿಯಲ್ಲಿ ಪಾಸಾಗಿದ್ದಾರೋ ಅಂಥವರನ್ನು ಪತ್ತೆ ಹಚ್ಚಿ. ಅದರ ಹೊರತಾಗಿ ಈಗಾಗಲೇ ಪ್ರಾಮಾಣಿಕತೆಯಿಂದ ಪರೀಕ್ಷೆ ಬರೆದು ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಅನ್ಯಾಯ ಆಗಲು ಬಿಡಬಾರದು. ಅನೇಕ ಬಡ ಅಭ್ಯರ್ಥಿಗಳು ಪಾಸಾಗಿದ್ದು, ಅವರಿಗೆ ತೊಂದರೆ ಆಗಬಾರದು," ಎಂದು ಹೇಳಿದರು.

"ಪರೀಕ್ಷೆಯ ಅಕ್ರಮ ಈಗ ತನಿಖೆಯ ಹಂತದಲ್ಲಿದ್ದು, ಈಗಲೇ ಮರು ಪರೀಕ್ಷೆ ನಡೆಸುತ್ತೇವೆ ಎಂದರೆ ಏನರ್ಥ, ಇಲ್ಲಿ ಸರಕಾರದ ತಪ್ಪಿದೆ ಎಂದು ಮಾಜಿ ಮುಖ್ಯಮಂತ್ರಿಗಳು ಪ್ರಶ್ನಿಸಿದರು. ಈಗೇನೋ ಪರೀಕ್ಷೆಯನ್ನು ರದ್ದು ಮಾಡುತ್ತಾರೆ, ಮುಂದಿನ ಪರೀಕ್ಷೆಯನ್ನು ಸರಿಯಾಗಿ, ಪಾರದರ್ಶಕವಾಗಿ ನಡೆಸುತ್ತಾರೆ ಎನ್ನುವುದಕ್ಕೆ ಏನು ಗ್ಯಾರಂಟಿ. ತನಿಖೆ ಸರಿಯಾದ ದಿಕ್ಕಿನಲ್ಲಿ ನಡೆಸಿ ಅಪರಾಧಿಗಳನ್ನು ಕಠಿಣವಾಗಿ ಶಿಕ್ಷಿಸಬೇಕು. ಆಗ ಮಾತ್ರ ಇಂಥ ಪರೀಕ್ಷೆಗಳ ಬಗ್ಗೆ ನಂಬಿಕೆ ಬರುತ್ತದೆ ಎಂದು ತಿಳಿಸಿದರು. ತಪ್ಪು ಆಗಿರುವುದು ಸರಕಾರದಿಂದ. ಪರೀಕ್ಷೆ ನಡೆಸುವ ವಿಚಾರದಲ್ಲಿ ಸರಕಾರ ಮತ್ತು ಅಧಿಕಾರಿಗಳಿಂದ ಗುರುತರ ಲೋಪ ಆಗಿದೆ. ಹಾಗಂತ, ಇಡೀ ಪಟ್ಟಿಯನ್ನೇ ರದ್ದು ಮಾಡಿ, ಪ್ರಾಮಾಣಿಕ ಅಭ್ಯರ್ಥಿಗಳಿಗೆ ಅನ್ಯಾಯ ಮಾಡುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೆಪಿಎಸ್ಸಿ ಉದಾಹರಣೆ ಕೊಟ್ಟ ಮಾಜಿ ಸಿಎಂ: 2011ರಲ್ಲಿ ಕೆಪಿಎಸ್ಸಿ ಪರೀಕ್ಷೆ ಬರೆದು ಸಂದರ್ಶನದಲ್ಲಿ ಪಾಸಾಗಿದ್ದ 300ಕ್ಕೂ ಹೆಚ್ಚು ಅಭ್ಯರ್ಥಿಗಳ ಭವಿಷ್ಯವನ್ನು ಹೇಗೆ ಹಾಳು ಮಾಡಿದರು ಎನ್ನುವುದು ನಮ್ಮ ಮುಂದೆಯೇ ಇದೆ. ಇಷ್ಟು ವರ್ಷಗಳಾದರೂ ಅವರಿಗೆ ನ್ಯಾಯ ಸಿಕ್ಕಿಲ್ಲ. ಯಾರೋ ಒಬ್ಬರು ಕೊಟ್ಟ ದೂರಿನ ಕಾರಣಕ್ಕೆ ನ್ಯಾಯಯುತವಾಗಿ ಪರೀಕ್ಷೆ ಬರೆದು ಪಾಸಾದವರೆಲ್ಲ ಸಂಕಷ್ಟಕ್ಕೆ ಸಿಲುಕಬೇಕಾಯಿತು. ಅವರಲ್ಲಿ ಒಬ್ಬೊಬ್ಬರದ್ದೂ ನೋವಿನ ಕಥೆ ಇದೆ. ಆಗಲೂ ಆ ನೇಮಕಾತಿಯನ್ನು ಅಂದಿನ ಸರ್ಕಾರ ರದ್ದು ಮಾಡಿತ್ತು. ರದ್ದು ಮಾಡಬೇಡಿ ಎಂದು ನಾವು ಕೇಳಿದರೂ ಆ ಸರಕಾರ ಕೇಳಲಿಲ್ಲ. ಪಿಎಸ್ಐ ನೇಮಕಾತಿಯೂ ಅದೇ ರೀತಿ ಆಗುತ್ತದೆ ಎಂದು ಕುಮಾರಸ್ವಾಮಿ ಎಚ್ಚರಿಸಿದರು. 'ಸಹಕಾರಿ ಬ್ಯಾಂಕುಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಭಾರೀ ಅಕ್ರಮ ನಡೆದಿದೆ. ಡೈರಿ, ಭೂ ಅಭಿವೃದ್ಧಿ ಬ್ಯಾಂಕ್ ಸೇರಿದಂತೆ ಸಹಕಾರ ಇಲಾಖೆಯಲ್ಲಿ ಹೇಗೆಲ್ಲ ನೇಮಕಾತಿಗಳು ನಡೆಯುತ್ತವೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಅಲ್ಲೂ ಲಕ್ಷಾಂತರ ರೂಪಾಯಿ ಕೊಟ್ಟು ಕೆಲಸಕ್ಕೆ ಸೇರಬೇಕಾದ ಪರಿಸ್ಥಿತಿ ಇದೆ ಎಂದು ತಿಳಿಸಿದರು.

ಕೆಪಿಎಸ್ಸಿ ಶುದ್ಧ ಆಯಿತಾ: ಸಿದ್ದರಾಮಯ್ಯ ಅವರು ಕೆಪಿಎಸ್‌ಸಿಯನ್ನು ಶುದ್ಧ ಮಾಡುವೆ ಎಂದು ಶ್ಯಾಮಭಟ್ಟರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿದರು. ಅವರು ಅಧ್ಯಕ್ಷರಾಗಿದ್ದೇ ತಡ ಮುಕ್ತ ಮಾರುಕಟ್ಟೆಯಲ್ಲಿ ರೇಟು ಫಿಕ್ಸ್ ಆಗುವಂತೆ ಪ್ರತಿ ಉದ್ಯೋಗಕ್ಕೆ ಕೋಟಿ ಲೆಕ್ಕದಲ್ಲಿ ರೇಟು ನಿಗದಿ ಆಯಿತು. ಬಿಡಿಎಯಲ್ಲಿ ಕೂತು ಅರ್ಕಾವತಿ ಬಡಾವಣೆ ರೀಡೂ ವ್ಯವಹಾರದಲ್ಲಿ ಕೋಟ್ಯಂತರ ರೂಪಾಯಿ ಕೊಳ್ಳೆ ಹೊಡೆದು ಕೊಟ್ಟಿದ್ದರಲ್ಲ, ಅದಕ್ಕೆ ಕೆಪಿಎಸ್ಸಿಯನ್ನು ಶ್ಯಾಂಭಟ್ಟರಿಗೆ ಸಿದ್ದರಾಮಯ್ಯ ಉಡುಗೊರೆಯಾಗಿ ನೀಡಿದರು. ಇದು ಬಹಿರಂಗ ಸತ್ಯ. ಯಾರು ಏನೂ ಮಾಡಲಾಗಲಿಲ್ಲ. ನೀವು ಹೇಳಿದಂತೆ ಕೆಪಿಎಸ್ಸಿ ಶುದ್ಧ ಆಯಿತಾ ಸಿದ್ದರಾಮಯ್ಯ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ಈ ಸಿದ್ದರಾಮಯ್ಯ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾರೆ. ಶ್ಯಾಂಭಟ್ಟರನ್ನು ಕೆಪಿಎಸ್ಸಿಗೆ ತಂದು ಕೂರಿಸಿದ್ದು ನೀವೇ ಅಲ್ಲವೇ? ಅಲ್ಲಿ ಏನೆಲ್ಲಾ ಆಯಿತು ಎನ್ನುವುದು ನಿಮಗೆ ಗೊತ್ತಿಲ್ಲವೇ ಸಿದ್ದರಾಮಯ್ಯ ಎಂದು ಮಾಜಿ ಮುಖ್ಯಮಂತ್ರಿಗಳು ಕೇಳಿದರು.

ಮಾಜಿ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ

ಮೇ 4ರಂದು ಮೈಸೂರಲ್ಲಿ ಶೋಷಿತ ವರ್ಗಗಳ ಐಕ್ಯತಾ ಸಮಾವೇಶ



ಮೈಸೂರು,ಏ.29(ಎಂಟಿವೈ)– ಮೈಸೂರಿನ ಜೆ.ಕೆ.ಮೈದಾನದಲ್ಲಿ ಮೇ 4ರಂದು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಇತರೆ ಶೋಷಿತ ಸಮುದಾಯಗಳು ಏರ್ಪಡಿಸಿರುವ ಶೋಷಿತ ವರ್ಗಗಳ ಐಕ್ಯತಾ ಸಮಾವೇಶವನ್ನು ಏರ್ಪಡಿಸಲಾಗಿದ್ದು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವ ವಹಿಸಲಿದ್ದಾರೆ ಎಂದು ರಾಜ್ಯ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯಾಧ್ಯಕ್ಷ ಹಾಗೂ ಮಾಜಿ ಶಾಸಕರೂ ಆದ ಎಂ.ಡಿ.ಲಕ್ಷ್ಮೀನಾರಾಯಣ್ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸಮಾವೇಶದ ಅಂಗವಾಗಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಶೋಷಿತ ಸಮುದಾಯಗಳಿಗೆ ಈ ಹಿಂದೆ ನೀಡಲಾಗಿದ್ದ ಮೀಸಲಾತಿ ಸೌಲಭ್ಯವನ್ನು ಹಿಂಪಡೆಯಲಾಗಿದ್ದು, ಇದರಿಂದ ಈ ಸಮುದಾಯಗಳಿಗೆ ಅನ್ಯಾಯವಾಗಿದೆ. ಹಿಂದುಳಿದ ಹಾಗೂ ಶೋಷಿತ ಸಮುದಾಯ ರಾಜಕೀಯ ಕ್ಷೇತ್ರದಲ್ಲಿ ನೆಲೆ ಕಂಡುಕೊಳ್ಳುವುದನ್ನು ತಪ್ಪಿಸಲು ಹುನ್ನಾರ ನಡೆದಿದೆ ಎಂದರು.

ಮೀಸಲಾತಿಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ರಾಜ್ಯ ಸರ್ಕಾರ ಅಗತ್ಯ ದಾಖಲೆಗಳನ್ನು ಹಾಜರುಪಡಿಸಲು ಸಾಧ್ಯವಾಗಿಲ್ಲ. ಅಲ್ಲದೆ, ಶೋಷಿತ ಸಮುದಾಯಗಳಿಗೆ ಮೀಸಲಾತಿಯ ಅಗತ್ಯತೆ ಮನವರಿಕೆ ಮಾಡಿಕೊಡುವಲ್ಲಿಯೂ ಸರ್ಕಾರ ವಿಫಲವಾಗಿದೆ. ಇದರಿಂದ ಶೋಷಿತ ವರ್ಗಗಳಿಗೆ ಅನ್ಯಾಯವಾಗುತ್ತಿದೆ ಎಂದು ಅಭಿಪ್ರಾಯಪಟ್ಟ ಅವರು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು.

ಶೋಷಿತ ಸಮುದಾಯಗಳಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಮೇ 4ರಂದು ಮೈಸೂರಿನ ಜೆ.ಕೆ.ಮೈದಾನದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆಯಲಿರುವ ಶೋಷಿತ ವರ್ಗಗಳ ಐಕ್ಯತಾ ಸಮಾವೇಶ ಪಕ್ಷಾತೀತವಾಗಿ ನಡೆಯುತ್ತಿದ್ದು, ಎಲ್ಲಾ ಪಕ್ಷಗಳ ಶೋಷಿತ ಸಮುದಾಯದವರು ತಮಗೆ ಸಲ್ಲಬೇಕಾದ ರಾಜಕೀಯ ಹಕ್ಕನ್ನು ಪಡೆದುಕೊಳ್ಳುವುದಕ್ಕಾಗಿ ಒಂದಾಗಿ ಹೋರಾಡುವುದು ಅನಿವಾರ್ಯವಾಗಿದೆ ಎಂದರು.

ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾತನಾಡಿ, ಹಿಂದುಳಿದ ವರ್ಗಗಳಿಗೆ ಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ಆಯೋಜಿಸಿರುವ ಐಕ್ಯತಾ ಸಮಾವೇಶಕ್ಕೆ ಕಾಂಗ್ರೆಸ್ ಪೂರ್ಣ ಬೆಂಬಲ ನೀಡುತ್ತಿದೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಇತರೆ ಶೋಷಿತ ಸಮುದಾಯಗಳು ಏರ್ಪಡಿಸಿರುವ ಈ ಐಕ್ಯತಾ ಸಮಾವೇಶದಲ್ಲಿ ಹಿರಿಯ ರಾಜಕೀಯ ಮುತ್ಸದ್ಧಿ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಳ್ಳುತ್ತಿರುವುದರಿಂದ ಸಮಾವೇಶದಲ್ಲಿ ಕಾಂಗ್ರೆಸ್‌ನ ಎಲ್ಲಾ ವಿಭಾಗಗಳ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದರು.

ಕಾಂಗ್ರೆಸ್ಸಿಗರಿಂದಲೇ ಕಾಂಗ್ರೆಸ್‌ಗೆ ಸೋಲು!

ಪಕ್ಷದ ಮುಖಂಡರ ಗಂಭೀರ ಆರೋಪ

ಸಭೆಯಲ್ಲಿ ಹಿಂದುಳಿದ ವರ್ಗಗಳ ಮುಖಂಡರಾದ ಎಂ.ಎನ್.ಮಹದೇವು, ಕೋಟೆಹುಂಡಿ ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಗ್ರಾಮಾಂತರ ಹಿಂದುಳಿದ ವರ್ಗದ ಅಧ್ಯಕ್ಷ ಮಾರುತಿ, ನಗರ ಹಿಂದುಳಿದ ವರ್ಗದ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶಿವಮಲ್ಲು ಎಂ.ಎ.ಕಮಲಾ ಅನಂತರಾಮು ಹಾಗೂ ಇನ್ನಿತರರು ಮಾತನಾಡಿ, ಕಾಂಗ್ರೆಸ್ ಅಭ್ಯರ್ಥಿಗಳ ಸೋಲಿಗೆ ಕಾಂಗ್ರೆಸ್ಸಿಗರೇ ಕಾರಣ. ಅತ್ಯುತ್ತಮ ಆಡಳಿತ ನೀಡಿ, ಹಲವು ಜನಪರ ಯೋಜನೆಗಳನ್ನು ನೀಡಿದರೂ ಸಿದ್ದರಾಮಯ್ಯ ಅವರು ಚುನಾವಣೆಯಲ್ಲಿ ಸೋಲನನುಭವಿಸಬೇಕಾಯಿತು. ಅವರ ಸೋಲಿಗೆ ಸಿದ್ದರಾಮಯ್ಯ ಅವರ ಅಕ್ಕಪಕ್ಕ ಇದ್ದವರೇ ಕಾರಣ ಎಂದರು.

ಬೆನ್ನಿಗೆ ಚೂರಿ ಹಾಕುವ ಮನಸ್ಥಿತಿಯುಳ್ಳವರ ಬಗ್ಗೆ ಸಿದ್ದರಾಮಯ್ಯ ಅವರ ಗಮನಕ್ಕೆ ಚುನಾವಣೆಯ ವೇಳೆಯೇ ತರಲಾಗಿತ್ತು ಆದರೆ ಸಿದ್ದರಾಮಯ್ಯ ಅವರು ಜೊತೆಯಲಿರುವವರ ಮೇಲೆ ಅಪಾರವಾದ ನಂಬಿಕೆ ಇಟ್ಟಿದ್ದರಿಂದ ನಮ್ಮ ಮಾತನ್ನು ಕೇಳಲಿಲ್ಲ. ಇದರಿಂದಲೇ ಸೋಲಾಯಿತು. ಇನ್ನಾದರೂ ಬೆನ್ನಿಗೆ ಚೂರಿ ಹಾಕುವ, ನಂಬಿಕೆ ದ್ರೋಹ ಬಗೆಯುವ ಮನಸ್ಥಿತಿಯನ್ನು ಕೈ ನಾಯಕರು ಬಿಡಬೇಕು. ಒಗ್ಗಟ್ಟು ಪ್ರದರ್ಶಿಸಬೇಕು. ಕಾಂಗ್ರೆಸ್ ಪಕ್ಷದಲ್ಲಿ ಇರಲು ಇಷ್ಟವಿಲ್ಲದಿದ್ದರೆ, ತೊಲಗಬಹುದು ಎಂದು ವಾಗ್ದಾಳಿ ನಡೆಸಿದರು.

ಯಾರನ್ನೂ ಹಿಡಿದು ಕಟ್ಟಿ ಹಾಕಿಲ್ಲ. ಪಕ್ಷದ ಸಿದ್ಧಾಂತ ಗೌರವಿಸಿ, ಅಭ್ಯರ್ಥಿಗಳ ಗೆಲುವಿಗೆ ಪಣ ತೊಡಬೇಕು. ಬಿಜೆಪಿ ಸರ್ಕಾರಕ್ಕೆ ಅವಕಾಶ ನೀಡಿದ ಜನರಿಗೆ ಇದೀಗ ಭ್ರಮ ನಿರಸನವಾಗಿದೆ. ಇದರಿಂದ ಜನರು ಪಾಠ ಕಲಿತಿದ್ದಾರೆ. ಇಂಧನ, ಅಡುಗೆ ಎಣ್ಣೆ, ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿ, ಸಾಕಷ್ಟು ನೋವನ್ನು ಅನುಭವಿಸಿದ್ದಾರೆ. ಇದರಿಂದ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಪೂರಕವಾದ ವಾತವಾರಣವಿದೆ. ಅದನ್ನು ಸದುಪಯೋಗ ಮಾಡಿಕೊಂಡು ಪಕ್ಷವನ್ನು ಅಧಿಕಾರಕ್ಕೆ ತರಲು ಸಂಕಲ್ಪ ಮಾಡಬೇಕು ಎಂದು ಸಲಹೆ ನೀಡಿದರು. ಸಭೆಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಸೇರಿದಂತೆ ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗದ ನೂರಾರು ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಜೆಡಿಎಸ್‌ನಿಂದ ಸ್ಪರ್ಧಿಸಲು ಜಿ.ಟಿ.ದೇವೇಗೌಡರು, ಅವರ ಪುತ್ರನಿಗೂ ಅವಕಾಶ: ಸಾರಾ ಮಹೇಶ್

● ಚಾಮುಂಡೇಶ್ವರಿಯಲ್ಲಿ ಜಿಟಿಡಿ, ಹುಣಸೂರಲ್ಲಿ ಪುತ್ರ ಹರೀಶ್‌ಗೌಡರ ಸ್ಪರ್ಧೆಗೆ ಅನುವು ಭರವಸೆ ● ಈ ವಿಚಾರದಲ್ಲಿ ಪಕ್ಷದ ನಾಯಕರ ಮನವೊಲಿಸುವ ವಿಶ್ವಾಸ

ಮೈಸೂರು, ಏ.29(ಎಂಟಿವೈ)– ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡರು ಒಪ್ಪುವುದಾದರೆ ಮೈಸೂರಿನಲ್ಲಿ ಅಪ್ಪ, ಮಗ ಇಬ್ಬರಿಗೂ ಮುಂಬರುವ ಚುನಾವಣೆಯಲ್ಲಿ ಜೆಡಿಎಸ್‌ನಿಂದಲೇ ಟಿಕೆಟ್ ಕೊಡಿಸುತ್ತೇನೆ ಎಂದು ಶಾಸಕ ಸಾ.ರಾ.ಮಹೇಶ್ ಬಹಿರಂಗವಾಗಿಯೇ ಆಫರ್ ನೀಡಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜಿ.ಟಿ.ದೇವೇಗೌಡರು ಇನ್ನೂ ಜೆಡಿಎಸ್‌ನಲ್ಲೇ ಇದ್ದಾರೆ. ಅವರು ನಮ್ಮ ಪಕ್ಷದ ಶಾಸಕರಾಗಿದ್ದಾರೆ. ಪಕ್ಷದಲ್ಲೇ ಉಳಿಯುವುದಾದರೆ ನಾನೇ ವರಿಷ್ಠರ ಜೊತೆ ಮಾತನಾಡುತ್ತೇನೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅವರೇ ಶಾಸಕರಿದ್ದಾರೆ. ಹುಣಸೂರಿನಲ್ಲಿ ನಮ್ಮ ಪರಾಜಿತ ಅಭ್ಯರ್ಥಿ ಸೋಮಶೇಖರ್ ಸಂಘಟನೆ ಮಾಡುತ್ತಿದ್ದಾರೆ. ಜಿಟಿಡಿ ಪುತ್ರ ಸ್ಪರ್ಧಿಸುವುದಾದರೆ ಸೋಮಶೇಖರ್ ಮನವೊಲಿಸುತ್ತೇನೆ.



ಜೊತೆಗೆ ಪಕ್ಷದ ನಮ್ಮ ನಾಯಕರ ಮನವೊಲಿಸಿ ಟಿಕೆಟ್ ಕೊಡಿಸುತ್ತೇನೆ. ಅಪ್ಪ, ಮಗ ಇಬ್ಬರೂ ಜೆಡಿಎಸ್‌ನಿಂದ ಸ್ಪರ್ಧಿಸಲು ಪಕ್ಷ ಮುಕ್ತ ಅವಕಾಶ ಕಲ್ಪಿಸಲಿದೆ ಎಂದು ಹೇಳಿಕೆ ನೀಡುವ ಮೂಲಕ ಅಚ್ಚರಿ ಮೂಡಿಸಿದರು.

ಜೆಡಿಎಸ್ ಮೈಸೂರು ಭಾಗದಲ್ಲಿ ಒಂದು ಸ್ಥಾನ ಗೆಲ್ಲಲ್ಲ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಮೊದಲು ನಿಮ್ಮ ಕ್ಷೇತ್ರ ಯಾವುದು ಎಂದು ಸ್ಪಷ್ಟಪಡಿಸಿ. ಐದು ವರ್ಷ ಪೂರ್ಣ ಅವಧಿಯಲ್ಲಿ ಸಿಎಂ ಆಗಿದ್ದವರು ತವರು ಜಿಲ್ಲೆಯಲ್ಲಿ ಸೋಲು ಕಂಡರು. ಮುಂಬರುವ ಚುನಾವಣೆಗೆ ಇನ್ನು ಒಂದು ವರ್ಷ ಇದೆ. ಆದರೂ ತಾವು ಯಾವ ಕ್ಷೇತ್ರದಲ್ಲಿ ಸ್ಪರ್ಧಿಸುತ್ತೇನೆಂದು ಹೇಳಲು ಅವರ ಕೈಯ್ಯಲ್ಲಿ ಆಗಿಲ್ಲ. ಮುಂಬರುವ ಚುನಾವಣೆಯಲ್ಲಿ ನಿಮ್ಮ ವಿರುದ್ಧ ನಮ್ಮ ಪಕ್ಷದ ಸಾಮಾನ್ಯ ಕಾರ್ಯಕರ್ತರು ಸ್ಪರ್ಧಿಸಿದರೂ ಗೆಲ್ಲಲಿದ್ದಾರೆ. ನಿಮ್ಮ ಕ್ಷೇತ್ರ ಯಾವುದು ಅಂತ ಹೇಳದೆ ಏನೇನೋ ಮಾತನಾಡುವುದನ್ನು ನಿಲ್ಲಿಸಬೇಕು. ನಿಮಗೆ ಸಾಕಷ್ಟು ಅನುಭವ ಇದೆ. ಜೆಡಿಎಸ್ ಬಗ್ಗೆ ಏನು ಮಾತನಾಡಬೇಕು ಎಂದು ನಿಮಗೆ ತಿಳಿದಿಲ್ಲವೇ? ನೀವು ಈ ಮಟ್ಟಕ್ಕೆ ಬೆಳೆಯಲು ಜೆಡಿಎಸ್ ಪಕ್ಷ, ಕಾರ್ಯಕರ್ತರ ಶ್ರಮ ಇದೆ ಎಂಬುದನ್ನು ಮರೆಯಬೇಡಿ ಎಂದರು.

ಮೈಸೂರು ಜಿಲ್ಲಾ ಅಬಕಾರಿ ಉಪ ಆಯುಕ್ತರಾಗಿ ಎ.ರವಿಶಂಕರ್ ಅಧಿಕಾರ ಸ್ವೀಕಾರ



ಮೈಸೂರು, ಏ.29– ಮೈಸೂರು ಜಿಲ್ಲೆಯ ನೂತನ ಅಬಕಾರಿ ಉಪ ಆಯುಕ್ತರಾಗಿ ಎ.ರವಿಶಂಕರ್ ಶುಕ್ರವಾರ ಅಧಿಕಾರ ಸ್ವೀಕರಿಸಿದರು. ನಂಜನಗೂಡಿನ ಬಕಾರ್ಡಿ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಅಬಕಾರಿ ಉಪ ಅಧೀಕ್ಷಕರಾದ ಎಸ್.ಎಂ.ಮಹೇಶ್, ಪುಷ್ಪಗುಚ್ಛ ನೀಡಿ ಅವರನ್ನು ಸ್ವಾಗತಿಸಿದರು.

'ಹೋಮ್‌ಟೌನ್' ಮಳಿಗೆ ಉದ್ಘಾಟನೆ



ಮೈಸೂರಿನ ವಿಜಯನಗರ 1ನೇ ಹಂತದಲ್ಲಿ ನೂತನವಾಗಿ ಆರಂಭಿಸಿರುವ 'ಹೋಮ್‌ಟೌನ್' ಮಳಿಗೆಯನ್ನು ಶುಕ್ರವಾರ ಎನ್‌ಆರ್ ಗ್ರೂಪ್ (ಸೈಕಲ್ ಪ್ಯೂರ್ ಅಗರಬತ್ತಿ) ಅಧ್ಯಕ್ಷ ಆರ್.ಗುರು ಉದ್ಘಾಟಿಸಿದರು.

ಮೈಸೂರು,ಏ.29(ಪಿಎಂ)– ಮೈಸೂರಿನ ವಿಜಯನಗರ 1ನೇ ಹಂತದಲ್ಲಿ ನೂತನವಾಗಿ ಆರಂಭಿಸಿರುವ ಪ್ರಾಕ್ಸಿಸ್ ಹೋಮ್ ರಿಟೇಲ್ ಲಿಮಿಟೆಡ್‌ನ 'ಹೋಮ್‌ಟೌನ್' ಪೀಠೋಪಕರಣ ಮತ್ತು ಗೃಹೋಪಯೋಗಿ ವಸ್ತುಗಳ ಮಳಿಗೆಯನ್ನು ಎನ್‌ಆರ್ ಗ್ರೂಪ್ (ಸೈಕಲ್ ಪ್ಯೂರ್ ಅಗರಬತ್ತಿ) ಅಧ್ಯಕ್ಷ ಆರ್.ಗುರು ಉದ್ಘಾಟಿಸಿದರು.

ಶುಕ್ರವಾರ ಮಳಿಗೆಯಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಅವರು ಉದ್ಘಾಟಿಸಿದರು. ಇದೇ ವೇಳೆ ಮಾತನಾಡಿದ ಪ್ರಾಕ್ಸಿಸ್ ಹೋಮ್ ರಿಟೇಲ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಶಾ, ಕ್ಲಾಸಿಕ್‌ನಿಂದ ಸಾಂಪ್ರದಾಯಿಕ ಹಾಗೂ ಸಮಕಾಲೀನವರೆಗಿನ ವಿವಿಧ ವಿನ್ಯಾಸದ ಪೀಠೋಪಕರಣಗಳ ಸಂಗ್ರಹ ಈ ನೂತನ ಮಳಿಗೆಯಲ್ಲಿ ಲಭ್ಯವಿವೆ ಎಂದರು.

ಬಹುಮುಖವಾಗಿ ಲಿವಿಂಗ್ ರೂಮ್, ಊಟದ ಕೋಣೆ ಮತ್ತು ಮಲಗುವ ಕೋಣೆಯ ಪೀಠೋಪಕರಣಗಳು ಆಕರ್ಷಣಾ ಶೈಲಿಯಲ್ಲಿ ಲಭ್ಯವಿವೆ. ಎಲ್ಲಾ ಪೀಠೋಪಕರಣಗಳಿಗೆ 3 ವರ್ಷಗಳವರೆಗೆ ವಾರಂಟಿ ನೀಡಲಾಗುವುದು. ಖರೀದಿಸುವ ಪೀಠೋಪಕರಣಗಳನ್ನು ಗ್ರಾಹಕರ ಮನೆಗೆ ತಲುಪಿಸಿ, ಅಳವಡಿಸಿಕೊಡುವ ಸೇವೆಯನ್ನು ಉಚಿತವಾಗಿ ನೀಡಲಾಗುವುದು. ಹೋಮ್‌ಟೌನ್‌ನಲ್ಲಿರುವ ಹೋಮ್‌ವೇರ್ ಸಂಗ್ರಹವು ಅಂತಾರಾಷ್ಟ್ರೀಯ ಮಟ್ಟದ ವಿನ್ಯಾಸ ಮತ್ತು ಗುಣಮಟ್ಟ ಹೊಂದಿವೆ ಎಂದು ತಿಳಿಸಿದರು.

ಗಾಯಗೊಂಡಿದ್ದ ಬೈಕ್ ಸವಾರನಿಗೆ ನೆರವಾದ ಹೈವೇ ಪೆಟ್ರೋಲಿಂಗ್ ಸಿಬ್ಬಂದಿ

45 ನಿಮಿಷವಾದರೂ ಬಾರದ 108 ಆಂಬುಲೆನ್ಸ್

ಮೈಸೂರು, ಏ.29– ಮೈಸೂರು–ಬನ್ನೂರು ಮುಖ್ಯರಸ್ತೆಯ ಭುಗತಗಳ್ಳಿ ಬಳಿ ಸ್ಕಿಡ್ ಆಗಿ ಬಿದ್ದಿದ್ದ ಬೈಕ್ ಸವಾರನನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸುವ ಮೂಲಕ ಹೈವೇ ಪೆಟ್ರೋಲಿಂಗ್ ಸಿಬ್ಬಂದಿ ಮಾನವೀಯತೆ ಪ್ರದರ್ಶಿಸಿದ್ದಾರೆ.

ತೀವ್ರ ಮಳೆ ಹಿನ್ನೆಲೆಯಲ್ಲಿ ಇಂದು ರಾತ್ರಿ 9 ಗಂಟೆ ಸುಮಾರಿನಲ್ಲಿ ಬೈಕ್ ಸವಾರರೊಬ್ಬರು ಆಯತಪ್ಪಿ ಕೆಳಕ್ಕೆ ಬಿದ್ದಿದ್ದರು. ರಸ್ತೆ ಮಧ್ಯ ಭಾಗದಲ್ಲೇ ಬೈಕ್, ಸವಾರನ ಮೇಲೆ ಬಿದ್ದಿದ್ದ ಸ್ಥಿತಿಯಲ್ಲಿತ್ತು. ಅದೇ ಮಾರ್ಗದಲ್ಲಿ ಬಂದ ಇತರೆ ವಾಹನ ಸವಾರರು ಗಾಯಾಳು ಹಾಗೂ ಬೈಕ್ ಅನ್ನು ರಸ್ತೆ ಬದಿ ಸರಿಸಿ ಉಪಚರಿಸಿದ್ದರು. ಈ ವೇಳೆ 108 ಆಂಬುಲೆನ್ಸ್‌ಗೆ ಕರೆ ಮಾಡಿದರೂ



ಯಾವುದೇ ಪ್ರಯೋಜನವಾಗಲಿಲ್ಲ. 45 ನಿಮಿಷವಾದರೂ ಆಂಬುಲೆನ್ಸ್ ಬಾರದ ಕಾರಣ ಮತ್ತೆ 108ಗೆ ಕರೆ ಮಾಡಿದರೆ ಕರೆ ಸ್ವೀಕರಿಸಿದ ಯುವತಿಯೊಬ್ಬರು ಅಂಬುಲೆನ್ಸ್ ಕಳಿಸುವ ವ್ಯವಸ್ಥೆ ಮಾಡದೆ ವಾಗ್ವಾದಕ್ಕಿಳಿದಿದ್ದಾರೆ. ಈ ವೇಳೆ ಸ್ಥಳಕ್ಕೆ ಬಂದ ಹೈವೇ ಪೆಟ್ರೋಲಿಂಗ್ ಸಿಬ್ಬಂದಿಯೂ 108 ಗೆ ಕರೆ ಮಾಡಿದರೆ, ಆ ಯುವತಿ ಯಾರೋ ಅಂಬುಲೆನ್ಸ್ ಬೇಡ ಎಂದರಂತೆ ಎನ್ನುವ ಅಸಡ್ಡೆ ಪ್ರದರ್ಶಿಸಿದ್ದಾರೆ.

ಕೂಡಲೆ ಸ್ಥಳದಲ್ಲಿದ್ದವರ ಒತ್ತಾಯದ ಮೇರೆಗೆ ಹೈವೆ ಪೆಟ್ರೋಲಿಂಗ್ ಸಿಬ್ಬಂದಿಗಳೇ ಗಾಯಾಳುವನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ.

108 ಆಂಬುಲೆನ್ಸ್ ಸಿಬ್ಬಂದಿಯ ಉದ್ಧಟತನಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕರೆ ಸ್ವೀಕರಿಸಿ ಜಗಳಕ್ಕಿಳಿದ ಯುವತಿಯ ವಿರುದ್ಧವೂ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಪಘಾತ ಸಂಭವಿಸಿದ ಸ್ಥಳದಿಂದ 5–8 ಕಿ.ಮಿ ವ್ಯಾಪ್ತಿಯಲ್ಲಿ 3 ಆಂಬುಲೆನ್ಸ್ ಇರುತ್ತವಾದರೂ 45 ನಿಮಿಷವಾದರೂ ಆಂಬುಲೆನ್ಸ್ ಬರದೇ ಇರುವುದು ಟೀಕೆಗೆ ಗುರಿಯಾಗಿದೆ.

ಬೀದಿ ದೀಪಗಳ ನಿರ್ವಹಣೆಯ ಅವ್ಯವಸ್ಥೆ

● ವೈರುಗಳ ಮೂಲಕ ಕೆಲವೆಡೆ ಆಫ್ ಅಂಡ್ ಆನ್ ಮಾಡುವ ವ್ಯವಸ್ಥೆ ● ಅಪಾಯಕ್ಕೆ ಕಾದು ನಿಂತಿರುವ ಸ್ವಿಚ್ ಬೋರ್ಡ್‌ಗಳು ● ಗುತ್ತಿಗೆದಾರರ ನಿರ್ಲಕ್ಷ್ಯತೆಯೇ ಇದಕ್ಕೆ ಕಾರಣ

ಮೈಸೂರು, ಏ.29(ಜಿಎ)– ಮೈಸೂರನ್ನು ಬೆಳಗುತ್ತಿರುವ ಬೀದಿ ದೀಪಗಳ ನಿರ್ವಹಣೆಯ ಸ್ವಿಚ್ ಬೋರ್ಡ್‌ಗಳು ಅಪಾಯದ ಸ್ಥಿತಿಯಲ್ಲಿವೆ.

ಮೈಸೂರು ನಗರ ಅತಿ ವೇಗವಾಗಿ ಬೆಳೆಯುತ್ತಿದ್ದು, ಅದಕ್ಕೆ ತಕ್ಕಂತೆ ನಗರದಾದ್ಯಂತ ಎಲ್‌ಇಡಿ ಲೈಟ್‌ಗಳನ್ನು ಅಳವಡಿಸಿ ಹೊಸ ಮೆರುಗನ್ನು ನೀಡಲಾಗುತ್ತಿದೆ. ಆದರೆ ಅವುಗಳನ್ನು ಆಫ್ ಮತ್ತು ಆನ್ ಮಾಡುವ ಸ್ವಿಚ್ ಬೋರ್ಡ್‌ಗಳು ದುಸ್ಥಿತಿಯಲ್ಲಿದ್ದು, ಅಪಾಯಕ್ಕೆ ಕಾದು ನಿಂತಿವೆ.

ನಗರದ ಬಹುತೇಕ ಎಲ್ಲಾ ವಾರ್ಡ್‌ಗಳು, ಬಡಾವಣೆಗಳಲ್ಲಿ ಬೀದಿ ದೀಪಗಳನ್ನು ಆಫ್ ಅಂಡ್ ಆನ್ ಮಾಡಲು ಕೈಗೆಟಗುವ ಅಂತರದಲ್ಲಿ ವೈಯರ್‌ಗಳ ವ್ಯವಸ್ಥೆ ಮಾಡಲಾಗಿದೆ. ಸಂಜೆಯಾಗುತ್ತಿದ್ದಂತೆ ಈ ವೈರ್‌ಗಳನ್ನು ಅಲ್ಲಿರುವ ಫ್ಯೂಜ್‌ಗೆ ಸಿಕ್ಕಿಸಬೇಕು. ಆಗ ಲೈಟ್ ಹೊತ್ತಿಕೊಳ್ಳುತ್ತದೆ. ಒಂದು ವೇಳೆ ಸ್ವಲ್ಪ ಹೆಚ್ಚು ಕಮ್ಮಿಯಾದರೂ ಅಪಾಯ ತಪ್ಪಿದ್ದಲ್ಲ. ಇನ್ನೂ ಕೆಲವೆಡೆ ಸ್ವಿಚ್ ಬೋರ್ಡ್‌ಗಳು ನೇತಾಡುತ್ತಿರುತ್ತವೆ. ಇವುಗಳಿಗೆ ಉತ್ತಮ ವ್ಯವಸ್ಥೆ ಇಲ್ಲದೆ



ಇರುವುದೇ ಇದಕ್ಕೆ ಕಾರಣವಾಗಿದೆ.

ಮೈಸೂರು ಪಾಲಿಕೆ ವತಿಯಿಂದ ನಗರದ ಬೀದಿ ದೀಪಗಳ ನಿರ್ವಹಣೆಗಾಗಿ ವಿಶೇಷ ಟೆಂಡರ್ ನೀಡಿ ಅವರ ಮೂಲಕ ಸಂಪೂರ್ಣ ನಿರ್ವಹಣೆ ಮಾಡಲಾಗುತ್ತದೆ. ಆದರೂ ಗುತ್ತಿಗೆದಾರರು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಇದು ಗುತ್ತಿಗೆದಾರರ ನಿರ್ಲಕ್ಷ್ಯಕ್ಕೆ ಸಾಕ್ಷಿ. ಅನೇಕ ವಾರ್ಡ್‌ಗಳಲ್ಲಿ ಕತ್ತಲು ಆವರಿಸುತ್ತಿದ್ದಂತೆ ಸಾರ್ವಜನಿಕರೇ ಆ ಎರಡು ವೈಯರ್‌ಗಳನ್ನು ಹಿಡಿದು ಆನ್ ಮಾಡುವ ಸ್ಥಿತಿ ಇದೆ. ಇದರತ್ತ ಗಮನ ಹರಿಸಬೇಕಾದ ಪಾಲಿಕೆ ಅಧಿಕಾರಿಗಳು ಸಹ ದಿವ್ಯ ಮೌನ ತಾಳಿರುವುದು ಹಲವಾರು ಅನುಮಾನಗಳಿಗೆ ಕಾರಣವಾಗಿದೆ.

ಅಪಾಯಕ್ಕೆ ಅಹ್ವಾನ : ಸಂಜೆಯಾದರೂ ಕೆಲವೆಡೆ ಬೀದಿ ದೀಪಗಳು ಬೆಳಗುವುದಿಲ್ಲ. ಮತ್ತೊಂದೆಡೆ ಬೆಳಗ್ಗೆ 10 ಗಂಟೆಯಾದರೂ ಸಹ ಅನೇಕ ಕಡೆ ಬೀದಿ ದೀಪಗಳು ಬೆಳಗುತ್ತಿರುತ್ತವೆ. ಈ ಎರಡು ಸಮಸ್ಯೆಗಳಿಗೆ ಸಾರ್ವಜನಿಕರೇ ಪರಿಹಾರ ಹುಡುಕಿಕೊಂಡಿದ್ದು, ವಿಧಿ ಇಲ್ಲದೇ ಮೊಂಡು ಧೈರ್ಯ ಮಾಡಿ ಅವರೇ ಅನ್ ಮತ್ತು ಆಫ್ ಮಾಡುತ್ತಿದ್ದಾರೆ. ಆದರೆ ಇದು ಕೈಗೆಟುಕುವ ಎತ್ತರದಲ್ಲಿರುವುದರಿಂದ ಇದರ ಬಗ್ಗೆ ಅರಿವಿಲ್ಲದವರು ಅದನ್ನು ಮುಟ್ಟುವ ಸಾಧ್ಯತೆ ಹೆಚ್ಚಿದೆ. ಅದರಲ್ಲೂ ಮಕ್ಕಳ ಕೈಗೆ ಸುಲಭವಾಗಿ ಸಿಗುತ್ತವೆ ಈ ವೈರ್ ಮತ್ತು ಸ್ವಿಚ್ ಬೋರ್ಡ್‌ಗಳು. ಅದೃಷ್ಟವಶಾತ್ ಯಾವುದು ಅಪಾಯಗಳು ಈವರೆಗೂ ಸಂಭವಿಸಿಲ್ಲ.



ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಪಾಲಿಕೆ ಎಲೆಕ್ಟ್ರಿಕಲ್ ವಿಭಾಗದ ಎಕ್ಸಿಟಿವ್ ಇಂಜಿನಿಯರ್ ಕೆ.ಜೆ. ಸಿಂಧೂ ಮಾತನಾಡಿ, 65 ವಾರ್ಡ್‌ಗಳ ಬೀದಿ ದೀಪಗಳ ನಿರ್ವಹಣೆಗಾಗಿ ಟೆಂಡರ್ ನೀಡಲಾಗಿದ್ದು, ಅವರು ಎಲ್ಲ ಭಾಗದಲ್ಲಿಯೂ ನಿರ್ವಹಣೆ ಮಾಡುತ್ತಿದ್ದಾರೆ ಎಂದರು.

ಮೈಸೂರು ನಗರದಾದ್ಯಂತ 38 ಸಾವಿರ ಎಲ್‌ಇಡಿ ದೀಪಗಳನ್ನು ಅಳವಡಿಸಲಾಗಿದ್ದು, ಕೇಂದ್ರ ನಿಯಂತ್ರಣ ಮೇಲ್ವಿಚಾರಣಾ ವ್ಯವಸ್ಥೆ(central control monitoring system) ಇದರ ಸ್ವಯಂ ಚಾಲಿತ ಟೈಮರ್ ಮೂಲಕ ಸಂಜೆ 6.30ಕ್ಕೆ ಸ್ವಯಂಚಾಲಿತವಾಗಿ ಆನ್ ಆಗಿ ಬೆಳಗ್ಗೆ 6.30ಕ್ಕೆ ಆಫ್ ಆಗಲಿದೆ. 65 ವಾರ್ಡ್‌ಗಳಲ್ಲಿ ಕೆಲ ಭಾಗಗಳಲ್ಲಿ ಈ ರೀತಿ ತಂತ್ರಜ್ಞಾನವನ್ನು ಅಳವಡಿಸಿದ್ದು, ಮೈಸೂರು ನಗರದಾದ್ಯಂತ ಎಲ್‌ಇಡಿ ಅಳವಡಿಕೆ ಮುಗಿದ ನಂತರ ಎಲ್ಲಾ ಕಡೆ ಇದೇ ರೀತಿ ವ್ಯವಸ್ಥೆ ಮಾಡಲಾಗುತ್ತದೆ ಹಾಗೂ ಎಲ್‌ಇಡಿ ಅಳವಡಿಕೆ ಜೂನ್ ಅಂತ್ಯಕ್ಕೆ ಮುಗಿಯಲಿದೆ ಎಂದರು.

ಕೇಂದ್ರ ನಿಯಂತ್ರಣ ಮೇಲ್ವಿಚಾರಣಾ ವ್ಯವಸ್ಥೆ(central control monitoring system) ಅಳಡಿಸುವುದರಿಂದ ಸಾಫ್ಟ್‌ವೇರ್ ಮೂಲಕ ಬೀದಿ ದೀಪಗಳನ್ನು ನಿಯಂತ್ರಿಸಬಹುದಾಗಿದೆ.ಅದರಲ್ಲೂ ಮೊಬೈಲ್ ಮೂಲಕವು ಇದನ್ನು ನಿಯಂತ್ರಿಸಬಹುದಾಗಿದೆ ಎಂದು ತಿಳಿಸಿದರು.

ಡಾ.ಅಂಬೇಡ್ಕರ್ ಆದರ್ಶ ಪ್ರತಿಯೊಬ್ಬರಿಗೂ ದಾರಿದೀಪ

ಶಾಸಕ ಬಿ.ಹರ್ಷವರ್ಧನ್ ಅಭಿಪ್ರಾಯ



ಮಲ್ಲುಂಡಿ, ಏ.29(ಚನ್ನಪ್ಪ)– ಡಾ.ಬಿ.ಆರ್.ಅಂಬೇಡ್ಕರ್ ಅವರು ರಾಷ್ಟ್ರದ ದೊಡ್ಡ ಶಕ್ತಿ. ಎಲ್ಲರೂ ಆರಾಧಿಸುವ ಜ್ಞಾನಿ. ಡಾ.ಬಿ.ಆರ್. ಅಂಬೇಡ್ಕರ್ ಆದರ್ಶಗಳು ಪ್ರತಿಯೊಬ್ಬರ ಜೀವನಕ್ಕೆ ಮಾರ್ಗದರ್ಶಿ ಹಾಗೂ ದಾರಿದೀಪ ಎಂದು ಶಾಸಕ ಬಿ.ಹರ್ಷವರ್ಧನ್ ಅಭಿಪ್ರಾಯಪಟ್ಟರು.

ನಂಜನಗೂಡು ತಾಲೂಕಿನ ಮಲ್ಲುಂಡಿ ಗ್ರಾಮದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ ಪ್ರಯುಕ್ತ ಡಾ. ಅಂಬೇಡ್ಕರ್ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ವಿಶ್ವದಲ್ಲೇ ಮಾದರಿ ಹಾಗೂ ಅತ್ಯಂತ ಶ್ರೇಷ್ಠ ಸಂವಿಧಾನವನ್ನು ರಾಷ್ಟಕ್ಕೆ ಸಮರ್ಪಣೆ ಮಾಡಿದ್ದಾರೆ. ಆ ನಿಟ್ಟಿನಲ್ಲಿ ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅಂಬೇಡ್ಕರ್ ಬರೆದಿರುವ ಸಂವಿಧಾನ ಉಳಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಧ್ವನಿ ಇಲ್ಲದವರಿಗೆ ಧ್ವನಿಯಾಗಿ ಎಲ್ಲರಿಗೂ ಸಮಾನತೆ ಕಲ್ಪಿಸಿದ್ದಾರೆ. ವಿಶ್ವದಲ್ಲಿ 143ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಅಂಬೇಡ್ಕರ್ ಜಯಂತಿ ಆಚರಿಸಲಾಗುತ್ತದೆ ಎಂದರು.

ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ ಮಾತನಾಡಿ, ಅಂಬೇಡ್ಕರ್ ವಿಶ್ವಕ್ಕೆ ಮಾದರಿಯಾದ ಸಂವಿಧಾನ ನೀಡಿದ್ದಾರೆ. 18 ವರ್ಷ ತುಂಬಿದ ಎಲ್ಲಾ ಪ್ರಜೆಗಳಿಗೂ ಮತದಾನ ಹಕ್ಕು ನೀಡುವ ಮೂಲಕ ಸಮಾನ ಅವಕಾಶ ಕಲ್ಪಿಸಿದ್ದಾರೆ. ಆದ್ದರಿಂದ ಯುವಕರು ಅವರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಮೈಸೂರಿನ ಬುದ್ಧ ವಿಹಾರದ ಶ್ರೀಜ್ಞಾನ ಪ್ರಕಾಶ್ ಸ್ವಾಮೀಜಿ ಮಾತನಾಡಿ, ಡಾ.ಅಂಬೇಡ್ಕರ್ ಅವರ ಚಿಂತನೆ, ಬರಹಗಳನ್ನು ಪ್ರತಿಯೊಬ್ಬರೂ ಅಧ್ಯಯನ ಮಾಡಬೇಕು. ಆ ಮೂಲಕ ಸಂವಿಧಾನದ ಆಶಯವನ್ನು ತಿಳಿದುಕೊಳ್ಳಬೇಕು. ಅವರೊಬ್ಬ ಜ್ಞಾನಿ, ವಾಸ್ತವ್ಯದ ಪ್ರತಿನಿಧಿ ಹಾಗೂ ಆಧುನಿಕ ಭಾರತದ ಪಿತಾಮಹ ಎಂದರಲ್ಲದೆ ಈ ದೇಶದ ಕಾನೂನು ಸಚಿವರಾಗಿ ಸಂವಿಧಾನ ಶಿಲ್ಪಿಯಾಗಿ ಅವರು ದೇಶಕ್ಕೆ ನೀಡಿರುವ ಕೊಡುಗೆ ಅಪಾರ. ಡಾ.ಅಂಬೇಡ್ಕರ್ ಸ್ವಾತಂತ್ರ್ಯ ಪೂರ್ವದಲ್ಲಿ ಅತಿ ಹೆಚ್ಚು ಶಿಕ್ಷಣ ಪಡೆದವರಾಗಿದ್ದರು. ಅಮೆರಿಕಾದಲ್ಲಿ ಪಿಹೆಚ್‌ಡಿ ಪದವಿ ಪಡೆದ ಮೊದಲ ಭಾರತೀಯ ಕೂಡ ಅಂಬೇಡ್ಕರ್ ಎಂದರು.

ಇದೇ ವೇಳೆ ಬೆಳ್ಳಿ ರಥದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರವನ್ನಿಟ್ಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಅಲ್ಲದೇ ಕಾರ್ಯಕ್ರಮದಲ್ಲಿ 3 ಸಾವಿರ ಮಂದಿಗೆ ಹೋಳಿಗೆ ಊಟ ಸಿದ್ಧಪಡಿಸಲಾಗಿತ್ತು. ಶಾಸಕ ಬಿ.ಹರ್ಷವರ್ಧನ್ ಸಾರ್ವಜನಿಕರೊಂದಿಗೆ ಕುಳಿತು ಊಟ ಮಾಡಿದರು.

ಸಾಹಿತಿ ಮಹದೇವಸ್ವಾಮಿ ಪ್ರಾಸ್ತಾವಿಕ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್ ಉದ್ಘಾಟನಾ ಭಾಷಣ ಮಾಡಿದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮೈಸೂರಿನ ಯುವರಾಜ ಕಾಲೇಜಿನ ಪ್ರಾಂಶುಪಾಲೆ ಡಾ.ಯಶೋಧ, ಡಿವೈಎಸ್‌ಪಿ ಗೋವಿಂದರಾಜು, ಮುಖಂಡರಾದ ಸುಬ್ಬಣ್ಣ, ಬಿ.ಎನ್.ರಾಮು, ಬಸವರಾಜು, ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್, ಎಂ.ಪುಟ್ಟಸ್ವಾಮಿ, ಎಂ.ವಿ.ಬಸವರಾಜಪ್ಪ, ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ಎಂ.ಎಲ್. ನಾಗಣ್ಣ, ಪುಟ್ಟಬುದ್ಧಿ, ಕೇಬಲ್ ಶಿವು, ಮರಿದಾಸಯ್ಯ, ಗ್ರಾಪಂ ಸದಸ್ಯ ಪಾಪ, ದಸಂಸ ತಾಲೂಕು ಸಂಯೋಜಕ ಕೃಷ್ಣ ಸೇರಿದಂತೆ ಇತರರಿದ್ದರು.

ನೂರು ವರ್ಷ ಕಳೆದರೂ ಸಂವಿಧಾನ ಬದಲಾವಣೆ ಅಸಾಧ್ಯ

ಅಂಬೇಡ್ಕರ್, ಬಾಬೂಜಿ ಜಯಂತಿಯಲ್ಲಿ ಕೇಂದ್ರ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ



ಹೆಚ್.ಡಿ.ಕೋಟೆ, ಏ.29(ಮಂಜು)– ನೂರು ವರ್ಷ ಕಳೆದರೂ, ಯಾರಿಂದಲೂ ಬಲಿಷ್ಠ ಭಾರತದ ಸಂವಿಧಾನ ಬದಲಾವಣೆ ಮಾಡಲು ಸಾಧ್ಯವಿಲ್ಲ. ಅದಕ್ಕೆ ನಾವು ಅವಕಾಶ ನೀಡುವುದಿಲ್ಲ ಎಂದು ಕೇಂದ್ರ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಆವರಣದಲ್ಲಿ ತಾಲೂಕು ಬಾಬು ಜಗಜೀವನ್ ರಾಂ ವಿಚಾರ ವೇದಿಕೆ ವತಿಯಿಂದ ನಡೆದ ಡಾ.ಬಾಬು ಜಗಜೀವನ್ ರಾಂ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನವನ್ನು ಕರಾರುವಕ್ಕಾಗಿ ಬರೆದು ದೇಶಕ್ಕೆ ಸಮರ್ಪಿಸಿದರೆ ಅದನ್ನು ಯಥಾವತ್ತಾಗಿ ಜಾರಿಗೆ ತಂದವರು ಬಾಬು ಜಗಜೀವನ ರಾಂ. ಸಂವಿಧಾನ ಭಾರತದ ಶ್ರೇಷ್ಠ ಗ್ರಂಥ. ಅದು ಕೇವಲ ಒಂದು ವರ್ಗ, ಒಂದು ಸಮುದಾಯಕ್ಕೆ ಸಂಬಂಧಿಸಿದ್ದಲ್ಲ. ದೇಶದ ಪ್ರತಿ ಪ್ರಜೆಗೂ ಸಂಬಂಧಿಸಿದ್ದು ಎಂದರು.

ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಂ ದಲಿತ ಸಮುದಾಯದ ಎರಡು ಕಣ್ಣುಗಳಿದ್ದಂತೆ. ಮಹಾತ್ಮ ಗಾಂಧಿ, ಡಾ.ಬಿ.ಆರ್.ಅಂಬೇಡ್ಕರ್, ಬಾಬು ಜಗ ಜೀವನ್ ರಾಂ ಅವರ ಕನಸುಗಳನ್ನು ನನಸು ಮಾಡುವ ಕೆಲಸವನ್ನು ತಳ ಸಮುದಾಯದವರು ಮಾಡಬೇಕು ಎಂದರು. ದೇಶದಲ್ಲಿ ಕೇವಲ ಪರಿಶಿಷ್ಟ ಜಾತಿ, ವರ್ಗದವರು ಮಾತ್ರ ತುಳಿತಕ್ಕೆ ಒಳಗಾಗಿಲ್ಲ. ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗ ಸೇರಿದಂತೆ ಎಲ್ಲಾ ಸಮುದಾಯದವರು ಕೂಡ ತುಳಿತಕ್ಕೆ ಒಳಗಾಗಿದ್ದಾರೆ. ಹಾಗಾಗಿ ಎಲ್ಲಾ ಸಮುದಾಯಕ್ಕೂ ಆರ್ಥಿಕ, ಸಾಮಾಜಿಕ ಸಮಾನತೆ ಸಿಗುವ ವರೆಗೂ ಮೀಸಲಾತಿ ಜಾರಿಯಲ್ಲಿರಬೇಕು ಎಂದರು.

ಬಾಬು ಜಗಜೀವನ್ ರಾಂ ಅವರಿಗೆ ಈ ದೇಶದ ಪ್ರಧಾನಿ ಆಗುವ ಎಲ್ಲಾ ಅರ್ಹತೆ ಇದ್ದರೂ ಕೂಡ ಸಾಧ್ಯವಾಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಅವರು, ಹೋರಾಟ ಮಾಡುವ ನಮ್ಮ ಸಮುದಾಯದ ನಾಯಕರು ಸನ್ಮಾರ್ಗದಲ್ಲಿ ನಡೆಯಬೇಕು ಎಂದರು.

ಮಾಜಿ ಸಂಸದ ಆರ್.ಧ್ರುವ ನಾರಾಯಣ್ ಮಾತನಾಡಿ, ಪ್ರತಿಭೆ ಎಂಬುದು ಯಾರೊಬ್ಬರ ಸ್ವತ್ತಲ್ಲ. ಹಾಗಾಗಿ ನಿಮ್ಮ ಮಕ್ಕಳಿಗೆ ಉನ್ನತ ಮಟ್ಟದ ಶಿಕ್ಷಣ ನೀಡಿ ಎಂದು ಕರೆ ನೀಡಿದರು. ಕೋಡಿಹಳ್ಳಿ ಆದಿಜಾಂಬವ ಮಹಾ ಸಂಸ್ಥಾನ ಮಠದ ಷಡಕ್ಷರ ಮುನಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ಹರಳಯ್ಯ ಮಠದ ಗುರುರುದ್ರಪ್ಪ ಹರಳಯ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಚಿಕ್ಕಮಾದು, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅರಣ್ಯ ಮತ್ತು ವಸತಿ ವಿಹಾರ ಧಾಮಗಳ ಅಧ್ಯಕ್ಷ ಎಂ.ಅಪ್ಪಣ್ಣ, ಮಾಜಿ ಶಾಸಕ ಚಿಕ್ಕಣ್ಣ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಮುನಿರಾಜ್, ಮುಖಂಡರಾದ ಪಿ.ನಾಗರಾಜು, ತಿಮ್ಮಯ್ಯ, ನಿಂಗರಾಜು, ಪರಶಿವಮೂರ್ತಿ, ಶಿವಯ್ಯ, ನಾಗರಾಜು, ಶಾಂತಮ್ಮ, ಸಣ್ಣತಾಯಮ್ಮ, ಚಲುವರಾಜು, ಶಿವರಾಜು, ರೂಪ, ಬೆಟ್ಟಸ್ವಾಮಿ, ಮಹದೇವು ಇದ್ದರು.

ಎಲ್ಲಾ ರೈತರ ರಾಗಿ ಖರೀದಿಗೆ ಶಾಸಕ ಮಹದೇವ್ ಅಧಿಕಾರಿಗಳಿಗೆ ತಾಕೀತು



ಬೆಟ್ಟದಪುರ, ಏ.29 (ಶಿವದೇವ್)– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ರಾಗಿ ಖರೀದಿ ಕೇಂದ್ರದಲ್ಲಿ ನಿಗದಿತ ಖರೀದಿ ದಾಸ್ತಾನು ಪೂರ್ಣಗೊಂಡಿದೆ ಎಂದು ರೈತರ ನೋಂದಣಿಯನ್ನು ಸ್ಥಗಿತ ಮಾಡಿದ್ದರಿಂದ ಆಕ್ರೋಶಗೊಂಡ ರೈತರು ಶಾಸಕರಿಗೆ ದೂರವಾಣಿ ಕರೆ ಮಾಡಿ, ಸಮಸ್ಯೆಗಳನ್ನು ತೋಡಿಕೊಂಡರು.

ಬೆಟ್ಟದಪುರ ಎಪಿಎಂಸಿ ರಾಗಿ ಖರೀದಿ ಕೇಂದ್ರಕ್ಕೆ ತಕ್ಷಣ ಭೇಟಿ ನೀಡಿ, ರೈತರ ಅಹವಾಲು ಗಳನ್ನು ಸ್ವೀಕರಿಸಿದ ಶಾಸಕ ಕೆ. ಮಹದೇವ್, ತಹಸೀಲ್ದಾರ್ ಮತ್ತು ಆಹಾರ ಇಲಾಖೆಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಇದುವರೆಗೆ ಎಷ್ಟು ಜನರು ನೋಂದಣಿ ಮಾಡಿದ್ದಾರೆ ಎಂದು ಮಾಹಿತಿಯನ್ನು ಏಕೆ ನೀಡಲಿಲ್ಲ ಎಂದು ಪ್ರಶ್ನಿಸಿದರು. ರೈತರೆಲ್ಲರ ರಾಗಿಯನ್ನು ಖರೀದಿ ಮಾಡುವಂತೆ ಮೇಲಧಿಕಾರಿಗಳು ಹಾಗೂ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಲಾಗುವುದು. ತಕ್ಷಣವೇ ಪುನಃ ನೋಂದಣಿ ಕಾರ್ಯವನ್ನು ಮುಂದುವರೆಸಿ, ಎಷ್ಟು ರೈತರು ಉಳಿದಿದ್ದಾರೆ ಎಂಬುದನ್ನು ತಿಳಿಸಬೇಕು ಎಂದು ಹೇಳಿದರು. ಶಾಸಕರು ದೂರವಾಣಿ ಮೂಲಕ ಕೃಷಿ ಸಚಿವರು, ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳಿಗೆ ಕರೆ ಮಾಡಿ ರೈತರಿಗೆ ಆಗಿರುವ ತೊಂದರೆಗಳನ್ನು ವಿವರಿಸಿದರು. ಈ ಕುರಿತು ಸರ್ಕಾರದ ಗಮನಕ್ಕೆ ತಂದು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು.

ತಹಸೀಲ್ದಾರ್ ಚಂದ್ರಮೌಳಿ, ಆಹಾರ ಇಲಾಖೆಯ ಸ್ವಾಮಿ, ಸುರೇಶ್, ಖರೀದಿ ಕೇಂದ್ರದ ಅಧಿಕಾರಿ ರವಿ, ಪೊಲೀಸ್ ಪಿಎಸ್ಐ ಪ್ರಕಾಶ್ ಎಂ.ಎತ್ತಿನಮನಿ, ರೈತ ಮುಖಂಡರಾದ ಭುವನಹಳ್ಳಿ ಗಿರೀಶ್, ಬಿಸಿ ರಾಜೇಂದ್ರ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಬಿ.ಎಸ್. ಮಹದೇವಪ್ಪ ಇತರರಿದ್ದರು.

ಜೆಡಿಎಸ್ ಜಿಲ್ಲಾ ಮಹಿಳಾ ಘಟಕಕ್ಕೆ ನಂದಿನಿ ಪ್ರಧಾನ ಕಾರ್ಯದರ್ಶಿ



ಭೇರ್ಯ, ಏ.29– ಮೈಸೂರು ಜಿಲ್ಲಾ ಜೆಡಿಎಸ್ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಸಾಲಿಗ್ರಾಮ ತಾಲೂಕಿನ ಹರದನಹಳ್ಳಿ ಗ್ರಾಪಂ ಅಧ್ಯಕ್ಷೆ ನಂದಿನಿ ರಮೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಬೃಂದಾ ಕೃಷ್ಣೇಗೌಡ ತಿಳಿಸಿದ್ದಾರೆ. ಇದೇ ವೇಳೆ ಮೈಸೂರು ಜಿಲ್ಲಾ ಜೆಡಿಎಸ್ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ನೇಮಕವಾದ ನಂದಿನಿ ರಮೇಶ್ ಅವರನ್ನು ಶಾಸಕ ಸಾ.ರಾ.ಮಹೇಶ್ ಅಭಿನಂದಿಸಿದರು.

ನಾಗೇಶ್ ನಿಧನ



ಹುಣಸೂರು, ಏ.29(ಕೆಕೆ)– ನಗರದ ನಡುಬೀದಿ ನಿವಾಸಿ ನಾಗೇಶ್ (57) ಗುರುವಾರ ರಾತ್ರಿ ನಿಧನರಾದರು. ಮೃತರು ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ನಗರದ ರುದ್ರಭೂಮಿಯಲ್ಲಿ ನೆರವೇರಿತು.

ಪ್ರಜೆಯ ಸಾರ್ವಭೌಮತ್ವ ಎತ್ತಿ ಹಿಡಿದು, ಪ್ರಜಾಪ್ರಭುತ್ವ ಪ್ರತಿಪಾದಿಸುವ

ಸಂವಿಧಾನ ಭಾರತೀಯರ ಸರ್ವಶ್ರೇಷ್ಠ ಪವಿತ್ರ ಗ್ರಂಥ

ಅಂಬೇಡ್ಕರ್ ಜಯಂತಿಯಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ತಿ.ನರಸೀಪುರ ಏ.29(ಎಸ್‌ಕೆ)– ದೇಶದ ಎಲ್ಲಾ ಧರ್ಮಗಳು ಸಾಂವಿಧಾನಿಕ ನಿರ್ದೇಶನದ ತತ್ವಗಳಡಿ ಕಾರ್ಯ ನಿರ್ವಹಿಸಬೇಕು. ಪ್ರತಿಯೊಬ್ಬ ಪ್ರಜೆಯ ಸಾರ್ವಭೌಮತ್ವ ಎತ್ತಿ ಹಿಡಿದು, ಪ್ರಜಾಪ್ರಭುತ್ವವನ್ನು ಪ್ರತಿಪಾದಿಸುವ ಸಂವಿಧಾವನೇ ಭಾರತೀಯರ ಸರ್ವಶ್ರೇಷ್ಠ ಪವಿತ್ರ ಗ್ರಂಥ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಾಲೂಕಿನ ಬಣವೆ ಗ್ರಾಮದಲ್ಲಿ ಶುಕ್ರವಾರ ನಡೆದ ಡಾ.ಬಿ.ಆರ್.ಅಂಬೇಡ್ಕರ್ 131ನೇ ಜಯಂತಿಯನ್ನು ಉದ್ಘಾಟಿಸಿ, ನಿವೃತ್ತ ಅಧಿಕಾರಿಗಳು ಹಾಗೂ ಸಾಧಕರನ್ನು ಸನ್ಮಾನಿಸಿ ಮಾತನಾಡಿದ ಅವರು, ಸಂವಿಧಾನಕ್ಕಿಂತ ಯಾರೂ ದೊಡ್ಡವರಲ್ಲ. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶರಾಗಿದ್ದ ಎಂ.ಸಿ.ಚಾವ್ಲಾ ಅವರು ಹಿಂದೂವಾಗಲೀ, ಕ್ರೈಸ್ತನಾಗಿರಲೀ ಅಥವಾ ಮುಸ್ಲಿಮನಾಗಲೀ ಭಾರತೀಯರಾಗಿ ಹಕ್ಕುಗಳನ್ನು ಅನುಭವಿಸುವಾಗ ಅಂಬೇಡ್ಕರ್ ಅವರನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಬೇಕು ಎಂದು ಹೇಳಿದ್ದರು ಎಂದರು.

ವಾಲ್ಮೀಕಿ ಗುರುಪೀಠದ ಶ್ರೀಗಳು ಜನಸಂಖ್ಯೆಗನುಗುಣವಾಗಿ ಮೀಸಲಾತಿ ನೀಡಬೇಕೆಂದು ಉಪವಾಸ ಸತ್ಯಾಗ್ರಹ ಕುಳಿತಿರುವುದಕ್ಕೆ ಅಂಬೇಡ್ಕರ್ ಪ್ರೇರಣೆಯಾಗಿದ್ದಾರೆ. ದೇಶವಲ್ಲದೆ ಪ್ರಪಂಚದ ಹಲವೆಡೆ ಅಂಬೇಡ್ಕರ್ ಅವರನ್ನು ಸ್ಮರಿಸಲಾಗುತ್ತಿದೆ. ಊರು ಕೇರಿಗಲ್ಲ, ಪ್ರತಿಯೊಂದು ಹಳ್ಳಿಗಳ ಎಲ್ಲಾ ಬೀದಿಗಳನ್ನು ಬಾಬಾ ಸಾಹೇಬರು ಪ್ರವೇಶಿಸಿದ್ದಾರೆ. ಇಂತಹ ಕಾಲಘಟ್ಟದಲ್ಲಿಯೂ ಕೋಮುವಾದ ಮತ್ತು ಜಾತಿವಾದ ಸಂವಿಧಾನವನ್ನು ದುರ್ಬಲಗೊಳಿಸುವ ಪ್ರಯತ್ನ ಮಾಡುತ್ತಿರುವುದರ ಬಗ್ಗೆಯೂ ಎಚ್ಚರ ವಹಿಸಬೇಕು ಎಂದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಇತಿಹಾಸಕಾರ, ಜೇತವನ ಬುದ್ಧವಿಹಾರದ ಮನೋರಕ್ಕಿತಾ ಭಂತೇಜಿ ಆಶೀರ್ವಚನ ನೀಡಿದರು. ಸಮಾರಂಭದಲ್ಲಿ ಗ್ರಾಮದ ನಿವೃತ್ತ ಅಧಿಕಾರಿಗಳು, ನೌಕರರು ಹಾಗೂ ವಿಶೇಷ ಸಾಧನೆ ಗೈದ ಸಾಧಕರಿಗೆ ಸನ್ಮಾನಿಸಲಾಯಿತು.

ತಾಪಂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಗಣೇಶ್, ಮಾಜಿ ಉಪಾಧ್ಯಕ್ಷ ಪ್ರಸನ್ನ, ಗ್ರಾಪಂ ಸದಸ್ಯರಾದ ದುಂಡುಮಾದಯ್ಯ, ಬಿ.ಎಂ.ಚೇತನ್, ಚಂದ್ರಮ್ಮ ವಸಂತ, ಶೆಟ್ಟಿಹಳ್ಳಿ ಗ್ರಾಪಂ ಅಧ್ಯಕ್ಷ ನಾಗರಾಜು, ಮಾಜಿ ಸದಸ್ಯ ಶಿವಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ. ಬಸವರಾಜು, ಪಿಕಾರ್ಡ್ ಬ್ಯಾಂಕ್ ಉಪಾಧ್ಯಕ್ಷ ಲಿಂಗರಾಜು, ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಬಸವರಾಜು, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಧರ, ಮುಖಂಡರಾದ ಶಂಭಯ್ಯ, ಮಾದೇಶ, ಮಲ್ಲೇಶ, ಶಿವಮೂರ್ತಿ, ಶಿವಶಂಕರ್, ಮಹೇಂದ್ರ ಸೇರಿದಂತೆ ಗ್ರಾಮದ ಯಜಮಾನರು, ಮುಖಂಡರು, ಯುವಕರ ಸಂಘದ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಹಾಜರಿದ್ದರು.

> 6 ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಅಂಬೇಡ್ಕರ್ ಅಧ್ಯಯನ ಮಾಡದ ವಿಷಯಗಳಿಲ್ಲ. ಪ್ರತಿಯೊಂದು ಹಂತದಲ್ಲಿಯೂ ನೋವು ಅನುಭವಿಸಿ, ಕಠಿಣ ಪರಿಶ್ರಮದ ಮೂಲಕ ಹಲವು ಸವಾಲುಗಳನ್ನು ಮೆಟ್ಟಿ, ಶೈಕ್ಷಣಿಕ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆಗೈದು, ನಮ್ಮೆಲ್ಲರಿಗೂ ದಾರಿದೀಪವಾಗಿದ್ದಾರೆ. ಅಂಬೇಡ್ಕರ್ ಅವರ ತ್ಯಾಗದ ಗುಣವನ್ನು ನಾವೆಲ್ಲರೂ ಮೈಗೂಡಿಸಿಕೊಂಡು ಸಾಮಾಜಿಕವಾಗಿ ಸಮಾನತೆಯ ಬದುಕು ನಡೆಸೋಣ.
> –ಸುನೀಲ್ ಬೋಸ್, ಕಾಂಗ್ರೆಸ್ ಮುಖಂಡ

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 7ರಲ್ಲಿ

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೆಜಿಎಫ್ 2 (ಕ): ಬೆ.11ಕ್ಕೆ, ಮ.2.30ಕ್ಕೆ, ಸಂ.6.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ಮೇಲೊಬ್ಬ ಮಾಯಾವಿ (ಕ): ಬೆ.10.30ಕ್ಕೆ, ಹಾಸ್ಟೆಲ್ (ತ): ಮ.1.20ಕ್ಕೆ, ಶೋಕಿವಾಲ (ಕ): ಸಂ.4.10ಕ್ಕೆ, ಹೀರೊಪಂತಿ 2(ಹಿಂ): ಸಂ.6.55ಕ್ಕೆ, ಜನಗಣಮನ (ಮ): ರಾ.9.50ಕ್ಕೆ.
ಸ್ಕ್ರೀನ್ 3	ರನ್‌ವೇ 34 (ಹಿಂ): ಬೆ.9.55ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಹೀರೊಪಂತಿ 2(ಹಿಂ): ಮ.1.25ಕ್ಕೆ, ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಕಾತುವಾಕುಲ ರೆಂಡು ಕಾದಲ್ (ತ): ಬೆ.10ಕ್ಕೆ, ಮ.1ಕ್ಕೆ, ಆಚಾರ್ಯ (ತೆ): ಸಂ.4.05ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕೆಜಿಎಫ್ 2 (ಕ): ಬೆ.10.30ಕ್ಕೆ, ಮ.2.10ಕ್ಕೆ, ಸಂ.5.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ರನ್‌ವೇ 34 (ಹಿಂ): ಬೆ.9.45ಕ್ಕೆ, ಮ.3.50ಕ್ಕೆ, ರಾ.10ಕ್ಕೆ, ಹೀರೊಪಂತಿ 2 (ಹಿಂ): ಮ.12.50ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಹೀರೊಪಂತಿ 2 (ಹಿಂ): ಬೆ.9.40ಕ್ಕೆ, ಕಾತುವಾಕುಲ ರೆಂಡು ಕಾದಲ್ (ತ): ಮ.12.35ಕ್ಕೆ, ಆಚಾರ್ಯ (ತೆ): ಮ.3.55ಕ್ಕೆ, ರಾ.9.50ಕ್ಕೆ, ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ (ಕ): ರಾ.7.10ಕ್ಕೆ.
ಸ್ಕ್ರೀನ್ 4	ಆಚಾರ್ಯ (ತೆ): ಬೆ.9.30ಕ್ಕೆ, ಕೆಜಿಎಫ್ 2 (ಕ): ಮ.12.35ಕ್ಕೆ, ಮೇಲೊಬ್ಬ ಮಾಯಾವಿ (ಕ): ಮ.3.55ಕ್ಕೆ, ಶೋಕಿವಾಲ (ಕ): ಸಂ.6.40ಕ್ಕೆ, ಕಾತುವಾಕುಲ ರೆಂಡು ಕಾದಲ್ (ತ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಜಿ (ಕ): ಬೆ.11ಕ್ಕೆ, ರನ್‌ವೇ 34 (ಹಿಂ): ಮ.1ಕ್ಕೆ, ಮ.3.55ಕ್ಕೆ, ಸಂ.6.40ಕ್ಕೆ, ಕಾತುವಾಕುಲ ರೆಂಡು ಕಾದಲ್ (ತ): ರಾ.9.30ಕ್ಕೆ.
ಸ್ಕ್ರೀನ್ 2	ಶೋಕಿವಾಲ (ಕ): ಬೆ.10.45ಕ್ಕೆ, ಸಂ.4.10ಕ್ಕೆ, ಹೀರೊಪಂತಿ 2(ಹಿಂ): ಮ.1.20ಕ್ಕೆ, ಸಂ.6.50ಕ್ಕೆ, ರನ್‌ವೇ 34 (ಹಿಂ): ರಾ.9.40ಕ್ಕೆ.
ಸ್ಕ್ರೀನ್ 3	ಕೆಜಿಎಫ್ 2 (ಕ): ಬೆ.10.45ಕ್ಕೆ, ಮ.1.55ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 4	ಹೀರೊಪಂತಿ 2(ಹಿಂ): ಬೆ.10.30ಕ್ಕೆ, ಕಾತುವಾಕುಲ ರೆಂಡು ಕಾದಲ್ (ತ): ಮ.1.15ಕ್ಕೆ, ಸಂ.6.40ಕ್ಕೆ, ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ (ಕ): ಸಂ.4.20ಕ್ಕೆ, ಶೋಕಿವಾಲ (ಕ): ರಾ.9.45ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್ (ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆಚಾರ್ಯ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಹೀರೋಪಂತಿ –2 (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಆಚಾರ್ಯ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕೆಜಿಎಫ್–2(ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಾತ್ತು ವಾಲತ್ತಲ ರೆಂಡು ಕಾದಲ್ (ತ)	4 ಪ್ರದರ್ಶನಗಳು
ಸಂಗಂ	
ಶೋಕಿವಾಲಾ (ಕ)	4 ಪ್ರದರ್ಶನಗಳು
ಲಿಡೋ	
ಆಚಾರ್ಯ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಹೀರೋಪಂತಿ –2 (ಹಿ)	4 ಪ್ರದರ್ಶನಗಳು


ಪಂಜಾಬ್ ವಿರುದ್ಧ ರಾಹುಲ್ ಪಡೆಗೆ ಜಯ

ಮುಂಬೈ, ಏ.29– ಬೌಲರ್‌ಗಳ ಶಿಸ್ತುಬದ್ಧ ಬೌಲಿಂಗ್ ಪ್ರದರ್ಶನದ ನೆರವಿನಿಂದ ಲಕ್ನೋ ಸೂಪರ್ ಜೈಂಟ್ಸ್ ಪಂಜಾಬ್ ಕಿಂಗ್ಸ್ ವಿರುದ್ಧ 20 ರನ್ ಅಂತರದ ಗೆಲುವು ಸಾಧಿಸಿದೆ.



ಇಲ್ಲಿನ ಎಂಸಿಎ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 153ರನ್ ಗಳಿಸಿತು. ತಂಡದ ಪರ ಕ್ವಿಂಟನ್ ಡಿಕಾಕ್ 46, ದೀಪಕ್ ಹೂಡಾ 34 ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ನಿರೀಕ್ಷಿತ ಪ್ರದರ್ಶನ ಮೂಡಿ ಬರಲಿಲ್ಲ. ತಂಡದ ಪ್ರಮುಖ ಬ್ಯಾಟ್ಸ್‌ಮನ್‌ಗಳು ಒಂದಂಕಿ ಮೊತ್ತಕ್ಕೆ ಔಟಾಗುವ ಮೂಲಕ ಪೆವಿಲಿಯನ್ ಪರೇಡ್ ನಡೆಸಿದರು. ಪಂಜಾಬ್ ಪರ ಕಗಿಸೊ ರಬಾಡ 4, ರಾಹುಲ್ ಚಹರ್ 2, ಸಂದೀಪ್ ಶರ್ಮಾ 1 ವಿಕೆಟ್ ಒಪ್ಪಿಸಿದರು. ಲಕ್ನೋ ನೀಡಿದ 154 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಪಂಜಾಬ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 133 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು. ತಂಡದ ಪರ ನಾಯಕ ಮಯಾಂಕ್ ಅಗರ್ವಾಲ್ 25, ಜಾನಿ ಬೈರ್ಸ್ಟೋವ್ 32, ಲಿಯಾಮ್ ಲಿವಿಂಗ್ ಸ್ಟೋನ್ 18, ರಿಷಿ ಧವನ್ 21 ರನ್ ಗಳಿಸಿದರು. ಲಕ್ನೋ ಪರ ಮೊಹ್ಸಿನ್ ಖಾನ್ 3, ಚಮೀರಾ, ಕೃನಾಲ್ ಪಾಂಡ್ಯ ತಲಾ 2, ರವಿ ಬಿಷ್ಣೋಯ್ 1 ವಿಕೆಟ್ ಕಬಳಿಸಿದರು. ಲಕ್ನೋ ಪರ ಕೃನಾಲ್ ಪಾಂಡ್ಯ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಹುಣಸೂರು ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ನರಸಿಂಹ ಆಯ್ಕೆ



ಹುಣಸೂರು, ಏ.29(ಕೆಕೆ)– ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಅಧ್ಯಕ್ಷರಾಗಿ ಹೊಸೂರು ಕೊಡಗು ಕಾಲೋನಿಯ ಹಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕ ನರಸಿಂಹ ಆಯ್ಕೆಯಾಗಿದ್ದಾರೆ.

ಏ.20ರಂದು ನಗರದ ಗುರುಭವನದಲ್ಲಿ ನಡೆದ ಚುನಾವಣೆಯಲ್ಲಿ ಇವರು ಸಮೀಪ ಪ್ರತಿಸ್ಪರ್ಧಿ ಚನ್ನವೀರಪ್ಪ ಅವರ ವಿರುದ್ಧ ಒಂದು ಮತಗಳ ಅಂತರದಲ್ಲಿ ಜಯ ಗಳಿಸಿದರು. ಕೆಲವು ದಿನಗಳ ಹಿಂದೆ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಚುನಾವಣೆ ನಡೆದು 25 ಜನ ನಿರ್ದೇಶಕರು ಆಯ್ಕೆಯಾಗಿದ್ದರು. ಅಧ್ಯಕ್ಷರ ಆಯ್ಕೆಗಾಗಿ ನಡೆದ ಚುನಾವಣೆಯಲ್ಲಿ ಚನ್ನವೀರಪ್ಪ 12 ಮತ ಪಡೆದರೆ, ನರಸಿಂಹ ಅವರು 13 ಮತ ಪಡೆಯುವ ಮೂಲಕ ಜಯಗಳಿಸಿದರು. ಚುನಾವಣಾ ವೀಕ್ಷಕರಾಗಿ ಜಿಲಾಧ್ಯಕ್ಷ ಕೆ.ಬಿ.ಸೋಮಶೇಖರ್, ರಾಜ್ಯ ವೀಕ್ಷಕರಾಗಿ ಸಹಕಾರ್ಯದರ್ಶಿ ಕೊಡಗಿನ ಚೇತನ್ ಕಾರ್ಯ ನಿರ್ವಹಿಸಿದರು.

ಸೋಮವಾರದಿಂದಲೇ 6–12 ವರ್ಷದ ಮಕ್ಕಳಿಗೆ ಲಸಿಕೆಗೆ ಸಿದ್ಧತೆ



ಬೆಂಗಳೂರು, ಏ.29– 6–12 ವರ್ಷದ ಮಕ್ಕಳಿಗೆ ಸೋಮವಾರದಿಂದಲೇ ಲಸಿಕೆ ನೀಡಲು ನಾವು ತಯಾರಿ ಮಾಡಿಕೊಳ್ಳುತ್ತೇವೆ ಎಂದು ಆರೋಗ್ಯ ಸಚಿವ ಕೆ.ಸುಧಾಕರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಡೀ ರಾಜ್ಯದಲ್ಲಿ ದೊಡ್ಡ ಮಟ್ಟದ ಅಭಿಯಾನ ಮಾಡುತ್ತೇವೆ. 6–12 ವರ್ಷದ ಮಕ್ಕಳಿಗೆ ಶೀಘ್ರದಲ್ಲಿ ಲಸಿಕೆ ನೀಡುವ ವಿಚಾರವಾಗಿ ಸಿಎಂ ಕೂಡಾ ಈಗಾಗಲೇ ಈ ಬಗ್ಗೆ ನನ್ನ ಜೊತೆ ಚರ್ಚೆ ಮಾಡಿದ್ದಾರೆ ಎಂದರು.

ಈ ಬಗ್ಗೆ ಶಿಕ್ಷಣ ಇಲಾಖೆ ಸಚಿವರು, ಅಧಿಕಾರಿಗಳ ಜೊತೆ ಮಾತನಾಡುತ್ತೇನೆ. ಬೇಸಿಗೆ ರಜೆ ಪ್ರಾರಂಭ ಆಗಿದೆ ಹೀಗಾಗಿ ಶಾಲೆಯಲ್ಲಿ ಮಾಡಬೇಕಾ ಆಯಾ ಇನ್‌ಸ್ಟಿಟ್ಯೂಷನ್‌ನಲ್ಲಿ ಮಾಡಬೇಕಾ ಎಂದು ಚರ್ಚೆ ಮಾಡುತ್ತೇವೆ. ಸೋಮವಾರದಿಂದಲೇ ಲಸಿಕೆ ನೀಡಲು ನಾವು ತಯಾರಿ ಮಾಡಿಕೊಳ್ಳುತ್ತಿದ್ದೇವೆ. 6–12 ವರ್ಷದ ಮಕ್ಕಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿ ನೋಡಿಕೊಂಡು ಲಸಿಕೆ ಉಚಿತನಾ ಅಂತ ನಿರ್ಧಾರ ಮಾಡುತ್ತೇವೆ ಎಂದರು.

ಬೆಂಗಳೂರಿನಲ್ಲಿ ಕೇಸ್ ದಿನೇ ದಿನೆ ಹೆಚ್ಚಳ ಆಗುತ್ತಿರುವ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಸದ್ಯಕ್ಕೆ ಯಾರು ಆತಂಕ ಪಡುವ ಅವಶ್ಯಕತೆ ಇಲ್ಲ. ದೊಡ್ಡ ಮಟ್ಟದ ಕೇಸ್ ಹೆಚ್ಚಳ ಆಗಿಲ್ಲ. ಜನರು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದರು. ಲಸಿಕೆ ಮತ್ತು ಮಾಸ್ಕ್ ಕಡ್ಡಾಯವಾಗಿ ಹಾಕಬೇಕು. ಸದ್ಯಕ್ಕೆ ಆತಂಕ ಪಡುವ ಸ್ಥಿತಿ ರಾಜ್ಯದಲ್ಲಿ ಇಲ್ಲ. ಅನಗತ್ಯವಾಗಿ ಭಯ, ಆತಂಕಕ್ಕೆ ಒಳಗಾಗುವ ಅವಶ್ಯಕತೆ ತಕ್ಷಣಕ್ಕೆ ಇಲ್ಲ. ಬೂಸ್ಟರ್ ಡೋಸ್‌ನ್ನು ತೆಗೆದುಕೊಳ್ಳುತ್ತಿದ್ದಾರೆ. 2–3 ದಿನಗಳಿಂದ ಬೂಸ್ಟರ್ ಡೋಸ್ ಪಡೆಯುವವರ ಸಂಖ್ಯೆ ಹೆಚ್ಚಾಗಿದೆ. ಜನರು ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಮನವಿ ಮಾಡಿದರು. ಒಮಿಕ್ರಾನ್ ಹೊಸ ತಳಿ ಪತ್ತೆ ವಿಚಾರವಾಗಿ ಮಾತನಾಡಿ, ಈಗಾಗಲೇ ಲ್ಯಾಬ್‌ಗೆ ಸ್ಯಾಂಪಲ್ ಕಳುಹಿಸಲಾಗಿದೆ ಇಂದು ವರದಿ ಬರಬಹುದು ಎಂದರು.